ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 10 ಬುಧವಾರ 2026

47

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ- ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 55 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಪ್ರಧಾನಿ ಮೋದಿ ದಾಖಲೆ!

ಜವಾಹರಲಾಲ್ ನೆಹರು ದೀರ್ಘಾವಧಿ ಬ್ರೇಕ್

ಅಭಿನಂದನಾ ನಿರ್ಣಯ ಅಂಗೀಕಾರಕ್ಕೆ ಎನ್‌ಡಿಎ ಸಜ್ಜು

ನವದೆಹಲಿ: ದೇಶದ ಮೊದಲ ಪ್ರಧಾನಿ ಜವಾಹರ ಲಾಲ್ ನೆಹರೂ ಅವರ ಆಡಳಿತ ಅವಧಿಯ ದಾಖಲೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಮೀರಿಸಿರುವ ಕಾರಣ ಎನ್‌ಡಿಎ ಕೂಟವು ಬುಧವಾರ ಸಭೆ ನಡೆಸಿ, ಅಭಿನಂದನಾ ನಿರ್ಣಯವನ್ನು ಅಂಗೀಕರಿಸಲು ಸಜ್ಜಾಗಿದೆ.



- ಜವಾಹರಲಾಲ್ ನೆಹರು 1952 ಮೇ 13 ರಿಂದ 1964 ಮೇ 27ರವರೆಗೆ 4398 ದಿನ ನಿರಂತರವಾಗಿ ಪ್ರಧಾನಿಯಾಗಿದ್ದರು.
- ನರೇಂದ್ರ ಮೋದಿ 2014 ಮೇ 26 ರಿಂದ 2026 ಜೂನ್ 10ರವರೆಗೆ 4399 ದಿನ ನಿರಂತರವಾಗಿ ಪ್ರಧಾನಿಯಾಗಿ ಮುಂದುವರೆದಿದ್ದಾರೆ.

ಮೋದಿ ನೇತೃತ್ವದ ಬಿಜೆಪಿ ಸರ್ಕಾರವು ಕೇಂದ್ರದಲ್ಲಿ 12 ವರ್ಷಗಳ ಆಡಳಿತ ಪೂರೈಸಿದ್ದು, 4399 ದಿನಗಳ ಕಾಲ ಪ್ರಧಾನಿಯಾಗಿ ಮೋದಿ ಅವರು ಕಾರ್ಯನಿರ್ವಹಿಸಿದ್ದಾರೆ. ಈ ಮೂಲಕ ನೆಹರೂ ಅವರಿಗಿಂತ ಒಂದು ದಿನ ಹೆಚ್ಚಿಗೆ ಮೋದಿ ಅವರು ಆಡಳಿತದಲ್ಲಿ ಇದ್ದಂತಾಗಿದೆ. ಹೀಗಾಗಿ ಎನ್‌ಡಿಎ ಕೂಟದ 72-75 ನಾಯಕರ ಉಪಸ್ಥಿತಿಯಲ್ಲಿ ಸಭೆ ನಡೆಸಿ, ಅಭಿನಂದನಾ ಪ್ರಸ್ತಾವವನ್ನು ಅಂಗೀಕರಿಸಲು ನಿರ್ಧರಿಸಲಾಗಿದೆ ಎಂದು ಬಿಜೆಪಿಯ ಹಿರಿಯ ಸಚಿವರೊಬ್ಬರು ಹೇಳಿದ್ದಾರೆ.

ನೆಹರೂ ಅವರನ್ನು 1947ರಲ್ಲಿ ದೇಶದ ಪ್ರಧಾನಿಯಾಗಿ ನಾಮನಿರ್ದೇಶನ ಮಾಡಲಾಗಿತ್ತಾದರೂ ಅಂದಿನಿಂದ 1952ರವರೆಗಿನ ಅವರ ಅಧಿಕಾರದ ಅವಧಿಯನ್ನು ಬಿಜೆಪಿ ಪರಿಗಣಿಸಿಲ್ಲ. ಬದಲಿಗೆ 1952ರ ಮೇ 13ರಂದು ಚುನಾಯಿತ ಪ್ರಧಾನಿಯಾಗಿ ನೆಹರೂ ಅವರು ಅಧಿಕಾರ ವಹಿಸಿಕೊಂಡಾಗಿನಿಂದ 1964ರ ಮೇ 27ರವರೆಗಿನ ಅವರ ಅಧಿಕಾರಾವಧಿಯನ್ನು ಪರಿಗಣಿಸಿದೆ. ಇದರೊಂದಿಗೆ ಅವರು 4398 ದಿನಗಳ ಕಾಲ ಪ್ರಧಾನಿಯಾಗಿ ಕಾರ್ಯನಿರ್ವಹಿಸಿದಂತಾಗಿದೆ ಎಂದೂ ಸಚಿವರು ತಿಳಿಸಿದ್ದಾರೆ.

ಇಂದಿರಾ ಗಾಂಧಿ ಅವರು 14 ವರ್ಷಗಳ ಕಾಲ ಪ್ರಧಾನಿಯಾಗಿ ಕಾರ್ಯನಿರ್ವಹಿಸಿದ್ದರಾದರೂ ನಿರಂತರವಾಗಿ ಅಧಿಕಾರದಲ್ಲಿ ಇರಲಿಲ್ಲ ಎಂದೂ ಸಚಿವ ಹೇಳಿದ್ದಾರೆ.

ರಾಜ್ಯದ ದೇವಸ್ಥಾನಗಳಲ್ಲಿ ಇಂದು ವಿಶೇಷ ಪೂಜೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರ ಸರ್ಕಾರಕ್ಕೆ 12 ವರ್ಷಗಳು ತುಂಬಿವೆ. ಈ ಹಿನ್ನೆಲೆಯಲ್ಲಿ ಜೂ.10 ರಂದು ರಾಜ್ಯಾದ್ಯಂತ ಎಲ್ಲಾ ದೇವಸ್ಥಾನಗಳಲ್ಲಿ ಮೋದಿ ಅವರ ಆಯಸ್ಸು, ಆರೋಗ್ಯ ವೃದ್ಧಿಗಾಗಿ ಬಿಜೆಪಿ ವಿಶೇಷ ಪೂಜೆ ನೆರವೇರಿಸಲಿದೆ.

ಈ ಕುರಿತು ಮಾಹಿತಿ ಹಂಚಿಕೊಂಡಿರುವ ಬಿಜೆಪಿ, ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಚುನಾಯಿತ ಪ್ರಧಾನಿಗಳಾಗಿ ಕಳೆದ 12 ವರ್ಷಗಳಿಂದ ಪ್ರಧಾನ ಸೇವಕರಾಗಿ ಕೆಲಸ ನಿರ್ವಹಿಸಿದ್ದಾರೆ. ಹೀಗಾಗಿ, ನಾಳೆ ಇಡೀ ರಾಜ್ಯ ಮಾತ್ರವಲ್ಲದೇ ದೇಶಾದ್ಯಂತ ಎಲ್ಲಾ ದೇವಸ್ಥಾನಗಳಲ್ಲಿ ಮೋದಿ ಹೆಸರಲ್ಲಿ ಪೂಜೆ ನೆರವೇರಿಸಲಾಗುತ್ತಿದೆ. ಮಲ್ಲೇಶ್ವರಂನಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಪೂಜೆ ನೆರವೇರಿಸಲಿದ್ದಾರೆ. ಶಾಸಕ ಡಾ. ಸಿ.ಎನ್. ಅಶ್ವತ್ಥನಾರಾಯಣ್ ಉಪಸ್ಥಿತರಿರುವರು. ಗಾಂಧಿನಗರ ವಿಧಾನ ಸಭಾ ಕ್ಷೇತ್ರದಲ್ಲಿ ರಾಜ್ಯ ಉಸ್ತುವಾರಿ ಡಾ. ರಾಧಾಮೋಹನ್ ದಾಸ್ ಅಗರ್ವಾಲ್, ಮಲ್ಲೇಶ್ವರಂನಲ್ಲಿ ಸಹ ಉಸ್ತುವಾರಿ ಸುಧಾಕರ ರೆಡ್ಡಿ ಪೂಜೆ ನೆರವೇರಿಸಲಿದ್ದಾರೆ. ಬನಶಂಕರಿಯಲ್ಲಿ ವಿಪಕ್ಷ ನಾಯಕ ಆರ್.ಅಶೋಕ್ ಪೂಜೆ ಸಲ್ಲಿಸುವರು.

ಮೋದಿ ಅವರು 4,398 ದಿನಗಳ ಯಶಸ್ವಿ ಆಡಳಿತದ ಮೂಲಕ ದೇಶದ ಜನರ ಸೇವೆ ಸಲ್ಲಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಅವರ ಆಯುಸ್ಸು, ಆರೋಗ್ಯ ವೃದ್ಧಿಗಾಗಿ ಪೂಜೆ ನಡೆಸಲಾಗುತ್ತಿದೆ. ಮಾಜಿ ಸಚಿವ ಗೋಪಾಲಯ್ಯ ಅವರು ಮಹಾಲಕ್ಷ್ಮಿ ಲೇಔಟ್‌ನ ಶ್ರೀ ವೀರಾಂಜನೇಯ ದೇವಸ್ಥಾನದಲ್ಲಿ, ವಿಧಾನ ಪರಿಷತ್‌ನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಶಾಂತಿನಗರ ಕೆಂಪಮ್ಮ ದೇವಸ್ಥಾನದಲ್ಲಿ ಪೂಜೆಯಲ್ಲಿ ಭಾಗವಹಿಸುವರು.

ರಾಜ್ಯದ ಎಲ್ಲ 39 ಸಂಘಟನಾತ್ಮಕ ಜಿಲ್ಲೆಗಳಲ್ಲಿ ಕೋರ್ ಕಮಿಟಿ ಸದಸ್ಯರು, ಸಂಸದರು, ಶಾಸಕರು, ವಿಧಾನ ಪರಿಷತ್ ಸದಸ್ಯರು, ಮಾಜಿ ಸಚಿವರು ವಿಶೇಷ ಪೂಜೆಯಲ್ಲಿ ಭಾಗವಹಿಸಲಿದ್ದಾರೆ.

ಒಂದೆಡೆ ಖಾಸಗಿ ಫೈನಾನ್ಸ್ ಸಿಬ್ಬಂದಿ ಕಿರುಕುಳ, ಮತ್ತೊಂದೆಡೆ 'ಶಕ್ತಿ'ಯಿಂದ ವ್ಯಾಪಾರ ಕುಸಿತದ ಕಳವಳ

ಪತ್ನಿ, ಪುತ್ರನ ಕೊಂದು ಬಟ್ಟೆ ವ್ಯಾಪಾರಿ ಆತ್ಮಹತ್ಯೆ

ಮಂಡ್ಯದ ನೆಹರು ನಗರದಲ್ಲಿ ಭೀಕರ ಘಟನೆ


ಪ್ರಭಾಕರ್


ಜ್ಯೋತಿ


ಸಂತೋಷ್

ಮಂಡ್ಯ, ಜೂ.9-ಒಂದೆಡೆ ಕೊಟ್ಟಿರುವ ಸಾಲ ವಾಪಸ್ ನೀಡುವಂತೆ ಖಾಸಗಿ ಫೈನಾನ್ಸ್ ಸಿಬ್ಬಂದಿ ಕಿರುಕುಳ, ಮತ್ತೊಂದೆಡೆ 'ಶಕ್ತಿ'ಯಿಂದ ಕುಸಿದ ವ್ಯಾಪಾರದಿಂದ ಭಾರೀ ನಷ್ಟಕ್ಕೀಡಾಗಿದ್ದ ಬಟ್ಟೆ ವ್ಯಾಪಾರಿ, ಮನೆಯಲ್ಲಿ ತನ್ನ ಪತ್ನಿ ಹಾಗೂ ನವ ವಿವಾಹಿತ ಪುತ್ರನನ್ನು ಹತ್ಯೆಗೈದು, ಬಳಿಕ ಬಟ್ಟೆ ಅಂಗಡಿಗೆ ಹೋಗಿ ಅಲ್ಲಿ ತಾನು ಸಹ ಆತ್ಮಹತ್ಯೆಗೆ ಶರಣಾಗಿರುವ ಘಟನೆ ಮಂಡ್ಯದ ನೆಹರು ನಗರದಲ್ಲಿ ಮಂಗಳವಾರ ಬೆಳಗ್ಗೆ ನಡೆದಿದೆ.

ನೆಹರು ನಗರ ನಿವಾಸಿ ಪ್ರಭಾಕರ್ (65) ಆತ್ಮಹತ್ಯೆ ಮಾಡಿಕೊಂಡಿದ್ದು, ಈತ ಆತ್ಮಹತ್ಯೆಗೂ ಮುನ್ನ ಪತ್ನಿ ಜ್ಯೋತಿ (55) ಯನ್ನು ಉಸಿರುಗಟ್ಟಿಸಿ ಹತ್ಯೆಗೈದಿದ್ದಾನೆ. ಇದನ್ನು ತಡೆಯಲು ಬಂದ ತನ್ನ ನವ ವಿವಾಹಿತ ಪುತ್ರ ಸಂತೋಷ್(30)ನನ್ನು ಕೊಂದು ಬಳಿಕ ಡೆತ್‌ನೋಟ್ ಬರೆದಿಟ್ಟು ತಾನು ಸಹ ಮನೆ ಸಮೀಪದಲ್ಲೇ ಇರುವ ತಮ್ಮ ಬಟ್ಟೆ ಅಂಗಡಿಗೆ ತೆರಳಿ ಅಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಸೊಸೆ ಮನೆಯಲ್ಲೇ ಇದ್ದರೂ ಇವಾವೂ ಆಕೆಯ ಗಮನಕ್ಕೆ ಬಂದಿಲ್ಲ.

ಮಂಗಳವಾರ ಬೆಳಗ್ಗೆ 5.45ರಿಂದ 6 ಗಂಟೆ ಸಮಯದಲ್ಲಿ ಪ್ರಭಾಕರ್ ಮೊದಲು ತನ್ನ ಪತ್ನಿ ಜ್ಯೋತಿಯನ್ನು ಪಂಚೆಯಿಂದ ಬಿಗಿದು ಉಸಿರುಗಟ್ಟಿಸಿ ಹತ್ಯೆಗೈದಿದ್ದಾನೆ. ಇದನ್ನು ತಡೆಯಲು ಬಂದ ಪುತ್ರ ಸಂತೋಷ್‌ನ್ನು ಸಹ ಕೊಂದು, ನಂತರ ತನ್ನ ಕಾಮಧೇನು ಬಟ್ಟೆ ಅಂಗಡಿಗೆ ತೆರಳಿ ಅಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.


ಘಟನೆ ನಡೆದ ಮನೆಯ ಮುಂದೆ ನೆರೆದಿರುವ ಸಾರ್ವಜನಿಕರು.

ಎಂದಿನಂತೆ ನಿದ್ರೆಯಿಂದ ಎಚ್ಚರಗೊಂಡ ಸೊಸೆ ತಿಂಡಿ ಸಿದ್ಧಪಡಿಸುತ್ತಾ ಅತ್ತೆ ಹಾಗೂ ಪತಿಯನ್ನು ಎಬ್ಬಿಸಲು ಹೋದಾಗ ಈ ಘಟನೆ ಬೆಳಕಿಗೆ ಬಂದಿದೆ. ಸಾಲ ಬಾಧೆ ತಾಳಲಾರದೇ ತಾನೇ ಪತ್ನಿ ಮತ್ತು ಮಗನನ್ನು ಕೊಂದಿರುವುದಾಗಿ ಡೆತ್‌ನೋಟ್‌ನಲ್ಲಿ ಪ್ರಭಾಕರ್ ಉಲ್ಲೇಖಿಸಿದ್ದಾರೆ.

ಬಟ್ಟೆ ವ್ಯಾಪಾರದ ಮೂಲಕ ಕುಟುಂಬ ನಿರ್ವಹಣೆ ಮಾಡುತ್ತಿದ್ದ ಪ್ರಭಾಕರ್, ರಾಜ್ಯ ಸರ್ಕಾರ ಉಚಿತ ಬಸ್ ಯೋಜನೆ ಜಾರಿಗೆ ತಂದ ಹಿನ್ನೆಲೆಯಲ್ಲಿ ಜನ ಬೇರೆ ಬೇರೆ ಕಡೆ ಹೋಗಲು ಆರಂಭಿಸಿದ್ದರಿಂದ ತನ್ನ ಬಟ್ಟೆ ಅಂಗಡಿಯಲ್ಲಿ ವ್ಯಾಪಾರ ಕಡಿಮೆಯಾಗಿತ್ತು ಎಂದು ಉಲ್ಲೇಖಿಸಿ ದ್ದಾನೆ. ಇದರಿಂದ ಮಾಡಿದ್ದ ಸಾಲ ತೀರಿಸಲಾಗುತ್ತಿಲ್ಲ. ಖಾಸಗಿ ಫೈನಾನ್ಸ್ ಸಿಬ್ಬಂದಿ ಸಾಲ ಕಟ್ಟಲಿಲ್ಲ ಎಂದರೆ ಮನೆ ಬಳಿ ಬರುವುದಾಗಿ ಬೆದರಿಕೆ ಹಾಕುತ್ತಿದ್ದಾರೆ. ಸಾಲಗಾರರ ಕಿರುಕುಳ ತಾಳಲಾಗುತ್ತಿಲ್ಲ ಎಂದು ಡೆತ್‌ನೋಟ್‌ನಲ್ಲಿ ಬರೆದಿದ್ದಾನೆ. ■6ನೇ ಪುಟಕ್ಕೆ

ಸಿದ್ದರಾಮಯ್ಯ ಆಪ್ತರ ಸೇವೆಯಿಂದ ಬಿಡುಗಡೆ

ಬೆಂಗಳೂರು, ಜೂ.9(ಕೆಎಂಶಿ)-ಸಿದ್ದರಾಮಯ್ಯ ಆಡಳಿತ ವೇಳೆ ಆರ್ಥಿಕ ಸಲಹೆಗಾರರಾಗಿದ್ದ ಬಸವ ರಾಜರಾಯ ರೆಡ್ಡಿ, ವೈದ್ಯಕೀಯ ಸಲಹೆಗಾರ ಡಾ.ರವಿ ಕುಮಾರ್ ಹಾಗೂ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ಅವರನ್ನು ಸೇವೆಯಿಂದ ಬಿಡುಗಡೆ ಮಾಡಲಾಗಿದೆ. ಸಿದ್ದರಾಮಯ್ಯ ಅವರ ಕಾನೂನು ಸಲಹೆಗಾರರಾಗಿದ್ದ ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ನೀಡಿದ್ದ ರಾಜೀನಾಮೆ ಸಹ ಅಂಗೀಕರಿಸಲಾಗಿದೆ.

ಸಿದ್ದರಾಮಯ್ಯ ಸಂಪುಟದಲ್ಲಿದ್ದ ಪ್ರಭಾವಿ ನಾಯಕರಿಗೆ ಡಿಕೆಶಿ ಮಂತ್ರಿ ಮಂಡಲದಲ್ಲಿಲ್ಲ ಅವಕಾಶ

ಹೊಸ ಮುಖಗಳಿಗೆ ಅವಕಾಶ ಕಲ್ಪಿಸಲು ರಾಹುಲ್ ಗಾಂಧಿ ಸೂಚನೆ

ಬೆಂಗಳೂರು, ಜೂ.9(ಕೆಎಂಶಿ)- ಸಿದ್ದರಾಮಯ್ಯ ಸಂಪುಟದಲ್ಲಿ ಪ್ರಭಾವಿಗಳಾಗಿ ಪ್ರಮುಖ ಖಾತೆ ನಿರ್ವಹಿಸಿದ್ದ ಎಚ್.ಕೆ. ಪಾಟೀಲ್, ದಿನೇಶ್ ಗುಂಡೂರಾವ್, ಡಾ. ಎಚ್.ಸಿ.ಮಹದೇವಪ್ಪ, ಕೆ.ವೆಂಕಟೇಶ್ ಸೇರಿದಂತೆ 12ಕ್ಕೂ ಹೆಚ್ಚು ಮಂದಿಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಂತ್ರಿಮಂಡಲದಲ್ಲಿ ಅವಕಾಶ ಇಲ್ಲ.

ಶಿವಕುಮಾರ್ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಸಂದರ್ಭದಲ್ಲಿ ಸಿದ್ದರಾಮಯ್ಯ ಸಂಪುಟದಲ್ಲಿದ್ದ ತಮ್ಮನ್ನೂ ಸೇರಿದಂತೆ 12 ಮಂದಿಗೆ ಅವಕಾಶ ನೀಡಿ ಹೊಸದಾಗಿ ಯು.ಟಿಖಾದರ್ ಹಾಗೂ ಯತೀಂದ್ರ ಸಿದ್ದರಾಮಯ್ಯ ಅವರನ್ನು ಸೇರ್ಪಡೆ ಮಾಡಿಕೊಂಡಿದ್ದರು. ಸರ್ಕಾರ ರಚನೆ ಸಂದರ್ಭದಲ್ಲಿ ಕೆಲವು ಘಟಾನುಘಟಿಗಳಿಗೆ ಅವಕಾಶ ನೀಡಿರಲಿಲ್ಲ. ಪಕ್ಷದ ಅಧಿನಾಯಕ ರಾಹುಲ್ ಗಾಂಧಿ ಮುಂದಿನ ಸಂಪುಟ ವಿಸ್ತರಣೆ ವೇಳೆ ಯುವಕರು ಹಾಗೂ ಹೊಸಬರಿಗೆ ಅವಕಾಶ ಕಲ್ಪಿಸಿ ಎಂದು ಆದೇಶಿಸಿದ್ದಾರೆ.

ಮೊದಲ ಬಾರಿ ವಿಧಾನಸಭೆ ಪ್ರವೇಶಿಸಿದವರಿಗೆ ಮಂತ್ರಿಮಂಡಲದಲ್ಲಿ ಅವಕಾಶ ಬೇಡ.



ಸೇವಾಹಿರಿತನ ಮತ್ತು ಎಲ್ಲಾ ಸಮುದಾಯಗಳಿಗೆ ಪ್ರಾತಿನಿಧ್ಯ ಕಲ್ಪಿಸುವ ಮೂಲಕ ಸಂಪುಟ ವಿಸ್ತರಿಸಿ ಎಂದಿದ್ದಾರೆ. ವಿಧಾನಸಭೆಯಿಂದ ರಾಜ್ಯಸಭೆ ಹಾಗೂ ವಿಧಾನ ಪರಿಷತ್ ಸ್ಥಾನಗಳಿಗೆ ನಡೆದಿರುವ ಚುನಾವಣೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಸಂಪುಟ ವಿಸ್ತರಣೆಗೆ ಮುಖ್ಯಮಂತ್ರಿ ಮುಂದಾಗಲಿದ್ದಾರೆ.

ನಗರದಲ್ಲೇ ಉಳಿದಿದ್ದ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಅವರೊಂದಿಗೆ ಈ ಸಂಬಂಧ ಈಗಾಗಲೇ ಚರ್ಚಿಸಿದ್ದಾರೆ. ಎಚ್.ಕೆ.ಪಾಟೀಲ್, ಡಾ. ಎಚ್.ಸಿ.ಮಹದೇವಪ್ಪ ಅಲ್ಲದೆ, ಸಿದ್ದರಾಮಯ್ಯ ಸಂಪುಟದಲ್ಲಿ ಕಳೆದ ಮೂರು ವರ್ಷಗಳಿಂದ ಕಾರ್ಯನಿರ್ವಹಿಸಿದ್ದ ಮಂಕಾಳ ವೈದ್ಯ, ಆರ್.ಬಿ.ತಿಮ್ಮಾಪುರ, ■6ನೇ ಪುಟಕ್ಕೆ

ರಾಜ್ಯಸಭೆ, ಪರಿಷತ್ ಚುನಾವಣೆ: ಕಾಂಗ್ರೆಸ್-ಬಿಜೆಪಿ ಅಭ್ಯರ್ಥಿಗಳ ನಾಮಪತ್ರ ಕ್ರಮಬದ್ಧ

ಬೆಂಗಳೂರು: ವಿಧಾನಸಭೆಯಿಂದ ರಾಜ್ಯಸಭೆಗೆ ಆಯ್ಕೆಯಾಗಬೇಕಾದ ನಾಲ್ಕು ಸ್ಥಾನಗಳಿಗೆ ಇದೇ 18 ರಂದು ನಡೆಯುವ ಚುನಾವಣೆಗೆ ಕಾಂಗ್ರೆಸ್ ಮತ್ತು ಬಿಜೆಪಿ ಅಭ್ಯರ್ಥಿಗಳು ಸಲ್ಲಿಸಿರುವ ನಾಮಪತ್ರಗಳು ಕ್ರಮಬದ್ಧವಾಗಿವೆ.


ಇದೇ 11 ರಂದು ನಾಮಪತ್ರ ಪಡೆಯಲು ಕೊನೆಯ ದಿನ ವಾಗಿದೆ. ಯಾರೊಬ್ಬರೂ ನಾಮಪತ್ರ ಹಿಂದಕ್ಕೆ ಪಡೆಯದೇ ಇದ್ದರೆ ನಾಲ್ವರೂ ಅವಿರೋಧವಾಗಿ ಆಯ್ಕೆಗೊಳ್ಳಲಿದ್ದಾರೆ. ರಾಜ್ಯಸಭೆಗೆ ಕಾಂಗ್ರೆಸ್‌ನಿಂದ ಎಂ.ಮಲ್ಲಿಕಾರ್ಜುನ ಖರ್ಗೆ, ಪವನ್ ಖೇರ, ಮನ್ಸೂರ್ ಅಲಿ ಖಾನ್ ಮತ್ತು ಬಿಜೆಪಿಯಿಂದ ಪ್ರೊ.ಎಂ. ನಾಗರಾಜ್ ಅವರು ಸ್ಪರ್ಧಿಸಿದ್ದಾರೆ.

ವಿಧಾನಪರಿಷತ್ ಚುನಾವಣೆಗೆ ನಾಮಪತ್ರ ಸಲ್ಲಿಸಿರುವ ಕಾಂಗ್ರೆಸ್‌ನ ತಿಪ್ಪಣ್ಣಪ್ಪ ಕಮಕನೂರ, ಪಿ.ವಿ.ಮೋಹನ್, ಬಿ.ಕೆ.ಹರಿಪ್ರಸಾದ್, ಶಿವಣ್ಣ ಬಿ.ಎಸ್, ವಿನಯ್ ಕಾರ್ತಿಕ್, ಬಿಜೆಪಿಯ ರಘು ಕೌಟಿಲ್ಯ, ಲಿಂಗರಾಜ ಪಾಟೀಲ ಮತ್ತು ಜೆಡಿಎಸ್‌ನ ಗೋವಿಂದರಾಜ್ ಅವರ ನಾಮಪತ್ರಗಳು ಕ್ರಮಬದ್ಧವಾಗಿವೆ ಎಂದು ಚುನಾವಣಾಧಿಕಾರಿ ಎಂ.ಕೆ. ವಿಶಾಲಾಕ್ಷಿ ತಿಳಿಸಿದ್ದಾರೆ. ಪರಿಷತ್ತಿನ ಏಳು ಸ್ಥಾನಗಳಿಗೆ ಎಂಟು ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ. ಯಾವುದೇ ಅಭ್ಯರ್ಥಿ ನಾಮಪತ್ರ ಹಿಂದಕ್ಕೆ ಪಡೆಯದಿದ್ದರೆ, ಜೂನ್ 18 ರಂದು ಚುನಾವಣೆ ನಡೆಯಲಿದೆ.

ರಾಮಲಿಂಗಾ ರೆಡ್ಡಿ ಆಯ್ತು ಈಗ ಕೃಷ್ಣ ಬೈರೇಗೌಡರ ಖಾತೆ 'ಕ್ಯಾತೆ'

ಪೂರ್ಣ ಪ್ರಮಾಣದ ಬೆಂಗಳೂರು ಉಸ್ತುವಾರಿ ನೀಡಿ ಇಲ್ಲ ನನ್ನ ಸಚಿವ ಸ್ಥಾನದಿಂದ ಬಿಡುಗಡೆ ಮಾಡಿ

ಬೆಂಗಳೂರು, ಜೂ.9(ಕೆಎಂಶಿ)-ರಾಮಲಿಂಗಾರೆಡ್ಡಿ ಖಾತೆಯ ಕ್ಯಾತೆ ಮುಗಿಯುತ್ತಿದ್ದಂತೆ ಕೃಷ್ಣಬೈರೇಗೌಡ ಖಾತೆ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ ತಮ್ಮ ಸ್ಥಾನ ತ್ಯಜಿಸಲು ಮುಂದಾಗಿದ್ದಾರೆ.



ಖಾತೆ ಅಸಮಾಧಾನದ ಬಗ್ಗೆ ತಮ್ಮ ಆಪ್ತರ ಬಳಿ ನೋವು ತೋಡಿಕೊಂಡಿದ್ದ ಕೃಷ್ಣಬೈರೇಗೌಡ, ಬಹಿರಂಗವಾಗಿ ಯಾವುದೇ ಹೇಳಿಕೆ ನೀಡಿಲ್ಲ. ತಮ್ಮ ಖಾತೆ ಬದಲಾಯಿಸಿ, ಇಲ್ಲವೇ, ಪಕ್ಷದ ಸಂಘಟನೆಗೆ ನಿಯೋಜಿಸಿ ಎಂದು ವರಿಷ್ಠರಿಗೆ ಮನವಿ ಮಾಡಿದ್ದಾರೆ.

ಇದೇ ಉದ್ದೇಶಕ್ಕಾಗಿ ದೆಹಲಿಗೆ ತೆರಳಿದ್ದ ಅವರು, ಪಕ್ಷದ ರಾಜಕೀಯ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಸೇರಿದಂತೆ ಕೆಲವು ನಾಯಕರನ್ನು ಭೇಟಿ ಮಾಡಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ರಾಹುಲ್ ಗಾಂಧಿ ಭೇಟಿಗೆ ಸಮಯ ಕೋರಿದ್ದು, ಭೇಟಿ ನಂತರ ಶಿವಕುಮಾರ್ ಸಂಪುಟದಲ್ಲಿ ಮುಂದುವರೆಯುವ ಕುರಿತು ತೀರ್ಮಾನ ಕೈಗೊಳ್ಳಲಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಮ್ಮ ಮಂತ್ರಿಮಂಡಲದಲ್ಲಿ ಕೃಷ್ಣಬೈರೇಗೌಡ ಅವರಿಗೆ ಬಿಡಿಎ ಹಾಗೂ ಬಿಎಂಆರ್‌ಡಿ ಹೊರತುಪಡಿಸಿ ಬೆಂಗಳೂರು ನಗರಾಭಿವೃದ್ಧಿ ಖಾತೆ ನೀಡಿದ್ದರು.

ತಮಗೆ ಕಂದಾಯ ಇಲಾಖೆಯನ್ನೇ ಮುಂದುವರೆಸುವಂತೆ ಮನವಿ ಮಾಡಿಕೊಂಡಿದ್ದರೂ, ಲೆಕ್ಕಿಸದೆ, ಹೊಸ ಇಲಾಖೆ ಹೊಣೆ ನೀಡಿದ್ದರು.

ಬಿಡಿಎ, ಬಿಎಂಆರ್‌ಡಿ ಹೊರಗಿಟ್ಟು ತಮಗೆ ನೀಡಿರುವ ಖಾತೆ ನಿರ್ವಹಿಸಲು ನಾನು ಸಿದ್ಧನಿಲ್ಲ. ಕೊಟ್ಟರೆ ಬೆಂಗಳೂರು ಅಭಿವೃದ್ಧಿಗೆ ಸಂಬಂಧಿಸಿದಂತೆ ಪೂರ್ಣ ಹೊಣೆಗಾರಿಕೆ ನೀಡಿ ಇಲ್ಲವಾದರೆ, ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಳ್ಳುವುದಾಗಿ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಭೇಟಿ ಮಾಡಿ ತಿಳಿಸಿದ್ದರು. ಬೆಂಗಳೂರು ಅಭಿವೃದ್ಧಿ ಹೊಣೆಗಾರಿಕೆಯನ್ನು ಕೃಷ್ಣಬೈರೇಗೌಡ ಅವರಿಗೆ ನೀಡಿದ್ದಕ್ಕೆ ಕೆ.ಜೆ.ಜಾರ್ಜ್ ಮತ್ತು ರಾಮಲಿಂಗಾ ರೆಡ್ಡಿ ಅಸಮಾಧಾನ ವ್ಯಕ್ತಪಡಿಸಿದ್ದರು.

ಜೆಡಿಎಸ್-ಬಿಜೆಪಿ ಮೈತ್ರಿಯಲ್ಲಿ ಬಿರುಕು ಮೂಡಿಸಲು ಕಾಂಗ್ರೆಸ್ ಯತ್ನ

- ಇದಕ್ಕಾಗಿ ದೇವೇಗೌಡರ ಬಗ್ಗೆ ಅನುಕಂಪದ ಅಸ್ತ್ರ ಬಳಕೆ: ಕೇಂದ್ರ ಸಚಿವ ಕುಮಾರಸ್ವಾಮಿ ತಿರುಗೇಟು
- ರಾಜ್ಯಸಭೆಗೆ ಹೋಗಬೇಕೆಂದು ದೇವೇಗೌಡರು ಅರ್ಜಿ ಹಾಕಿರಲಿಲ್ಲ: ಸ್ಪಷ್ಟನೆ

ಮಂಡ್ಯ, ಜೂ.9- ಜೆಡಿಎಸ್ ಹಾಗೂ ಬಿಜೆಪಿ ನಡುವಿನ ಮೈತ್ರಿಯಲ್ಲಿ ಬಿರುಕು ಸೃಷ್ಟಿಸಲು ಕಾಂಗ್ರೆಸ್, ದೇವೇಗೌಡರ ಮೇಲಿನ ಅನುಕಂಪದ ಅಸ್ತ್ರ ಪ್ರಯೋಗಿಸುತ್ತಿದೆ ಎಂದು ಜೆಡಿಎಸ್ ರಾಜ್ಯಾಧ್ಯಕ್ಷರೂ ಆದ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ತಿರುಗೇಟು ನೀಡಿದ್ದಾರೆ.

ರಾಜ್ಯಸಭಾ ಟಿಕೆಟ್ ನಿರಾಕರಿಸುವ ಮೂಲಕ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರಿಗೆ ಬಿಜೆಪಿ ದ್ರೋಹವೆಸಗಿದೆ ಎಂಬ ಕಾಂಗ್ರೆಸ್ ನಾಯಕರ ಟೀಕೆಗೆ ಮಂಗಳವಾರ ಮಂಡ್ಯದಲ್ಲಿ ಪ್ರತಿಕ್ರಿಯಿಸಿದ ಕುಮಾರಸ್ವಾಮಿ, ಮಾಜಿ ಪ್ರಧಾನಿ ದೇವೇಗೌಡರ ಮೇಲೆ ಕಾಂಗ್ರೆಸ್ ನಾಯಕರಿಗೆ ದಿಢೀರ್ ಅತಿಯಾದ ಅನುಕಂಪ ಬಂದಿದೆ. ಜೆಡಿಎಸ್ ಮತ್ತು ಬಿಜೆಪಿ ನಡುವಿನ ಮೈತ್ರಿಯಲ್ಲಿ ಬಿರುಕು ಸೃಷ್ಟಿಸಲು ಆ ಪಕ್ಷದ ಅನುಕಂಪದ ಅಸ್ತ್ರ ಪ್ರಯೋಗಿಸುತ್ತಿದೆ ಎಂದು ಕಿಡಿಕಾರಿದರು.

ಮೈತ್ರಿ ಬಿರುಕಿಗೆ ಯತ್ನ: ರಾಜ್ಯಸಭೆ ಟಿಕೆಟ್‌ಗೆ ದೇವೇಗೌಡರು ಅರ್ಜಿಯೇ ಹಾಕಿಲ್ಲ. ಈ ವಿಚಾರದಲ್ಲಿ ಕಾಂಗ್ರೆಸ್ ನಾಯಕರು ಅನಗತ್ಯವಾಗಿ ಮಾತನಾಡುತ್ತಿದ್ದಾರೆ. ದೇವೇಗೌಡರ ಬಗ್ಗೆ ಈಗ ಎಲ್ಲಿಲ್ಲದ ಅನುಕಂಪ ಬಂದಿದೆ. ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿಯಲ್ಲಿ ಬಿರುಕು ತರಲು ಕಾಂಗ್ರೆಸ್ ವಿಫಲ ಯತ್ನ ನಡೆಸುತ್ತಿದೆ ಎಂದರು.

ತಮ್ಮ ಪಕ್ಷದಲ್ಲಾಗುತ್ತಿರುವ ಬೆಳವಣಿಗೆಗಳು ಮತ್ತು ವೈಫಲ್ಯಗಳನ್ನು ಮುಚ್ಚಿಟ್ಟುಕೊಳ್ಳಲು ದೇವೇಗೌಡರನ್ನು ನೆಪ ಮಾಡಿಕೊಂಡು ರಾಜಕೀಯ ಮಾಡುತ್ತಿದ್ದಾರೆ. ದೇವೇಗೌಡರದು ಹೋರಾಟದ ಬದುಕು. ಅಧಿಕಾರಕ್ಕಾಗಿ ಎಂದೂ ಹಪಾಹಪಿಸಿದವರಲ್ಲ. ಸ್ವಾಭಿಮಾನಕ್ಕೆ ಧಕ್ಕೆಯಾದಾಗ ಪ್ರಧಾನಿ ಸ್ಥಾನವನ್ನೇ ಬಿಟ್ಟು ಬಂದರು. ಅದೆಲ್ಲವೂ ಕಾಂಗ್ರೆಸ್ ಪಕ್ಷಕ್ಕೆ ಗೊತ್ತಿಲ್ಲವೇ ಎಂದು ತೀಕ್ಷ್ಣವಾಗಿ ಪ್ರಶ್ನಿಸಿದರು.

ಕಾಂಗ್ರೆಸ್‌ನಿಂದ ಆಯ್ಕೆಯಾಗಿದ್ದಲ್ಲ: ಕಳೆದ ಬಾರಿ ದೇವೇಗೌಡರ ಅವಿರೋಧ ಆಯ್ಕೆಗೆ ಕಾಂಗ್ರೆಸ್ ಬೆಂಬಲದ ವಿಚಾರಕ್ಕೆ ಪ್ರತಿಕ್ರಿಯಿಸಿ, ಆಗ ದೇವೇಗೌಡರ ವಿರುದ್ಧ ಇನ್ನೊಬ್ಬ ಅಭ್ಯರ್ಥಿ ಸ್ಪರ್ಧಿಸುವ ಅವಕಾಶ ಇರಲಿಲ್ಲ. ಆ ಸಂದರ್ಭದಲ್ಲಿ ಯಾವುದೇ ಪಕ್ಷಕ್ಕೆ ತನ್ನ ಅಭ್ಯರ್ಥಿಯನ್ನು ನಿಲ್ಲಿಸಿ, ಗೆಲ್ಲಿಸಿಕೊಳ್ಳುವಷ್ಟು ಸಂಖ್ಯಾಬಲ ಇರಲಿಲ್ಲ. ನಮ್ಮ ಪಕ್ಷಕ್ಕೆ ಸಂಖ್ಯಾಬಲ ಇತ್ತು. ಹೀಗಾಗಿ ರಾಜ್ಯಸಭೆಗೆ ದೇವೇಗೌಡರು ಆಯ್ಕೆಯಾದರೇ ಹೊರತು ಕಾಂಗ್ರೆಸ್ ಬೆಂಬಲದಿಂದ ಅಲ್ಲ ಎಂದರು.

ಎರಡು ತಿಂಗಳು ಕಾಯೋಣ: ರಾಜ್ಯದಲ್ಲಿ ಒಕ್ಕಲಿಗ ಮುಖ್ಯಮಂತ್ರಿ ಇರುವಾಗ ನಿಮಗೆ ರಾಜ್ಯಸಭೆ ವಿಚಾರ ಏಕೆ? ಎರಡು ತಿಂಗಳು ಕಾಯೋಣ,


ಮಂಡ್ಯ ತಾಲೂಕು ಕೀಲಾರ ಗ್ರಾಮದ ಶಾಲಾ ಮಕ್ಕಳಿಗೆ ಬಸ್ ಸೌಕರ್ಯ ಕಲ್ಪಿಸಿದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಬಳಿಕ ಮಕ್ಕಳೊಂದಿಗೆ ಸಂಭಾಷಿಸುತ್ತಿರುವುದು.


ಅವರೇನು ಮಾಡುತ್ತಾರೆ ಎಂಬು ದನ್ನು ಗಮನವಿಟ್ಟು ನೋಡೋಣ ಎಂದ ಕೇಂದ್ರ ಸಚಿವ ಕುಮಾರಸ್ವಾಮಿ, ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗುವುದು ಖಚಿತವಾದ ಸಂದರ್ಭದಲ್ಲಿ ದೇವೇಗೌಡರ ಮನೆಯಲ್ಲಿ ಸೂತಕ ಆವರಿಸಿದೆ ಎಂದಿದ್ದ ಮಾಜಿ ಸಚಿವರೊಬ್ಬರ ಹೇಳಿಕೆಗೆ ಪ್ರತಿಕ್ರಿಯಿಸಲು ನಿರಾಕರಿಸಿದರು.

ಜಮೀರ್ ಸಂಪರ್ಕದಲ್ಲಿಲ್ಲ: ಸಚಿವ ಸ್ಥಾನದಿಂದ ವಂಚಿತರಾಗಿರುವ ಮಾಜಿ ಸಚಿವ ಜಮೀರ್ ಅಹಮದ್ ಅವರು ತಮ್ಮ ಜತೆ ಸಂಪರ್ಕದಲ್ಲಿದ್ದಾರೆ ಎಂಬ ವದಂತಿಗಳನ್ನು ತಳ್ಳಿಹಾಕಿದ ಕುಮಾರಸ್ವಾಮಿ, ಕಾಂಗ್ರೆಸ್‌ನ ಯಾವ ನಾಯಕರನ್ನು ನಾನು ಸಂಪರ್ಕಿಸಿಲ್ಲ ಎಂದು ಸ್ಪಷ್ಟಪಡಿಸಿದರು. ■6ನೇ ಪುಟಕ್ಕೆ

ಕನ್ನಡಿಗ ಪ್ರಧಾನಿ ದೇವೇಗೌಡರ ಕೆಳಗಿಳಿಸಿದ ಅಪಖ್ಯಾತಿ ಕಾಂಗ್ರೆಸ್‌ನದು

ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಟೀಕೆ

ಬೆಂಗಳೂರು, ಜೂ.9(ಕೆಎಂಶಿ)-ಪ್ರಧಾನ ಮಂತ್ರಿ ಹುದ್ದೆಗೇರಿದ ಹೆಮ್ಮೆಯ ಕನ್ನಡಿಗ ಎಂಬ ಖ್ಯಾತಿ ಪಡೆದ ಎಚ್.ಡಿ. ದೇವೇಗೌಡ ಅವರನ್ನು ಅಧಿಕಾರದಿಂದ ಕೆಳಗಿಳಿಸಿದ ಕುಖ್ಯಾತಿ ಕಾಂಗ್ರೆಸ್‌ನದ್ದಾಗಿದ್ದು, ಆ ಪಕ್ಷದ ನಾಯಕರು ಮೊಸಳೆ ಕಣ್ಣೀರು ಸುರಿಸುವ ಅಗತ್ಯ ಇಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಟೀಕಿಸಿದ್ದಾರೆ.



ಪ್ರಧಾನಿ ನರೇಂದ್ರ ಮೋದಿ ಹಾಗೂ ದೇವೇಗೌಡ ನಡುವಿನ ಗೌರವಯುತ ರಾಜಕೀಯ ಹಾಗೂ ವ್ಯಕ್ತಿಗತ ಬಾಂಧವ್ಯಕ್ಕೆ ಕಾಂಗ್ರೆಸ್‌ನ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಹಾಗೂ ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಹುಳಿ ಹಿಂಡುವ ಮಾತುಗಳನ್ನು ಆಡಿರುವುದು 'ಕಾಂಗ್ರೆಸ್ಸಿಗರ ವಿಕೃತ ನಡೆ' ತೋರಿಸುತ್ತದೆ.

ಇಂತಹ ಕುಚೋದ್ಯದ ಮಾತುಗಳನ್ನು ಕರ್ನಾಟಕದ ಜನತೆ ಅರ್ಥೈಸಿಕೊಳ್ಳದಷ್ಟು ಮುಗ್ಧರಲ್ಲ ಎಂಬ ಅರಿವು ಕಾಂಗ್ರೆಸ್ಸಿಗರಿಗೆ ಇದ್ದರೆ ಉತ್ತಮ.

> "ದೇವೇಗೌಡ ಅವರ ಹಿರಿತನ, ಸೇವೆ ಉಲ್ಲೇಖಿಸಿ ಸಂಸತ್ತಿನಲ್ಲಿ ಸ್ವತಃ ಪ್ರಧಾನಿ ಮೋದಿ ಭಾವುಕರಾಗಿ ಮಾತನಾಡಿದ್ದಾರೆ. ದೇವೇಗೌಡರ ಕೊಡುಗೆ ಮತ್ತು ಸಾಧನೆಗೆ ಮುಕ್ತ ಕಂಠದಿಂದ ಪ್ರಶಂಸೆ ವ್ಯಕ್ತಪಡಿಸಿದ ಅವರು, ಅವರ ಮಾರ್ಗದರ್ಶನ ಸದಾ ನಮಗೆ ಬೇಕೆಂದು ಹೇಳಿದ್ದು, ಕಾಂಗ್ರೆಸ್ಸಿಗರಿಗೆ ಜೀರ್ಣಿಸಿಕೊಳ್ಳಲು ಆಗುತ್ತಿಲ್ಲ.
> -ಬಿ.ವೈ.ವಿಜಯೇಂದ್ರ

ಮೊಸಳೆ ಕಣ್ಣೀರು ಸುರಿಸುವ ಅವಶ್ಯಕತೆ ಇಲ್ಲ ಎಂದಿದ್ದಾರೆ. ಈ ಸಂಬಂಧ ತಮ್ಮ ಸಾಮಾಜಿಕ ಜಾಲತಾಣ ಖಾತೆಯಲ್ಲಿ ಟ್ವೀಟ್ ಮಾಡಿರುವ ಅವರು, ದೇವೇಗೌಡರ ರಾಜಕೀಯ ಬದುಕಿನುದ್ದಕ್ಕೂ ಕಾಟ ಕೊಟ್ಟಿದ್ದು ಯಾರು, ಇದೇ ಕಾಂಗ್ರೆಸ್ಸಿಗರು, ಜೆಡಿಎಸ್ ಇಬ್ಭಾಗ ಮಾಡಲು ಯತ್ನಿಸಿದ್ದು ಯಾರು ■6ನೇ ಪುಟಕ್ಕೆ

ಕುಡಿಯಲು ಸಾಥ್ ನೀಡದ್ದಕ್ಕೆ ವ್ಯಕ್ತಿ ಮೇಲೆ ಹಲ್ಲೆ ನಡೆಸಿದ 'ಕುಡುಕ'



ಮೈಸೂರು,ಜೂ.9(ಜಿಎ)–ಕುಡಿಯಲು ಸಾಥ್ ನೀಡಲಿಲ್ಲ ಎಂಬ ಕಾರಣಕ್ಕೆ ಕುಡುಕನೊಬ್ಬ ವ್ಯಕ್ತಿಯ ಮೇಲೆ ಸಿಮೆಂಟ್‌ನ ಇಂಟರ್‌ಲಾಕ್ ಇಟ್ಟಿಗೆಯಿಂದ ಹಲ್ಲೆ ಮಾಡಿರುವ ಸಂಬಂಧ ಮಂಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಿನ ಖಾಸಗಿ ಬಸ್‌ನಿಲ್ದಾಣದ ಬಳಿ ಇರುವ ಫಾಸ್ಟ್‌ಫುಡ್‌ನಲ್ಲಿ ಕೆಲಸ ಮಾಡುವ ವ್ಯಕ್ತಿಗೆ ಎರಡು ವರ್ಷಗಳಿಂದ ತಿಲಕ್‌ನಗರದ ವ್ಯಕ್ತಿಯೋರ್ವನ ಪರಿಚಯವಿತ್ತು. ಜೂ 7ರಂದು ಬೆಳಗ್ಗೆ 11 ಗಂಟೆಗೆ ಆ ವ್ಯಕ್ತಿಯೂ ಫಾಸ್ಟ್‌ಫುಡ್ ಮುಂಭಾಗವಿದ್ದ ಸುರಭಿ ಬಾರ್ ಬಳಿ ನಿಂತು ಫಾಸ್ಟ್‌ಫುಡ್ ಕೆಲಸಗಾರನನ್ನು ಕರೆದಿದ್ದಾನೆ. ಆತ ಅವನ ಬಳಿ ತೆರಳಿದಾಗ ಬಾ ಇಬ್ಬರು ಎಣ್ಣೆ ಹಾಕೋಣ ಎಂದು ಹೇಳಿದ್ದಾನೆ. ಆದರೆ, ಅದಕ್ಕೆ ಫಾಸ್ಟ್ ಫುಡ್ ಕೆಲಸಗಾರ ನಾನು ಬರಲ್ಲ ಎಂದು ಮತ್ತೆ ಅಂಗಡಿ ಕಡೆ ಹೋಗಿದ್ದಾನೆ.

ಆದರೆ, ಆತನನ್ನು ಅಡ್ಡಗಟ್ಟಿ ಬರುವಂತೆ ಕುಡುಕ ಬಲವಂತ ಮಾಡಿದ್ದಾನೆ. ಆದರೂ ಆತ ಬರಲ್ಲ ಎಂದು ಹೇಳುತ್ತಿದ್ದಂತೆ ಅವಾಚ್ಯ ಶಬ್ದಗಳಿಂದ ಬೈದು, ಬರದಿದ್ದರೆ ನಿನ್ನ ಸುಮ್ಮನೆ ಬಿಡಲ್ಲ ಎಂದು ಧಮ್ಕಿ ಹಾಕಿದ್ದಾನೆ. ಅದನ್ನು ಲೆಕ್ಕಿಸದ ಫಾಸ್ಟ್ ಫುಡ್ ಕೆಲಸಗಾರ ತನ್ನ ಪಾಡಿಗೆ ಕೆಲಸದಲ್ಲಿ ನಿರತನಾಗಿದ್ದಾನೆ. ತಕ್ಷಣ ಪಕ್ಕದಲ್ಲಿದ್ದ ಫುಟ್‌ಪಾತ್ ಜೋಡಣೆಯ ಸಿಮೆಂಟ್‌ನ ಇಂಟರ್‌ಲಾಕ್ ಇಟ್ಟಿಗೆ ತೆಗೆದುಕೊಂಡು ತಲೆಗೆ ಹೊಡೆದಿದ್ದಾನೆ. ಅದನ್ನು ತಡೆಯಲು ಯತ್ನಿಸಿದಾಗ ಕೈಗೂ ಹೊಡೆದಿದ್ದಾನೆ. ತಲೆಯಲ್ಲಿ ರಕ್ತ ಸುರಿಯಲು ಆರಂಭಿಸುತ್ತಿದ್ದಂತೆ ಅಲ್ಲಿದ್ದ ಸಾರ್ವಜನಿಕರು ಅವರ ತಾಯಿಯ ಗಮನಕ್ಕೆ ವಿಷಯ ತಂದಿದ್ದಾರೆ. ತಕ್ಷಣ ಸ್ಥಳಕ್ಕೆ ಬಂದ ತಾಯಿ ಮಗನನ್ನು ತಕ್ಷಣ ಕೆಆರ್ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ. ಮಂಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜೂ.12ಕ್ಕೆ ಬಾಲ ಕಾರ್ಮಿಕ ವಿರೋಧಿ ದಿನಾಚರಣೆ



ಮೈಸೂರು, ಜೂ.9– ಜಿಲ್ಲಾಡಳಿತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಪಂಚಾಯತ್ ಕಾರ್ಮಿಕ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ), ಪೊಲೀಸ್ ಇಲಾಖೆ ಸಮಾಜ ಕಲ್ಯಾಣ ಇಲಾಖೆ, ಜಿಲ್ಲಾ ಬಾಲ ಕಾರ್ಮಿಕ ಯೋಜನಾ ಸೊಸೈಟಿ ಮಕ್ಕಳ ಸಹಾಯವಾಣಿ 1098 ಹಾಗೂ ಸ್ವಯಂಸೇವಾ ಸಂಸ್ಥೆಗಳು ಮೈಸೂರು ಸಂಯುಕ್ತಾಶ್ರಯದಲ್ಲಿ ವಿಶ್ವ ಬಾಲ ಕಾರ್ಮಿಕ ದಿನ ಆಚರಣೆಯನ್ನು ಜೂನ್ 12ರಂದು ಬೆಳಗ್ಗೆ 11 ಗಂಟೆಗೆ ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜಲ್ಲಿ ಹಮ್ಮಿಕೊಳ್ಳಲಾಗಿದೆ.

ಬೆಳಗ್ಗೆ 10 ಗಂಟೆಗೆ ಜಾಥಾ ಕಾರ್ಯಕ್ರಮದ ಉದ್ಘಾಟನೆಯನ್ನು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಉಷಾರಾಣಿ ಮಾಡಲಿದ್ದು, ಅರಮನೆ ಆವರಣದಲ್ಲಿರುವ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗದಿಂದ ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರೌಢಶಾಲಾ ವಿಭಾಗ, ಜೆ.ಎಲ್.ಬಿ ರಸ್ತೆವರೆಗೆ ಶಾಲಾ ಮಕ್ಕಳಿಂದ ಜಾಥಾ ಹಮ್ಮಿಕೊಳ್ಳಲಾಗಿದೆ.

ವೇದಿಕೆ ಕಾರ್ಯಕ್ರಮದ ಉದ್ಘಾಟನೆಯನ್ನು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ನಾಗರಾಜ ಎಸ್.ಅಂಕಸದೊಡ್ಡಿ ಮಾಡಲಿದ್ದು, ಜಿಲ್ಲಾಧಿಕಾರಿ ಲಕ್ಷ್ಮೀಕಾಂತರೆಡ್ಡಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ವಿಶೇಷ ಆಹ್ವಾನಿತರಾಗಿ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಪೊಲೀಸ್ ಅಧೀಕ್ಷಕ ಮಲ್ಲಿಕಾರ್ಜುನ್ ಬಾಲದಂಡಿ, ಜಿಪಂ ಸಿಇಓ ಯುಕೇಶ್‌ಕುಮಾರ್, ಮೈಸೂರು ಮಹಾನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಅಪರ ಜಿಲ್ಲಾಧಿಕಾರಿ ಐಶ್ವರ್ಯ ಭಾಗವಹಿಸಲಿದ್ದಾರೆ.

ಯೋಗ ಶಿಕ್ಷಕರ ತರಬೇತಿ ಕೋರ್ಸ್

ಮೈಸೂರು, ಜೂ.9(ಜಿಎ)–ಮೈಸೂರಿನ ರಾಮಕೃಷ್ಣನಗರದ ಪರಮಹಂಸ ಯೋಗ ಮಹಾವಿದ್ಯಾಲಯದಲ್ಲಿ ಜೂ.21 ರಿಂದ ಅಂತರರಾಷ್ಟ್ರೀಯ ಯೋಗ ಶಿಕ್ಷಕರ ತರಬೇತಿ ಕೋರ್ಸ್ ಆರಂಭವಾಗಲಿದೆ ಎಂದು ವಿದ್ಯಾಲಯದ ಛೇರ್ಮನ್ ಶಿವಪ್ರಕಾಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತರಬೇತಿಯು ಮೂರು ತಿಂಗಳ ಅವಧಿಯದ್ದಾಗಿದ್ದು, ಪರಿಣಿತ ತಜ್ಞರಿಂದ ಶನಿವಾರ ಸಂಜೆ ಮತ್ತು ಭಾನುವಾರ ಬೆಳಿಗ್ಗೆ ಆಫ್‌ಲೈನ್ ಮತ್ತು ಆನ್‌ಲೈನ್ ತರಗತಿಗಳು ನಡೆಯಲಿದೆ. ತರಬೇತಿ ಪೂರೈಸಿದವರಿಗೆ ದೇಶ, ವಿದೇಶದಲ್ಲಿ ಉದ್ಯೋಗಾವಕಾಶ ದೊರೆಯಲಿದೆ. ಆಸಕ್ತರು ಮೊ.ಸಂ. 95382 05222 ಸಂಪರ್ಕಿಸಬಹುದು ಎಂದು ಮಾಹಿತಿ ನೀಡಿದರು.



ಸುದ್ದಿಗೋಷ್ಠಿಯಲ್ಲಿ ಮೈಸೂರು ಯೋಗ ಒಕ್ಕೂಟದ ಅಧ್ಯಕ್ಷ ದೇವರಾಜ್, ಮೈಸೂರು ಯೋಗೀಸ್ ಸಂಸ್ಥೆ ಸಂಸ್ಥಾಪಕ ಯೋಗಪ್ರಕಾಶ್, ಹಿಮಾಲಯ ಯೋಗ ಫೌಂಡೇಶನ್ ಸಂಸ್ಥಾಪಕ ಅಧ್ಯಕ್ಷ ಎನ್.ಅನಂತ, ಯೋಗ ಮಹಾವಿದ್ಯಾಲಯ ಪ್ರಾಧ್ಯಾಪಕರಾದ ಬಿ.ಜೆ.ವಿಜಯ್‌ಕುಮಾರ್, ಎಸ್.ಕಾವ್ಯ, ಬಿ.ಕೆ.ಲಕ್ಷ್ಮಿ ಉಪಸ್ಥಿತರಿದ್ದರು.

ಜೂ.28ಕ್ಕೆ ರಾಜ್ಯಮಟ್ಟದ ಯೋಗ ಸಮ್ಮೇಳನ

ಮೈಸೂರು, ಜೂ.9(ಜಿಎ)–ಕರ್ನಾಟಕ ಯೋಗ ಶಿಕ್ಷಕರ ಒಕ್ಕೂಟದ ವತಿಯಿಂದ ಜೂ.28ರಂದು ನಗರದ ಶಾರದಾ ವಿಲಾಸ ಶತಮಾನೋತ್ಸವ ಭವನದಲ್ಲಿ ರಾಜ್ಯ ಮಟ್ಟದ ತೃತೀಯ ಯೋಗ ಸಮ್ಮೇಳನ ಆಯೋಜಿಸಲಾಗಿದೆ ಎಂದು ಕಾರ್ಯಾಧ್ಯಕ್ಷ ಡಾ.ಎಸ್.ಪಿ. ಯೋಗಣ್ಣ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 9ರಿಂದ ರಾತ್ರಿ 7ರವರೆಗೆ ಸಮ್ಮೇಳನ ನಡೆಯಲಿದೆ. ಈ ವೇಳೆ ಭಾರತೀಯ ಪ್ರಾಚೀನ ಯೋಗದ ಪರಿಣಾಮಗಳನ್ನು ಆಧುನಿಕ ವೈದ್ಯ ವಿಜ್ಞಾನದ ಹಿನ್ನೆಲೆಯಲ್ಲಿ ಚರ್ಚಿಸಲಾಗುವುದು. ಈ ನಿಟ್ಟಿನಲ್ಲಿ ಗೋಷ್ಠಿಗಳು ನಡೆಯಲಿವೆ. ಹಿರಿಯ ಯೋಗ ವಿದ್ವಾಂಸ ಡಾ.ಬಿ.ಎನ್.ಎಸ್. ಅಯ್ಯಂಗಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಗಣಪತಿ ಸಚ್ಚಿದಾನಂದ ಆಶ್ರಮದ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಸಮ್ಮೇಳನ ಉದ್ಘಾಟಿಸುವರು ಎಂದರು.

ಮುಖ್ಯ ಅತಿಥಿಗಳಾಗಿ ಶಾಸಕರಾದ ಜಿ.ಟಿ. ದೇವೇಗೌಡ, ಟಿ.ಎಸ್. ಶ್ರೀವತ್ಸ, ವಿಧಾನ ಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಬಿಜೆಪಿ ಮುಖಂಡ ಕವೀಶ್‌ಗೌಡ, ಸಾಹಿತಿ ಡಾ.ಕೆ.ಲೀಲಾ ಪ್ರಕಾಶ್, ಪ್ರೊ.ರಾಮಚಂದ್ರ ಜಿ.ಭಟ್, ಡಾ.ಕೆ.ಎಲ್. ಶಂಕರ ನಾರಾಯಣ ಜೋಯಿಸ್ ಆಗಮಿಸಲಿದ್ದಾರೆ ಎಂದರು. ಗೋಷ್ಠಿಯಲ್ಲಿ ಡಾ.ರಮೇಶ್ ಶೆಟ್ಟಿ, ಕೆ.ಜಿ.ದೇವರಾಜ್, ಬಿ.ಪಿ.ಮೂರ್ತಿ, ಎನ್.ಅನಂತ, ಹರ್ಷವರ್ಧನ್ ಮತ್ತಿತರರು ಉಪಸ್ಥಿತರಿದ್ದರು.

ಐಯ್ಯಂಗಾರ್ ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಆಹ್ವಾನ

ಮೈಸೂರು, ಜೂ.9–ಮೈಸೂರು ಮತ್ತು ಮಂಡ್ಯ ಜಿಲ್ಲೆಯ ಹೆಬ್ಬಾರ್ ಶ್ರೀ ವೈಷ್ಣವ ಐಯ್ಯಂಗಾರ್ ಪಂಗಡಕ್ಕೆ ಸೇರಿದ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಂದ ಹೆಬ್ಬಾರ್ ಶ್ರೀ ವೈಷ್ಣವ ವೆಲ್‌ಫೇರ್ ಟ್ರಸ್ಟ್‌ನಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ವಿದ್ಯಾರ್ಥಿಯು ಪಿಯುಸಿ ಪರೀಕ್ಷೆ ತೇರ್ಗಡೆಯಾಗಿರಬೇಕು ಹಾಗೂ ಕಡ್ಡಾಯವಾಗಿ ಮುಂದೆ ತಾಂತ್ರಿಕ ವಿಭಾಗದಲ್ಲಿ ವ್ಯಾಸಂಗ ಮುಂದುವರೆಸಬೇಕು. ಹೆಚ್ಚಿನ ವಿದ್ಯಾರ್ಹತೆ ಹೊಂದಿರುವಂತಹ ವಿದ್ಯಾರ್ಥಿಗಳನ್ನು ಪರಿಗಣಿಸಲಾಗುತ್ತದೆ. ಜುಲೈ 15, 2026ರ ಒಳಗೆ ಭರ್ತಿ ಮಾಡಿದ ಅರ್ಜಿಗಳನ್ನು ತಲುಪಿಸಬೇಕು. ಹೆಚ್ಚಿನ ಮಾಹಿತಿಗೆ ಹೆಚ್.ಜಿ.ಸತ್ಯನಾರಾಯಣ ಅವರನ್ನು ಮೊಬೈಲ್ 9480194204 ಮುಖಾಂತರ ಸಂಪರ್ಕಿಸಬಹುದು.

ಪ.ಪೂರ್ವ ಕಾಲೇಜು ಉಪನ್ಯಾಸಕರ ಸಂಘದ ನೂತನ ಪದಾಧಿಕಾರಿಗಳು

ಮೈಸೂರು, ಜೂ.9–ಪದವಿಪೂರ್ವ ಕಾಲೇಜು ಉಪನ್ಯಾಸಕರ ಸಂಘದ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಜಿಲ್ಲಾಧ್ಯಕ್ಷರಾಗಿ ಎಂ.ಎಂ. ಮಹದೇವ, ಉಪಾಧ್ಯಕ್ಷರಾಗಿ ವೀಣಾ ಆರ್.ಬಿ., ಕಾರ್ಯಾಧ್ಯಕ್ಷರಾಗಿ ಡಾ.ಉಮೇಶ್ ಬೇವಿನಹಳ್ಳಿ, ಪ್ರಧಾನ ಕಾರ್ಯದರ್ಶಿಯಾಗಿ ಕ್ಯಾತಮಾರಹಳ್ಳಿ ಎಂ.ಮಹೇಶ, ಖಜಾಂಚಿಯಾಗಿ ಮಧುಸೂದನ ಎಚ್.ಕೆ., ಪ್ರಧಾನ ಸಂಘಟನಾ ಕಾರ್ಯದರ್ಶಿಯಾಗಿ ಡಾ.ಆಶಾ ಎಂ.ಆರ್., ಕಾರ್ಯದರ್ಶಿಯಾಗಿ ಸಂಜಯ್ ಸಿ.ಪಿ., ಜಂಟಿ ಕಾರ್ಯದರ್ಶಿಯಾಗಿ ಡಾ.ರವಿಕುಮಾರ್ ಆರ್., ಸಂಚಾಲಕರಾಗಿ ಗಂಗಾಧರ್ ಆಯ್ಕೆಯಾಗಿದ್ದಾರೆ.

ಪರಿಸರ ಸಂರಕ್ಷಣೆಯಿಂದಷ್ಟೇ ಮುಂದಿನ ಪೀಳಿಗೆಗೆ ಆರೋಗ್ಯ ಕೊಡುಗೆ ಸಾಧ್ಯ

- ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ ಸಲಹೆ
- ಪ್ರಕೃತಿಯ ಕೊಡುಗೆಗಳ ಸುರಕ್ಷತೆ, ಸ್ವಚ್ಛತೆಯಿಂದಷ್ಟೇ ಮನುಕುಲಕ್ಕೆ ಉಳಿಗಾಲ

ಮೈಸೂರು, ಜೂ.9(ಜಿಎ)–ಮುಂದಿನ ಪೀಳಿಗೆಗೆ ಉತ್ತಮ ಆರೋಗ್ಯ ಕೊಡುಗೆ ನೀಡಲು ಪರಿಸರ ಸಂರಕ್ಷಣೆ ಅಗತ್ಯ ಎಂದು ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಚಿಗುರು ಸಾಹಿತ್ಯ ಬಳಗ, ವಾಸುದೇವ ಮಹಾರಾಜ್ ಫೌಂಡೇಶನ್‌ನಿಂದ ಆಯೋಜಿಸಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ ಅವರು, ಭೂಮಿ, ಗಾಳಿ, ನೀರು ಪ್ರಕೃತಿ ನೀಡಿರುವ ವಿಶೇಷ ಕೊಡುಗೆ. ಇವುಗಳ ಸುರಕ್ಷತೆ, ಸ್ವಚ್ಛತೆಗೆ ಆದ್ಯತೆ ನೀಡುವುದರಿಂದ ಮನುಕುಲವನ್ನು ರಕ್ಷಿಸಬಹುದು ಎಂದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಚಿಗುರು ಸಾಹಿತ್ಯ ಬಳಗ, ವಾಸುದೇವ ಮಹಾರಾಜ್ ಫೌಂಡೇಶನ್‌ನಿಂದ ಆಯೋಜಿಸಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ 'ಪರಿಸರ ಸಂರಕ್ಷಣಾ ರತ್ನ' ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು.


ಈ ಹಿಂದೆ ಮಲೆನಾಡಿನಲ್ಲಿ ಹರಿಯುವ ಝರಿಗಳ ನೀರನ್ನು ಕುಡಿದು ಬೆಳೆದವರು ಈಗ ಅದೇ ಕೆಲಸ ಮಾಡಲು ಹೋದರೆ ಅದು ವಿಷವಾಗಿದೆ ಎಂದು ಎಚ್ಚರಿಸುವವರು ಇದ್ದಾರೆ. ಕಾಫಿ ತೋಟಗಳಲ್ಲಿ ಮಣ್ಣಿಗೆ ಬೆರೆಸುವ ರಸಗೊಬ್ಬರ, ಕೀಟನಾಶಕಗಳು ನೀರಿನಲ್ಲಿ ಬೆರೆತು ನದಿಗಳು ಅಪಾಯಕಾರಿ ಎನ್ನಿಸುತ್ತಿವೆ. ಇದಲ್ಲದೆ ಪರಿಸರದ ಮೇಲೆ ವಿವಿಧ ರೀತಿಯಲ್ಲಿ ಹಾನಿಯುಂಟು ಮಾಡುತ್ತಿದ್ದು, ಇದೇ ಪರಿಸ್ಥಿತಿ ಮುಂದುವರಿದಲ್ಲಿ ಶುದ್ಧ ಗಾಳಿಯನ್ನೂ ಹಣ ನೀಡಿ ಖರೀದಿಸಿ ಸೇವಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಹಿರಿಯ ಸಮಾಜ ಸೇವಕ ರಘುರಾಂ ವಾಜಪೇಯಿ ಮಾತನಾಡಿ, ಈಗಾಗಲೇ ಭೂಮಿ ವಿಷಮಯ ಪರಿಸ್ಥಿತಿಯತ್ತ ಸಾಗಿದೆ. ಹುಲ್ಲುಗಾವಲುಗಳನ್ನು ಲೇಔಟ್ ಮಾಡುವ ಭರದಲ್ಲಿ ನಾಶ ಮಾಡುತ್ತಿದ್ದೇವೆ. ನದಿಗಳನ್ನು ಕಲುಷಿತಗೊಳಿಸುತ್ತಿದ್ದೇವೆ. ವಾಯುಮಾಲಿನ್ಯಕ್ಕೂ ಕಾರಣರಾಗುತ್ತಿದ್ದೇವೆ. ಇದನ್ನು ಸರಿಪಡಿಸದಿದ್ದರೆ ಮುಂದಿನ ಪೀಳಿಗೆ ನಮಗೆ ಶಾಪ ಹಾಕುವುದು ತಪ್ಪಲ್ಲ ಎಂದರು.

ಕಾರ್ಯಕ್ರಮದಲ್ಲಿ ಗರ್ಭಧಾರಣಾ ತಜ್ಞ ಡಾ.ಸಿ.ಶರತ್‌ಕುಮಾರ್, ಕರ್ನಾಟಕ ಸುಗಮ ಸಂಗೀತ ಪರಿಷತ್ ನಗರ ಘಟಕದ ಅಧ್ಯಕ್ಷ ನಾಗರಾಜ್ ವಿ.ಭೈರಿ ಅವರಿಗೆ 'ಪರಿಸರ ಸಂರಕ್ಷಣಾ ರತ್ನ' ಪ್ರಶಸ್ತಿ ಪ್ರದಾನ ಮಾಡಿ ಅಭಿನಂದಿಲಾಯಿತು.

ಈ ವೇಳೆ ಪರಿಸರ ದಿನಾಚರಣೆ ಪ್ರಸ್ತುತ ಸಾಲಿನ ಘೋಷವಾಕ್ಯ 'ನನ್ನ ತಂದೆ ತಾಯಿ ನನ್ನ ಭೂಮಿ' ಕುರಿತು ಫೌಂಡೇಶನ್ ಅಧ್ಯಕ್ಷ ಎಂ.ವಿ.ನಾಗೇಂದ್ರ ಬಾಬು ರಚಿಸಿದ ಭಿತ್ತಿಚಿತ್ರವನ್ನು ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಕಸಾಪ ಜಿಲ್ಲಾ ಘಟಕದ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನ ಸಿಇಒ ಕೆ.ಆರ್.ಯೋಗಾನರ ಸಿಂಹನ್, ಸುಯೋಗ್ ಆಸ್ಪತ್ರೆ ಅಧ್ಯಕ್ಷ ಎಸ್.ಪಿ. ಯೋಗಣ್ಣ, ಲೇಖಕಿ ಬಿ.ಕೆ.ಮೀನಾಕ್ಷಿ, ಬಳಗದ ಅಧ್ಯಕ್ಷ ಎನ್.ಅನಂತ ಇತರರು ಉಪಸ್ಥಿತರಿದ್ದರು.

ಪಿರಮಿಡ್ ಧ್ಯಾನ ಕುರಿತ ಕಾರ್ಯಕ್ರಮ



ಮೈಸೂರು,ಜೂ.9(ಜಿಎ)–ದಿ ಪಿರಮಿಡ್ ಸ್ಪಿರಿಚ್ಯುಯಲ್ ಸೊಸೈಟಿ ಮೂವ್ಮೆಂಟ್ ವತಿಯಿಂದ ಜೂ.10 ಮತ್ತು 11ರಂದು ನಗರದ ಸರಸ್ವತಿಪುರಂನ ಬಂದಂತಮ್ಮ ಕಾಳಮ್ಮ ಸಮುದಾಯ ಭವನದಲ್ಲಿ ಪಿರಮಿಡ್ ಧ್ಯಾನ ಕುರಿತ ಕಾರ್ಯಕ್ರಮ ನಡೆಯಲಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಪಿರಮಿಡ್ ಧ್ಯಾನ ಮಾಸ್ಟರ್ ಅರುಣ್ ಕುಮಾರ್ ಈ ವಿಷಯ ತಿಳಿಸಿ, ಜಗದ್ಗುರು ಯೋಗೀಶ್ವರರು ಬ್ರಹ್ಮರ್ಷಿ ಪಿತಾಮಹ ಡಾ.ಸುಭಾಷ್ ಪತ್ರೀಜಿ ಅವರ ಆಶೀರ್ವಾದದೊಡನೆ ಈ ಕಾರ್ಯಕ್ರಮ ನಡೆಯಲಿದೆ. ಎರಡು ದಿನವೂ ಬೆಳಗ್ಗೆ 9 ರಿಂದ ರಾತ್ರಿ 9ರವರೆಗೆ ನಡೆಯಲಿದೆ. ಧ್ಯಾನಾಸಕ್ತರು, ಸಾರ್ವಜನಿಕರು ಪಾಲ್ಗೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗೆ ದೂ. 9141779799 ಅನ್ನು ಸಂಪರ್ಕಿಸಬಹುದಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಶ್ವೇತಾ ಅರುಣ್ ಕುಮಾರ್, ಎಂ.ಎಸ್.ಮಂಜೇಗೌಡ, ಚಂಪಕಮಾಲಾ, ಅರುಣಕುಮಾರಿ ಉಪಸ್ಥಿತರಿದ್ದರು.

ಮಡಿವಾಳ ಸಮಾಜದ ಮೊದಲ ಶಾಸಕರಾಗುವ ಹೆಗ್ಗಳಿಕೆಗೆ ಪಾತ್ರರಾದ ರಘು ಕೌಟಿಲ್ಯ

ಸಾಮಾಜಿಕ ನ್ಯಾಯಕ್ಕೆ ಬಿಜೆಪಿ ಬದ್ಧತೆ: ದಯಾನಂದ ಪಟೇಲ್

ಮೈಸೂರು, ಜೂ.9–12ನೇ ಶತಮಾನದಲ್ಲಿಯೇ ವಿಶ್ವಗುರು ಬಸವಣ್ಣನವರ ಮಾರ್ಗದರ್ಶನದಲ್ಲಿ, ಅಲ್ಲಮ ಪ್ರಭುಗಳ ಅಧ್ಯಕ್ಷತೆಯಲ್ಲಿ ನಡೆದ ಅನುಭವ ಮಂಟಪವು ಪ್ರಜಾಪ್ರಭುತ್ವದ ಪರಿಕಲ್ಪನೆಗೆ ಭದ್ರ ಅಡಿಪಾಯ ಹಾಕಿತ್ತು. ಸಮಾನತೆ, ಸಾಮಾಜಿಕ ನ್ಯಾಯ ಮತ್ತು ಕಾಯಕ ತತ್ವಗಳನ್ನು ಪ್ರತಿಪಾದಿಸಿದ ಬಸವಾದಿ ಪ್ರಮಥರು ವಿಶ್ವಕ್ಕೆ ಹೊಸ ದಿಕ್ಕನ್ನು ತೋರಿದ್ದರು

ಆ ಐತಿಹಾಸಿಕ ಅನುಭವ ಮಂಟಪದಲ್ಲಿ ಕಾಯಕ ಸಮುದಾಯದ ಪ್ರತಿನಿಧಿಯಾಗಿ ಮಡಿವಾಳ ಮಾಚಿದೇವರು ಸಭಾನಾಯಕರಾಗಿ ಕಾರ್ಯನಿರ್ವಹಿಸಿದ್ದು ಕಾಯಕ ವರ್ಗಗಳ ಸಾಮಾಜಿಕ ಮತ್ತು ರಾಜಕೀಯ ಪ್ರಾತಿನಿಧ್ಯಕ್ಕೆ ಮಹತ್ವದ ಸ್ಥಾನ ದೊರೆತಿರುವುದಕ್ಕೆ ಸಾಕ್ಷಿಯಾಗಿದೆ.

ಇದೇ ಪರಂಪರೆಯನ್ನು ಮುಂದುವರಿಸಿರುವ ಭಾರತೀಯ ಜನತಾ ಪಕ್ಷವು ಕಾಯಕ ಸಮಾಜದ ಹಿಂದುಳಿದ ವರ್ಗಗಳಲ್ಲಿ ಒಂದಾದ ಮಡಿವಾಳ ಸಮಾಜಕ್ಕೆ ಮೊದಲ ಬಾರಿಗೆ ವಿಧಾನ ಪರಿಷತ್ತಿನಲ್ಲಿ ಪ್ರಾತಿನಿಧ್ಯ ನೀಡುವ ಮೂಲಕ ರಘು ಕೌಟಿಲ್ಯ ಅವರನ್ನು ಶಾಸಕರನ್ನಾಗಿ ಆಯ್ಕೆ ಮಾಡಿರುವುದು ಐತಿಹಾಸಿಕ ನಿರ್ಧಾರವಾಗಿದೆ ಎಂದು ಬಿಜೆಪಿ ಮೈಸೂರು ಜಿಲ್ಲಾ ಕಾರ್ಯದರ್ಶಿ ದಯಾನಂದ ಪಟೇಲ್ ಅಭಿಪ್ರಾಯಪಟ್ಟಿದ್ದಾರೆ.



ರಘು ಕೌಟಿಲ್ಯ

ಸಮಾಜದ ಎಲ್ಲ ವರ್ಗಗಳಿಗೂ ರಾಜಕೀಯ ಅವಕಾಶಗಳನ್ನು ಒದಗಿಸುವ ಮೂಲಕ ಸಾಮಾಜಿಕ ನ್ಯಾಯದ ಪರವಾಗಿ ಬಿಜೆಪಿ ಪಕ್ಷ ನಿರಂತರವಾಗಿ ಕಾರ್ಯ ನಿರ್ವಹಿಸುತ್ತಿದೆ ಎಂಬುದಕ್ಕೆ ರಘು ಕೌಟಿಲ್ಯ ಅವರ ಆಯ್ಕೆಯೇ ಸಾಕ್ಷಿ.

ಹಿಂದುಳಿದ, ಶ್ರಮಿಕ ಹಾಗೂ ಕಾಯಕ ಸಮುದಾಯಗಳ ಧ್ವನಿಯಾಗಿ ಗುರುತಿಸಿಕೊಂಡಿರುವ ರಘು ಕೌಟಿಲ್ಯ ಅವರಿಗೆ ದೊರೆತಿರುವ ಈ ಗೌರವವು ಮಡಿವಾಳ ಸಮಾಜ ಸೇರಿದಂತೆ ಸಮಸ್ತ ಕಾಯಕ ವರ್ಗಗಳಿಗೆ ಹೆಮ್ಮೆಯ ವಿಷಯವಾಗಿದೆ.

ರಾಜ್ಯ ಹಿಂದುಳಿದ ವರ್ಗಗಳ ಮೋರ್ಚಾದ ಅಧ್ಯಕ್ಷರಾಗಿ ಸಂಘಟನಾ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿರುವ ರಘು ಕೌಟಿಲ್ಯ ಅವರು ವಿಧಾನ ಪರಿಷತ್ತಿನಲ್ಲಿ ಜನಪರ ಮತ್ತು ಸಮಾಜಪರ ಧ್ವನಿಯಾಗಿ ಕಾರ್ಯನಿರ್ವಹಿಸಲಿದ್ದಾರೆ ಎಂಬ ವಿಶ್ವಾಸವನ್ನು ಸಮಾಜದ ಮುಖಂಡರು ವ್ಯಕ್ತಪಡಿಸಿದ್ದಾರೆ.

ರಘು ಕೌಟಿಲ್ಯ ಅವರ ಆಯ್ಕೆಗೆ ಭಾರತೀಯ ಜನತಾ ಪಕ್ಷದ ವರಿಷ್ಠ ನಾಯಕರಿಗೆ ಕೃತಜ್ಞತೆ ಸಲ್ಲಿಸಿರುವ ಬಿಜೆಪಿ ಮೈಸೂರು ಜಿಲ್ಲಾ ಕಾರ್ಯದರ್ಶಿ ದಯಾನಂದ ಪಟೇಲ್, ಈ ಆಯ್ಕೆಯು ಸಾಮಾಜಿಕ ನ್ಯಾಯ, ಸಮಾನ ಅವಕಾಶ ಮತ್ತು ಕಾಯಕ ಸಮುದಾಯಗಳ ಸಬಲೀಕರಣದ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಯಾಗಿದೆ ಎಂದು ತಿಳಿಸಿದ್ದಾರೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಜೂ.9–ಕರ್ನಾಟಕ ರಾಜ್ಯ ಸರ್ಕಾರಿ ಮುಸ್ಲಿಂ ನೌಕರರ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾ ಘಟಕ ವತಿಯಿಂದ 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಕೇಂದ್ರ ಪಠ್ಯದಲ್ಲಿ ಶೇ.85 ಮತ್ತು ರಾಜ್ಯ ಪಠ್ಯದಲ್ಲಿ ಶೇ.90 ಮತ್ತು ಅದಕ್ಕಿಂತ ಹೆಚ್ಚು ಅಂಕಗಳೊಂದಿಗೆ ತೇರ್ಗಡೆಯಾಗಿರುವ ಮೈಸೂರು ಜಿಲ್ಲೆಯ ಮುಸ್ಲಿಂ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಅಂಕಪಟ್ಟಿ, ಆಧಾರ್ ಕಾರ್ಡ್ ಮತ್ತು ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ ಫೋಟೋ ಸಹಿತ ಅಂಚೆಯ ಮೂಲಕ ಶ್ರೀ ಅಜೀಜ್ ಖಾನ್, ನಂ.852, 2ನೇ ಕ್ರಾಸ್, 2ನೇ ಹಂತ, ರಾಜೀವನಗರ, ಮೈಸೂರು 570019 ಇಲ್ಲಿಗೆ ಜೂ.15ರೊಳಗೆ ಅರ್ಜಿ ಸಲ್ಲಿಸುವಂತೆ ಹಾಗೂ ವಿವರಗಳಿಗೆ 98809 72551, 98458 29225 ಸಂಪರ್ಕಿಸಬಹುದು.

ಮಕ್ಕಳ ವಾರಾಂತ್ಯ ರಂಗಶಾಲೆಗೆ ಜೂ.14ರಿಂದ ಸಂದರ್ಶನ

ಮೈಸೂರು: ನಟನ ರಂಗಶಾಲೆಯು 8ರಿಂದ 14ವರ್ಷದ ಮಕ್ಕಳ ಮನೋವಿಕಾಸ ಮತ್ತು ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗುವಂತೆ ಅಭಿನಯ ಮತ್ತು ರಂಗ ತರಬೇತಿ ನೀಡುವ ನಿಟ್ಟಿನಲ್ಲಿ ಪ್ರತಿ ಶನಿವಾರ ಮಧ್ಯಾಹ್ನ 4.30ರಿಂದ 6.30ರವರೆಗೆ ಮತ್ತು ಭಾನುವಾರ ಬೆಳಿಗ್ಗೆ 10ರಿಂದ 12ರವರೆಗೆ ತರಗತಿಯನ್ನು ನಡೆಸುತ್ತಿದ್ದು, 2026–27ನೇ ಸಾಲಿನ ಪ್ರವೇಶ ಪ್ರಕ್ರಿಯೆ ಮತ್ತು ಮಕ್ಕಳ ಸಂದರ್ಶನ ಜೂನ್14 ರಂದು ಬೆಳಿಗ್ಗೆ 10 ಗಂಟೆಗೆ ಸರಿಯಾಗಿ ರಾಮಕೃಷ್ಣನಗರದಲ್ಲಿರುವ ನಟನ ರಂಗಶಾಲೆಯಲ್ಲಿ ನಡೆಯಲಿದೆ. ಆಯ್ಕೆಯಾದ ಮಕ್ಕಳು ರಂಗ ತರಬೇತಿ ಪಡೆದು ಪ್ರದರ್ಶನಗಳಲ್ಲಿ ಪಾಲ್ಗೊಂಡು ನಂತರ ವರುಷದ ಕೊನೆಯಲ್ಲಿ ಪ್ರಮಾಣ ಪತ್ರ ಪಡೆದುಕೊಳ್ಳುತ್ತಾರೆ. ಆಸಕ್ತರು ಮೇಲ್ಕಂಡ ದಿನಾಂಕದಂದೇ ಸಂದರ್ಶನದಲ್ಲಿ ಭಾಗವಹಿಸತಕ್ಕದ್ದು. ಆಯ್ಕೆಯಾದ ಸೀಮಿತ ಮಕ್ಕಳಿಗೆ ಮಾತ್ರ ತರಗತಿಗೆ ಸೇರುವ ಅವಕಾಶವಿದ್ದು, ಆ ದಿನವೇ ಅರ್ಜಿ ಪಡೆದು ಸಂದರ್ಶನದಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ 7259537777, 9480468327, 9845595505 ಸಂಪರ್ಕಿಸಬಹುದು.

ಪರಿಸರ ಉಳಿಸಿ ಆರೋಗ್ಯ ಬೆಳೆಸಿ: ಯುವಜನರಲ್ಲಿ ಜಾಗೃತಿ ಕಾರ್ಯಕ್ರಮ

ಮೈಸೂರು, ಜೂ. 9– ಚಾಮುಂಡೇಶ್ವರಿ ಗ್ರಾಮಾಂತರ ಮಂಡಲ ಬಿಜೆಪಿ ವತಿಯಿಂದ ಯುವಜನರಲ್ಲಿ ಪರಿಸರ ಸಂರಕ್ಷಣೆ, ಆರೋಗ್ಯಕರ ಜೀವನಶೈಲಿ ಹಾಗೂ ಸಾಮಾಜಿಕ ಜವಾಬ್ದಾರಿಯ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ಹಿನಕಲ್‌ನ ನನ್ನೇಶ್ವರ ಕಲ್ಯಾಣಿಯಿಂದ ಅಟಲ್ ಬಿಹಾರಿ ವಾಜಪೇಯಿ ವೃತ್ತದವರೆಗೆ ಭವ್ಯ ಕಾಲ್ನಡಿಗೆ ಜಾಥಾವನ್ನು ಹಮ್ಮಿಕೊಳ್ಳಲಾಯಿತು.

ಜಾಥಾವನ್ನು ಉದ್ದೇಶಿಸಿ ಮಾತನಾಡಿದ ಮಂಡಲ ಅಧ್ಯಕ್ಷ ಪೈ.ಟಿ. ರವಿ ಲಕ್ಷೀಪುರ, ಇಂದಿನ ಯುವಜನತೆ ದೇಶದ ಶಕ್ತಿಯಾಗಿದ್ದು, ಪರಿಸರ ಸಂರಕ್ಷಣೆ ಮತ್ತು ಉತ್ತಮ ಆರೋಗ್ಯದ ಬಗ್ಗೆ ಅರಿವು ಹೊಂದುವುದು ಕಾಲದ ಅಗತ್ಯವಾಗಿದೆ. ಪ್ರಕೃತಿಯನ್ನು ಕಾಪಾಡುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದ್ದು, ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಇಂತಹ ಜಾಗೃತಿ ಕಾರ್ಯಕ್ರಮಗಳು ಅತ್ಯಂತ ಅವಶ್ಯಕ ಎಂದು ತಿಳಿಸಿದರು.



ಚಾಮುಂಡೇಶ್ವರಿ ಗ್ರಾಮಾಂತರ ಮಂಡಲ ಬಿಜೆಪಿ ವತಿಯಿಂದ ಹಿನಕಲ್‌ನ ನನ್ನೇಶ್ವರ ಕಲ್ಯಾಣಿಯಿಂದ ಅಟಲ್ ಬಿಹಾರಿ ವಾಜಪೇಯಿ ವೃತ್ತದವರೆಗೆ ಭವ್ಯ ಕಾಲ್ನಡಿಗೆ ಜಾಥಾವನ್ನು ಹಮ್ಮಿಕೊಳ್ಳಲಾಯಿತು.

ಹಿರಿಯ ಮುಖಂಡರಾದ ಎಸ್.ಆರ್. ಗೋಪಾಲ್‌ರಾವ್ ಮಾತನಾಡಿ, ಒಂದು ಮರ ಸಾವಿರ ಜೀವಗಳಿಗೆ ಆಸರೆಯಾಗುತ್ತದೆ. ಪರಿಸರವನ್ನು ಕಾಪಾಡುವುದು ಎಂದರೆ ಭವಿಷ್ಯದ ಪೀಳಿಗೆಗೆ ಉತ್ತಮ ಬದುಕಿನ ಭದ್ರತೆಯನ್ನು ಒದಗಿಸುವುದು. ಯುವಕರು ಪರಿಸರ ಸಂರಕ್ಷಣೆಯ ರಾಯಭಾರಿಗಳಾಗಿ ಸಮಾಜದಲ್ಲಿ ಮಾದರಿಯಾಗಬೇಕು ಎಂದು ಕರೆ ನೀಡಿದರು.

ಹಿರಿಯ ಮುಖಂಡರಾದ ಹಿನಕಲ್ ಶ್ರೀನಿವಾಸ್, ಮಂಡಲ ಉಪಾಧ್ಯಕ್ಷರಾದ ಎನ್.ಅರುಣ್‌ಕುಮಾರ್‌ಗೌಡ, ಮಾಜಿ ಪ್ರಧಾನ ಕಾರ್ಯದರ್ಶಿ ಗೋಪಾಲ್ ಗೌಡ ಮಾತನಾಡಿದರು. ಈ ಸಂದರ್ಭದಲ್ಲಿ ಮಂಡಲ ಅಧ್ಯಕ್ಷ ಪೈ.ಟಿ. ರವಿ ಲಕ್ಷೀಪುರ, ಪ್ರಧಾನ ಕಾರ್ಯದರ್ಶಿ ಶಿವಕುಮಾರ್ ಚಿಕ್ಕನ್ನ, ಮುಖಂಡ ರಾದ ಹಿನಕಲ್ ಶ್ರೀನಿವಾಸ್, ರಾಜಕುಮಾರ್, ಈರೇಗೌಡ, ಮೋನಿಕಾ, ಮಾಜಿ ಪ್ರಧಾನ ಕಾರ್ಯದರ್ಶಿ ಗೋಪಾಲ್‌ಗೌಡ, ಬೋಗಾದಿ ನಂದೀಶ್, ಕೂರ್ಗಳ್ಳಿ ರೇವಣ್ಣ, ಮರಿಸ್ವಾಮಿ ನಾಯಕ್, ಬೆಳವಾಡಿ ಶ್ರೀನಿವಾಸ್, ವೀರಭದ್ರಸ್ವಾಮಿ, ವೆಂಕಟೇಶ್ವರರಾವ್, ವೆಂಕಟೇಶ್ ಕಾರಂತ, ಶರತ್, ಶಿವಕುಮಾರ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

10.06.2026 ಬುಧವಾರ, ಮಳೆ ನಕ್ಷತ್ರ: ಮೃಗಶಿರ 08.06.2026ರಿಂದ 21.06.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ (ಅಧಿಕ) ಮಾಸ, ಕೃಷ್ಣ ಪಕ್ಷ, ತಿಥಿ: ದಶಮಿ, ನಕ್ಷತ್ರ: ರೇವತಿ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಬೆನ್ನುನೋವು, ಕತ್ತು ನೋವಿನ ಸಮಸ್ಯೆಗಳಿಗೆ ಆಕ್ಯುಪಂಕ್ಚರ್, ಯೋಗ ಚಿಕಿತ್ಸಾ ಶಿಬಿರ, ಅರ್ಥ್ರೈಟಿಸ್ ಚಿಕಿತ್ಸಾ ಶಿಬಿರ, ಕುತ್ತಿಗೆ ನೋವು ಹಾಗೂ ಬೆನ್ನು ನೋವು ತಪಾಸಣೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗೆ 9.30ರಿಂದ
- **ಜಗದ್ಗುರು ಶ್ರೀ ಮನ್ಮಧ್ವಾಚಾರ್ಯ ಮೂಲ ಸಂಸ್ಥಾನ, ಉತ್ತರಾದಿ ಮಠ, ಮೈಸೂರು, ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ:** ಶ್ರೀ ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರ 33 ದಿನಗಳ ಮೈಸೂರು ದಿಗ್ವಿಜಯ–2026, ಶ್ರೀ ಸತ್ಯ ಸಂಕಲ್ಪ ತೀರ್ಥರ ಹಾಗೂ ಶ್ರೀ ಸತ್ಯಸಂತುಷ್ಟ ತೀರ್ಥರ ದಿವ್ಯ ಸನ್ನಿಧಾನ, ವಿದ್ವಾನ್ ಕೊರ್ಲಹಳ್ಳಿ ಶ್ರೀನಿವಾಸಚಾರ್ಯ ಮತ್ತು ಶ್ರೀಮತಿ ಸುಧಾ ಕೊರ್ಲಹಳ್ಳಿ ಅವರಿಂದ ವೀಣಾವಾದನ, ಸ್ಥಳ: ಶ್ರೀ ಕಾಶಿ ವಿಶ್ವೇಶ್ವರ ಸನ್ನಿಧಿ ಆವರಣ, ಅಗ್ರಹಾರ, ಸಂಜೆ.5.30ಕ್ಕೆ
- **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್:** ಅಂಜನಾನಂದನೋತ್ಸವ, ಡಾ.ಎನ್.ಕೆ.ರಾಮಶೇಷನ್ ಅವರಿಂದ ಶ್ರೀ ಸುಂದರಕಾಂಡ ಪ್ರವಚನ, ಸ್ಥಳ: ಶ್ರೀರಾಮ ಮಂದಿರ, ಶಿವರಾಂಪೇಟೆ, ಸಂಜೆ 6.30ರಿಂದ.
- **ವ್ಯವಸ್ಥಾಪಕರು** : ಮೈಸೂರು ಧ್ಯಾನ ಮಹಾಯಜ್ಞ ದುಃಖ ನಿವಾರಣೆಯ ಮಾರ್ಗ ಕಾರ್ಯಕ್ರಮ, ಸ್ಥಳ: ಶ್ರೀ ಬಂದಂತಮ್ಮ ಕಾಳಮ್ಮ ಸಮುದಾಯ ಭವನ, ಸರಸ್ವತಿಪುರಂ, ಬೆಳಗ್ಗೆ 9 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ವಚನ ಬಾನುಲಿ– ಬಾನುಲಿ ಸರಣಿ, ಪ್ರಸ್ತುತಿ–ಪ್ರೊ. ಓ. ಎಲ್. ನಾಗಭೂಷಣಸ್ವಾಮಿ, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಠ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಪ್ರಾಯೋಜಿತ ಕಾರ್ಯಕ್ರಮ, ತಂತ್ರಜ್ಞಾನ ತರಂಗ, ಅಆಂಅ ಜೊತೆ, ಪ್ರಾಯೋಜಕರು-Center for Development of Advanced Computing, Bengaluru, 7.45 ಚಿತ್ರಗೀತೆಗಳು, 8.30 ಯೋಗದತ್ತ ಜಗತ್ತು–ಅಂತಾರಾಷ್ಟ್ರೀಯ ಯೋಗ ದಿನದ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ ಸರಣಿ, 8.45 ಚಿತ್ರಗೀತೆಗಳು, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ –ಪ್ರವೀಣ್ ಗೋಡ್ಖಿಂಡಿ–ಕೊಳಲು ವಾದನ ಹಾಗೂ ಪ್ರಕಾಶ್, ಸೋಂಟಕ್ಕೆ–ಹವಾಯಿ ಗಿಟಾರ್–ಜುಗಲ್ ಬಂದಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ–ಸ್ನೇಹಾ ಟಿ. ಎಸ್., 12.45 ಜನಪದ ಸಂಗೀತ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳ–ಭೂಮಿಕಾ ಅರುಣ್, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಮೈಸೂರು ಎ. ಚಂದನ್ ಕುಮಾರ್ ಕೊಳಲು ವಾದನ–ತ್ಯಾಗರಾಜರ ಕೃತಿಗಳು, 4.00 ಮಹಿಳಾರಂಗ, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ, ರೇಷ್ಮೆರಂಗ – ರೇಷ್ಮೆ ತಂತ್ರಜ್ಞಾನಗಳ ಕುರಿತ ಬಾನುಲಿ ಸರಣಿ ಪೊದೆ ಮಾದರಿಯಲ್ಲಿ ಹಿಪ್ಪುನೇರಳೆ ತೋಟದ ಸ್ಥಾಪನೆ ಹಾಗೂ ನಿರ್ವಹಣೆ ಈ ಕುರಿತು ಮೈಸೂರಿನ ಕೇಂದ್ರೀಯ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ವಿಜ್ಞಾನಿ ಡಾ. ಕೆ. ಸುರೇಶ್ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಎನ್. ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಡಾ. ಬಿ. ದೇವೇಂದ್ರಪ್ಪ, ಜಲತರಂಗ್ ವಾದನ–ತ್ಯಾಗರಾಜರ ಕೃತಿಗಳು, 8.30 ಹಿಂದಿ ಚಿತ್ರಗೀತೆಗಳು, 9.30 ಕ್ರೀಡಾಲೋಕ, 10.00 ಜನಪದ ಸಂಗೀತ, 10.30 ಸವಿನೆನಪು

ಮೈಸೂರಲ್ಲಿ ನಾಳೆಯಿಂದ ಹೀರೋ ವುಮೆನ್ಸ್ ನ್ಯಾಷನಲ್ ಗಾಲ್ಫ್ ಟೂರ್ನಮೆಂಟ್

■ 3 ದಿನ ಜೆಡಬ್ಲ್ಯೂಜೆಸಿ ಆವರಣದಲ್ಲಿ ಪಂದ್ಯಾವಳಿ ■ 51 ಆಟಗಾರ್ತಿಯರು ಭಾಗಿ ■ ಜೆಡಬ್ಲ್ಯೂಜೆಸಿ ಅಧ್ಯಕ್ಷ ಹೆಚ್.ಎಸ್.ಅರುಣ್‌ಕುಮಾರ್ ಮಾಹಿತಿ



ಮೈಸೂರಿನ ಜೆಡಬ್ಲ್ಯೂಜೆಸಿ ಆವರಣದಲ್ಲಿ ಪತ್ರಿಕಾಗೋಷ್ಠಿ ನಡೆಯಿತು. ಚಿತ್ರದಲ್ಲಿ ಎಡದಿಂದ ಕುಳಿತವರು, ಕ್ಲಬ್ ಖಜಾಂಚಿ ಡಿ.ವಿ.ಶ್ರೀಧರ್, ಕಾರ್ಯದರ್ಶಿ ಕೆ.ಎಸ್.ಸುಧೀರ್, ಟೂರ್ನಮೆಂಟ್ ನಿರ್ದೇಶಕ ಸಿ.ಎಸ್.ಕಿನಿ, ಟೂರ್ನಮೆಂಟ್ ಸಿಓಓ ವಿವೇಕ್‌ಕುಮಾರ್, ಕ್ಲಬ್ ಅಧ್ಯಕ್ಷ ಹೆಚ್.ಎಸ್.ಅರುಣ್‌ಕುಮಾರ್, ಇಂಡಿಯನ್ ಗಾಲ್ಫ್ ಯೂನಿಯನ್ ಟೂರ್ನಮೆಂಟ್ ನಿರ್ದೇಶಕ ಪರಮ್‌ಜಿತ್‌ಸಿಂಗ್, ಕ್ಲಬ್‌ನ ಕಮಿಟಿ ಸದಸ್ಯ ಫಾಲ್ಗುಣ ವಿ.ಅರಸ್, ನಿಂತವರು ಎಡದಿಂದ, ಕ್ಲಬ್ ಕಮಿಟಿ ಸದಸ್ಯರಾದ ಸುರೇಶ್ ಬಲರಾಮ್, ಮಂಜುನಾಥ್, ಗಾಲ್ಫ್ ಆಟಗಾರ್ತಿಯರಾದ ಪ್ರಣವಿ ಅರಸ್, ವಾಣಿ ಕಪೂರ್, ರಿದಿಮಾ, ಟ್ವೀಸಾ, ಕ್ಲಬ್ ಕಮಿಟಿ ಸದಸ್ಯ ಮಹದೇವಸ್ವಾಮಿ ಚಿತ್ರದಲ್ಲಿದ್ದಾರೆ.

ಮೈಸೂರು, ಜೂ.9(ಪಿಎಂ)– ಮೈಸೂರಿನ ಜಯಚಾಮರಾಜ ಒಡೆಯರ್ ಗಾಲ್ಫ್ ಕೋರ್ಸ್ ಆವರಣದಲ್ಲಿ ಜೂ.11ರಿಂದ 13 ರವರೆಗೆ 'ಹೀರೋ ವುಮೆನ್ಸ್ ನ್ಯಾಷನಲ್ ಗಾಲ್ಫ್ ಟೂರ್ನಮೆಂಟ್ 2026' ನಡೆಯಲಿದೆ ಎಂದು ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್ (ಜೆಡಬ್ಲ್ಯೂಜೆಸಿ) ಅಧ್ಯಕ್ಷ ಹೆಚ್.ಎಸ್.ಅರುಣ್‌ಕುಮಾರ್ ತಿಳಿಸಿದರು.

ಮೈಸೂರಿನ ಜೆಡಬ್ಲ್ಯೂಜೆಸಿ ಆವರಣದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 2024 ಮತ್ತು 2025ರಲ್ಲಿ ಈ ಟೂರ್ನಮೆಂಟ್ ಅನ್ನು ಯಶಸ್ವಿಯಾಗಿ ಆಯೋಜಿಸಿದ್ದ ಜೆಡಬ್ಲ್ಯೂಜೆಸಿ ಇದೀಗ ಮೂರನೇ ಬಾರಿಗೆ ಆಯೋಜಿಸುತ್ತಿದೆ. ಮೈಸೂರಿನ ಐತಿಹಾಸಿಕ ಜಯಚಾಮರಾಜ ಒಡೆಯರ್ ಗಾಲ್ಫ್ ಕೋರ್ಸ್‌ನಲ್ಲಿ ನಡೆಯಲಿರುವ ಟೂರ್ನಮೆಂಟ್‌ಗೆ ಜೂ.11ರಂದು ಬೆಳಗ್ಗೆ 7.30ಕ್ಕೆ ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತ ನಿತೀಶ್ ಪಾಟೀಲ್ ಚಾಲನೆ ನೀಡಲಿದ್ದಾರೆ ಎಂದು ಹೇಳಿದರು.

ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್ ಕೇವಲ ಒಂದು ಮೈದಾನವಲ್ಲ. ಇದು ಕ್ರೀಡಾ ಶ್ರೇಷ್ಠತೆ, ಯುವ ಪ್ರತಿಭೆಗಳ ಬೆಳೆಸಲು ಹಾಗೂ ಗಾಲ್ಫ್ ಕ್ರೀಡೆಯ ಪ್ರಚಾರಕ್ಕೆ ಸಮರ್ಪಿತ ಕೇಂದ್ರವಾಗಿದೆ. ಚಾಮುಂಡಿಬೆಟ್ಟದ ತಪ್ಪಲಿನ ಸುಂದರ ಪರಿಸರದ ಮಧ್ಯೆ ನೆಲೆಗೊಂಡಿರುವ ನಮ್ಮ 18 ಹೋಲ್‌ಗಳ ಚಾಂಪಿಯನ್‌ಶಿಪ್ ಗಾಲ್ಫ್ ಕೋರ್ಸ್ ಅನೇಕ ತಲೆಮಾರುಗಳ ಆಟಗಾರರನ್ನು ಬೆಳೆಸಿದೆ. ಅಲ್ಲದೆ, ಹಲವು ಪ್ರತಿಷ್ಠಿತ ಚಾಂಪಿಯನ್‌ಶಿಪ್‌ಗಳನ್ನು ಆಯೋಜಿಸಿರುವ ಹಿರಿಮೆ ಹೊಂದಿದೆ ಎಂದರು.

ದೇಶದ ವಿವಿಧ ಭಾಗಗಳಿಂದ ಆಟಗಾರ್ತಿಯರು ಈ ಟೂರ್ನಮೆಂಟ್‌ನಲ್ಲಿ ಭಾಗವಹಿಸುತ್ತಿದ್ದು, ಪ್ರತಿಭಾವಂತ ಹವ್ಯಾಸಿ (ಅಮೆಚೂರ್) ಆಟಗಾರ್ತಿಯರು ಸೇರಿದಂತೆ ಒಟ್ಟು 51 ಆಟಗಾರ್ತಿಯರು ಪಾಲ್ಗೊಳ್ಳಲಿದ್ದಾರೆ. ಒಟ್ಟು 17 ಲಕ್ಷ ರೂ. ಬಹುಮಾನ ನಿಗದಿ ಮಾಡಲಾಗಿದೆ. ಮುಂದಿನ ಮೂರು ದಿನಗಳಲ್ಲಿ ಮೈಸೂರಿನ ಗಾಲ್ಫ್ ಅಭಿಮಾನಿಗಳು ಅತ್ಯುನ್ನತ ಮಟ್ಟದ ಸ್ಪರ್ಧಾತ್ಮಕ ಗಾಲ್ಫ್ ಕ್ರೀಡೆ ವೀಕ್ಷಿಸುವ ಅವಕಾಶ ಪಡೆಯಲಿದ್ದಾರೆ ಎಂದು ತಿಳಿಸಿದರು.

ಪ್ರತಿದಿನ ಬೆಳಗ್ಗೆ 7.30ರಿಂದ ಸ್ಪರ್ಧೆ ಆರಂಭಗೊಳ್ಳಲಿದೆ. 131 ಎಕರೆಯಷ್ಟು ವಿಶಾಲವಾದ ಗಾಲ್ಫ್ ಅಂಗಳದಲ್ಲಿ ಆಟಗಾರ್ತಿಯರು ಸೆಣಸಲಿದ್ದಾರೆ. ವುಮೆನ್ಸ್ ಗಾಲ್ಫ್ ಅಸೋಸಿಯೇಷನ್ ಆಫ್ ಇಂಡಿಯಾ, ಹೀರೋ ಮೋಟೋಕಾರ್ಪ್ ಹಾಗೂ ಪ್ರಾಯೋಜಕರು, ಸ್ವಯಂಸೇವಕರು ಸೇರಿದಂತೆ ಟೂರ್ನ ಮೆಂಟ್ ಆಯೋಜನೆಗೆ ಸಹಕಾರ ನೀಡುತ್ತಿರುವ ಎಲ್ಲರಿಗೂ ಧನ್ಯವಾದ ಅರ್ಪಿಸುವುದಾಗಿ ತಿಳಿಸಿದರು.

ಮೈಸೂರು ಗಾಲ್ಫ್ ಆಟಗಾರ್ತಿ ಪ್ರಣವಿ ಅರಸ್ ಏಷ್ಯನ್ ಗೇಮ್ಸ್‌ಗೆ ಆಯ್ಕೆ



ಮೈಸೂರು, ಜೂ.9(ಪಿಎಂ)– ಕಿರಿಯ ಗಾಲ್ಫ್ ಆಟಗಾರ್ತಿಯಾಗಿ ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್‌ನಲ್ಲಿ ಪಯಣ ಆರಂಭಿಸಿದ ಮೈಸೂರಿನ ಪ್ರಣವಿ ಅರಸ್ ಇಂದು ಭಾರತದ ಪ್ರಮುಖ ಅಂತಾರಾಷ್ಟ್ರೀಯ ಗಾಲ್ಫ್ ಆಟಗಾರ್ತಿಯಾಗಿ ಬೆಳೆದಿದ್ದಾರೆ. 2026ರ ಏಷ್ಯನ್ ಗೇಮ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಲು ಅವರು ಆಯ್ಕೆಯಾಗಿದ್ದು, ಇದು ನಮ್ಮ ಕ್ಲಬ್, ಮೈಸೂರು, ರಾಜ್ಯ ಮಾತ್ರವಲ್ಲದೆ, ರಾಷ್ಟ್ರಕ್ಕೆ ಹೆಮ್ಮೆಯಾಗಿದೆ ಎಂದು ಜೆಡಬ್ಲ್ಯೂಜೆಸಿ ಅಧ್ಯಕ್ಷ ಹೆಚ್.ಎಸ್. ಅರುಣ್‌ಕುಮಾರ್ ಇದೇ ವೇಳೆ ಪ್ರಕಟಿಸಿದರು.

ಜಪಾನ್‌ನ ಐಚಿ ನಗೋಯಾದಲ್ಲಿ ಸೆ.19ರಿಂದ ಅ.4ರವರೆಗೆ ನಡೆಯಲಿರುವ ಏಷ್ಯನ್ ಗೇಮ್ಸ್‌ನಲ್ಲಿ 23 ವರ್ಷದ ಪ್ರಣವಿ ಮಹಿಳೆಯರ ವಿಭಾಗದಲ್ಲಿ ಭಾರತದ ದೀಕ್ಷಾ ದಾಗರ್ ಹಾಗೂ ಅದಿತಿ ಅಶೋಕ್ ಜೊತೆಗೂಡಿ ಆಡಲಿದ್ದಾರೆ. ಆರನೇ ವಯಸ್ಸಿನಲ್ಲಿ ಗಾಲ್ಫ್ ಆಡಲು ಪ್ರಾರಂಭಿಸಿದ ಪ್ರಣವಿ ಅರಸ್, ಹವ್ಯಾಸಿ ಗಾಲ್ಫರ್ ಆಗಿದ್ದಾಗಲೇ ಹಲವು ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದ್ದರು. 2020ರಿಂದ ವೃತ್ತಿಪರ ಗಾಲ್ಫರ್ ಆಗಿ ಆಡುತ್ತಿದ್ದು, 'ಇಂಡಿಯನ್ ಗಾಲ್ಫ್ ಪ್ರೀಮಿಯರ್ ಲೀಗ್' ಸೇರಿದಂತೆ ಹಲವು ರಾಷ್ಟ್ರೀಯ, ಅಂತರರಾಷ್ಟ್ರೀಯ ಟೂರ್ನಿಗಳನ್ನು ಗೆಲ್ಲುವ ಮೂಲಕ ಸಾಧನೆ ಮೆರೆದಿದ್ದಾರೆ. ಏಷ್ಯನ್ ಗೇಮ್ಸ್‌ನಲ್ಲಿ ಭಾಗವಹಿಸಲು ಅಭ್ಯಾಸದಲ್ಲಿ ನಿರತರಾಗಿರುವ ಹಿನ್ನೆಲೆಯಲ್ಲಿ ಪ್ರಣವಿ ಅರಸ್, 'ಹೀರೋ ವುಮೆನ್ಸ್ ನ್ಯಾಷನಲ್ ಗಾಲ್ಫ್ ಟೂರ್ನಮೆಂಟ್ 2026'ರಲ್ಲಿ ಭಾಗವಹಿಸುತ್ತಿಲ್ಲ.

ವಿಶಾಖಪಟ್ಟಣ ಉಕ್ಕು ಸ್ಥಾವರದಲ್ಲಿ ದುರಂತ ಎಂಟು ಕಾರ್ಮಿಕರು ದುರ್ಮರಣ

ಕೇಂದ್ರ ಸಚಿವ ಕುಮಾರಸ್ವಾಮಿ ಭೇಟಿ: ಮೃತರ ಕುಟುಂಬಗಳಿಗೆ 25 ಲಕ್ಷ, ಗಾಯಾಳುಗಳಿಗೆ 10 ಲಕ್ಷ ಪರಿಹಾರ ಘೋಷಣೆ



ವಿಶಾಖಪಟ್ಟಣ: ಇಲ್ಲಿನ ಉಕ್ಕು ಸ್ಥಾವರದಲ್ಲಿ ಭಾರೀ ಪ್ರಮಾಣದ ಕರಗಿದ ಲೋಹ ಹರಿದು ಸಾವನ್ನಪ್ಪಿದ್ದ 8 ಮಂದಿ ಕಾರ್ಮಿಕರ ಕುಟುಂಬಗಳಿಗೆ ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು 25 ಲಕ್ಷ ರೂ. ಪರಿಹಾರ ಘೋಷಣೆ ಮಾಡಿದ್ದಾರೆ.

ಸೋಮವಾರ (ಜೂ.8) ರಾತ್ರಿ ವಿಶಾಖಪಟ್ಟಣದ ಉಕ್ಕು ಸ್ಥಾವರದಲ್ಲಿ ಟನ್‌ಗಳಷ್ಟು ಕರಗಿದ ಲೋಹವಿದ್ದ ದೊಡ್ಡ ಗಾತ್ರದ ಬಕೆಟ್ ಉರುಳಿ ಬಿದ್ದ ಪರಿಣಾಮ ಉಕ್ಕಿನ ಕರಗುವ ಕೇಂದ್ರ ಸಂಖ್ಯೆ 1ರಲ್ಲಿ ದೊಡ್ಡ ಪ್ರಮಾಣದ ಬೆಂಕಿ ಅವಘಡ ಸಂಭವಿಸಿ 8 ಕಾರ್ಮಿಕರು ಸಾವನ್ನಪ್ಪಿ, ಹಲವರು ಗಾಯಗೊಂಡಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆ ರಾತ್ರೋರಾತ್ರಿ ಬೆಂಗಳೂರಿನಿಂದ ವಿಶಾಖಪಟ್ಟಣಕ್ಕೆ ತೆರಳಿದ ಕೇಂದ್ರ ಸಚಿವ ಕುಮಾರಸ್ವಾಮಿ, ಪರಿಶೀಲನೆ ನಡೆಸಿ ಮಾಹಿತಿ ಪಡೆಯುವುದರ ಜೊತೆಗೆ ನೊಂದ ಕುಟುಂಬಗಳಿಗೆ ಸಾಂತ್ವನ ಹೇಳಿದರು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಕಾರ್ಮಿಕರ ಆರೋಗ್ಯ ಸ್ಥಿತಿ ವಿಚಾರಿಸಿದರು. ಮುಂಜಾನೆವರೆಗೂ ಸ್ಥಳದಲ್ಲಿದ್ದು ಪರಿಸ್ಥಿತಿ ನಿರ್ವಹಿಸಿದರು.

ಇದೇ ವೇಳೆ ಮೃತಪಟ್ಟ ಕಾರ್ಮಿಕರ ಕುಟುಂಬಗಳಿಗೆ ತಲಾ 25 ಲಕ್ಷ ರೂ. ಹಾಗೂ ಗಾಯಾಳುಗಳಿಗೆ 10 ಲಕ್ಷ ರೂ. ಪರಿಹಾರ ಘೋಷಿಸಲಾಗಿದೆ. ಮೃತ ಕಾರ್ಮಿಕರ ಪ್ರತಿ ಕುಟುಂಬದ ಅರ್ಹ ಸದಸ್ಯರಿಗೆ ಕಾರ್ಖಾನೆಯಲ್ಲಿ ಉದ್ಯೋಗ ನೀಡಲಾಗುವುದು. ಗಾಯಗೊಂಡವರ ಚಿಕಿತ್ಸೆಯ ಸಂಪೂರ್ಣ ವೆಚ್ಚವನ್ನು ಕಾರ್ಖಾನೆ ಭರಿಸುತ್ತದೆ ಹಾಗೂ ಮೃತ ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವು ನೀಡಲಾಗುವುದು. ಈ ದುರ್ಘಟನೆಯಿಂದ ನನಗೆ ತೀವ್ರ ಆಘಾತ ಉಂಟಾಗಿದೆ. ಗಾಯಾಳುಗಳು ಶೀಘ್ರವಾಗಿ ಚೇತರಿಸಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ. ಈಗಾಗಲೇ ದುರಂತದ ಕಾರಣವನ್ನು ಪತ್ತೆ ಹಚ್ಚಲು ತನಿಖೆಗೆ ಆದೇಶಿಸಿದ್ದೇನೆ ಎಂದು ತಿಳಿಸಿದರು. ಈಗಾಗಲೇ ಪ್ರಧಾನ ಮಂತ್ರಿ ಮೋದಿಯವರು ರಾಷ್ಟ್ರೀಯ ಪರಿಹಾರ ನಿಧಿಯಿಂದ ಮೃತರ ಕುಟುಂಬಸ್ಥರಿಗೆ 2 ಲಕ್ಷ ರೂ. ಹಾಗೂ ಗಾಯಾಳುಗಳಿಗೆ 50 ಸಾವಿರ ರೂ. ಪರಿಹಾರ ಘೋಷಿಸಿದ್ದಾರೆ.

ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಅವಘಡದ ಬಗ್ಗೆ ತೀವ್ರ ಆಘಾತ ವ್ಯಕ್ತಪಡಿಸಿದ್ದಾರೆ. ಜಿಲ್ಲಾಧಿಕಾರಿ ಮತ್ತು ಪೊಲೀಸ್ ಆಯುಕ್ತರೊಂದಿಗೆ ಮಾತನಾಡಿ, ಸಂತ್ರಸ್ತ ಕುಟುಂಬಗಳಿಗೆ ಸಹಾಯ ಮಾಡುವಂತೆ ನಿರ್ದೇಶಿಸಿದ್ದಾರೆ. ಮಾಜಿ ಮುಖ್ಯಮಂತ್ರಿ ಮತ್ತು ವೈಎಸ್‌ಆರ್‌ಸಿಪಿ ಅಧ್ಯಕ್ಷ ವೈ.ಎಸ್.ಜಗನ್ ಮೋಹನ್ ರೆಡ್ಡಿಯವರೂ ಕೂಡ ಘಟನೆಯ ಬಗ್ಗೆ ತೀವ್ರ ಬೇಸರ ವ್ಯಕ್ತಪಡಿಸಿ, ಎಲ್ಲಾ ಕೈಗಾರಿಕಾ ಸಂಸ್ಥೆಗಳಲ್ಲಿ ಕಾರ್ಮಿಕರ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

2012ರ ಜೂನ್‌ನಲ್ಲಿ ಸಹ ಉಕ್ಕು ಕರಗಿಸುವ ಘಟಕ ಸಂಖ್ಯೆ 3ರಲ್ಲಿ ಹೊಸದಾದ ಆಮ್ಲಜನಕ ಸ್ಥಾವರ ಸ್ಫೋಟಗೊಂಡು 16 ಕಾರ್ಮಿಕರು ಸಾವನ್ನಪ್ಪಿದ್ದರು. ಅಧಿಕಾರಿಗಳು ಆಮ್ಲಜನಕ ಸ್ಥಾವರದ ಪ್ರಾಯೋಗಿಕ ಪರೀಕ್ಷೆ ನಡೆಸುತ್ತಿದ್ದಾಗ ಸ್ಫೋಟ ಸಂಭವಿಸಿತ್ತು.



ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಆಸ್ಪತ್ರೆಗೆ ದಾಖಲಾಗಿರುವ ಕಾರ್ಮಿಕರ ಆರೋಗ್ಯ ವಿಚಾರಿಸಿದರು.

ಸೂರಜ್ ಹೆಗಡೆ ನಿಧನಕ್ಕೆ ಜಿಟಿಡಿ ಸಂತಾಪ



ಮೈಸೂರು, ಜೂ.9– ಮಾಜಿ ಮುಖ್ಯಮಂತ್ರಿ ದಿವಂಗತ ಡಿ.ದೇವರಾಜ ಅರಸು ಅವರ ಮೊಮ್ಮಗ ಸೂರಜ್ ಹೆಗಡೆ ಅವರ ನಿಧನಕ್ಕೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಸಂತಾಪ ಸೂಚಿಸಿದ್ದಾರೆ.

ಎಐಸಿಸಿ ಕಾರ್ಯದರ್ಶಿ ಹಾಗೂ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾಗಿದ್ದ ಸೂರಜ್ ಹೆಗಡೆ ಅಜಾತಶತ್ರುವಾಗಿದ್ದರು. ರಾಜಕೀಯವಾಗಿಯೂ ಅವರಿಗೆ ಯಾರೂ ವಿರೋಧಿಗಳಿರಲಿಲ್ಲ. ನಮ್ಮ ಕುಟುಂಬದೊಂದಿಗೆ ಅವಿನಾಭಾವ ನಂಟು ಹೊಂದಿದ್ದರು. ಅವರ ಅಗಲಿಕೆಯಿಂದ ಅತೀವ ನೋವುಂಟಾಗಿದೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ, ತಾಯಿ ಚಾಮುಂಡೇಶ್ವರಿ ಅವರ ಕುಟುಂಬಕ್ಕೆ ದುಃಖ ಸಹಿಸುವ ಶಕ್ತಿ ನೀಡಲಿ ಎಂದು ಜಿ.ಟಿ.ದೇವೇಗೌಡರು ಪ್ರಾರ್ಥಿಸಿದ್ದಾರೆ.

ಮುಂಗಾರು ದುರ್ಬಲ; ಮೈಸೂರು ಭಾಗದ ಜಲಾಶಯಗಳ ನೀರಿನ ಮಟ್ಟ ಕುಸಿತ

ಕೆಆರ್‌ಎಸ್‌ನಲ್ಲಿರುವುದು ಸದ್ಯ 81 ಅಡಿ ನೀರು ಮಾತ್ರ



ಮೈಸೂರು, ಜೂ.9– ಹಳೇ ಮೈಸೂರು ಭಾಗದ ಜಲಾಶಯಗಳ ನೀರಿನ ಮಟ್ಟ ಗಣನೀಯವಾಗಿ ಇಳಿಕೆಯಾಗಿದೆ.

ಮುಂಗಾರು ಆರಂಭದಲ್ಲೇ ದುರ್ಬಲವಾಗಿದ್ದು, ಜಲಾಶಯಗಳ ಒಳಹರಿವಿನ ಪ್ರಮಾಣ ತೀರಾ ಕಡಿಮೆಯಾಗಿದೆ. ಈ ಹಿನ್ನೆಲೆಯಲ್ಲಿ ಸಂಗ್ರಹ ಮಟ್ಟ ಭಾರೀ ಪ್ರಮಾಣದಲ್ಲಿ ಕುಸಿದಿದೆ.

ಮಂಡ್ಯ, ಮೈಸೂರು, ಬೆಂಗಳೂರು ಹಾಗೂ ಸುತ್ತಮುತ್ತಲ ಜಿಲ್ಲೆಗಳ ಜೀವನಾಡಿಯಾಗಿರುವ ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ 81.35 ಅಡಿಗೆ ಕುಸಿದಿದೆ. ಈ ಜಲಾಶಯದ ಗರಿಷ್ಠ ಮಟ್ಟ 124.8 ಅಡಿಗಳಾಗಿದ್ದು, ಕಳೆದ ವರ್ಷ ಇದೇ ಸಮಯಕ್ಕೆ 108.18 ಅಡಿಯಷ್ಟು ನೀರು ಸಂಗ್ರಹವಾಗಿತ್ತು.

ಹೆಚ್.ಡಿ.ಕೋಟೆಯ ಕಬಿನಿ ಜಲಾಶಯದಲ್ಲಿ ಕಳೆದ ವರ್ಷ ಇದೇ ಸಮಯಕ್ಕೆ 60.36 ಅಡಿಯಷ್ಟು ನೀರಿತ್ತು. ಗರಿಷ್ಠ ಮಟ್ಟ(65 ಅಡಿ)ಕ್ಕೆ ಇನ್ನು ನಾಲ್ಕೈದು ಅಡಿ ಮಾತ್ರ ಬಾಕಿ ಇತ್ತು. ಆದರೆ ಪ್ರಸ್ತುತ ನೀರಿನ ಮಟ್ಟ 32.54 ಅಡಿಯಷ್ಟೇ ಇದೆ. ಕೊಡಗಿನ ಹಾರಂಗಿ ಜಲಾಶಯ(ಗರಿಷ್ಠ 129 ಅಡಿ)ದ ನೀರಿನ ಮಟ್ಟವೂ 93.52 ಅಡಿಗೆ ಕುಸಿದಿದೆ. ಕಳೆದ ವರ್ಷ ಇದೇ ದಿನ 121.54 ಅಡಿಗಳಷ್ಟು ನೀರಿತ್ತು. ಇನ್ನು ಹಾಸನದ ಹೇಮಾವತಿ(ಗರಿಷ್ಠ 117 ಅಡಿ) ಜಲಾಶಯದಲ್ಲಿ ಹಿಂದಿನ ವರ್ಷ ಇದೇ ವೇಳೆಗೆ 101.72 ಅಡಿಗಳಷ್ಟು ನೀರಿತ್ತು. ಆದರೆ ಪ್ರಸ್ತುತ ಕೇವಲ 85.9 ಅಡಿಗಳಷ್ಟು ಮಾತ್ರ ನೀರು ಸಂಗ್ರಹವಿದೆ.

ಆರ್‌ಎಸ್‌ಎಸ್ ನೋಂದಣಿಗಾಗಿ ದಾಖಲೆ ಸಿದ್ಧವಾಗಿಡಲು ಹೇಳಿ!

ಬಿಜೆಪಿಗೆ ಪ್ರಿಯಾಂಕ್ ಖರ್ಗೆ ತಿರುಗೇಟು!



ಬೆಂಗಳೂರು : ಪ್ರಿಯಾಂಕ್ ಖರ್ಗೆ ರಾಜ್ಯದ ಗೃಹ ಸಚಿವರಾಗಿ ಅಧಿಕಾರ ವಹಿಸಿಕೊಂಡ ನಂತರ ಆರ್ ಎಸ್ ಎಸ್ ವಿಚಾರದಲ್ಲಿ ರಾಜ್ಯ ಬಿಜೆಪಿ ಮತ್ತು ಸರ್ಕಾರದ ನಡುವಿನ ವಾಕ್ಸಮರ ಮತ್ತಷ್ಟು ಹೆಚ್ಚಾಗುತ್ತಿದೆ. ರಾಜ್ಯ ಗೃಹ ಇಲಾಖೆ ಒಬ್ಬರು ಅಸಮರ್ಥ ಸಚಿವರ ಕೈಯಲ್ಲಿ ಸಿಲುಕಿಕೊಂಡಿದೆ ಎನ್ನುವ ಬಿಜೆಪಿ ಟೀಕೆಗೆ ತಿರುಗೇಟು ನೀಡಿದ್ದಾರೆ. ನೋಂದಣಿಗೆ ಅಗತ್ಯವಿರುವ ದಾಖಲೆಗಳನ್ನು ರೆಡಿಯಾಗಿ ಇಟ್ಟುಕೊಳ್ಳಲು ಆರ್‌ಎಸ್‌ಎಸ್‌ಗೆ (ರಾಷ್ಟ್ರೀಯ ಸ್ವಯಂ ಸೇವಕ ಸಂಘ) ತಿಳಿಸಿ ಎಂದು ಖಡಕ್ ವಾರ್ನಿಂಗ್ ನೀಡಿದ್ದಾರೆ.

ಅಂದು ಗೊತ್ತಿಲ್ಲ ಸಚಿವರಿದ್ದರು. ಇಂದು ನನಗೆ ಎಲ್ಲವೂ ಗೊತ್ತು ಎನ್ನುವ ಮೈಕ್ ಮಿನಿಸ್ಟರ್. ಇಂತಹ ಅಸಮರ್ಥ ಸಚಿವರ ಕೈಯಲ್ಲಿ ಸಿಲುಕಿರುವ ಗೃಹ ಇಲಾಖೆಯಿಂದ ಕಾನೂನು ಸುವ್ಯವಸ್ಥೆ ಕಾಪಾಡಲು ಹೇಗೆ ಸಾಧ್ಯ ಎಂದು ಕರ್ನಾಟಕ ಬಿಜೆಪಿ ಘಟಕ ಟ್ವೀಟ್ ಮಾಡಿತ್ತು.

ಇದಕ್ಕೆ ಕೌಂಟರ್ ಕೊಟ್ಟಿರುವ ಪ್ರಿಯಾಂಕ್ ಖರ್ಗೆ, ಸುಧೀರ್ ಬಂಗೇರ ಎಂಬ ವ್ಯಕ್ತಿಯಿಂದ ಬಂದ ಜೀವ ಬೆದರಿಕೆಯ ಟ್ವೀಟ್ ರೀ ಪೋಸ್ಟ್ ಮಾಡಿದ್ದಾರೆ. ನಾನು ಗೃಹ ಸಚಿವನಾಗಿ ಅಧಿಕಾರ ವಹಿಸಿಕೊಂಡು 48 ಗಂಟೆಗಳು ಕೂಡ ಆಗಿಲ್ಲ, ನಿಮ್ಮ ಭಯ, ನಿಮ್ಮಲ್ಲಿನ ಆತಂಕ, ನಿಮ್ಮಲ್ಲಿನ ದುಗುಡ ಎಲ್ಲವೂ ವ್ಯಕ್ತವಾಗುತ್ತಿದೆ ಮತ್ತು ಈಗಾಗಲೇ ಆರ್‌ಎಸ್‌ಎಸ್ ಅನ್ನು ಬಳಸಿಕೊಂಡು ನನ್ನನ್ನು ನಿಂದಿಸುತ್ತಿದ್ದೀರಿ ಹಾಗೂ ನನಗೆ ಜೀವ ಬೆದರಿಕೆ ಹಾಕುತ್ತಿದ್ದೀರಿ. ನೀವು ಮಾಡೋದನ್ನ ಮಾಡಿ. ಮುಖ್ಯವಾಗಿ, ದಯವಿಟ್ಟು ನಿಮ್ಮ Body of individuals ಗೆ ನನ್ನ ನಮಸ್ಕಾರ ವನ್ನೂ ತಿಳಿಸಿ ಹಾಗೂ ನಿಮ್ಮ ರಾಜಕೀಯ ಮೇಲಾಧಿಕಾರದ ಸಂಘಟನೆಯ ನೋಂದಣಿಗಾಗಿ ದಾಖಲೆಗಳನ್ನು ಸಿದ್ಧವಾಗಿಡಲು ಹೇಳಿ ಎಂದು ತಿರುಗೇಟು ನೀಡಿದ್ದಾರೆ.

ನಾವು ಸಂಘಟನೆಯನ್ನು ನಿಷೇಧಿಸಬೇಕು ಎಂದು ಒತ್ತಾಯಿಸುತ್ತಿಲ್ಲ. ಬದಲಿಗೆ, ಸಂಘದ ಚಟುವಟಿಕೆಯ ವಿಚಾರದಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವಕ್ಕಾಗಿ ಒತ್ತಾಯಿಸುತ್ತಿದ್ದೇವೆ ಎಂದು ಖರ್ಗೆ ಸ್ಪಷ್ಟ ಪಡಿಸಿದ್ದಾರೆ.

ಕಳೆದ ವರ್ಷದ ವಿಜಯದಶಮಿಯ ಸಂಘದ ಪಥಸಂಚಲನದ ಕಾರ್ಯಕ್ರಮದ ನಂತರ ಪ್ರಿಯಾಂಕ್ ಖರ್ಗೆ ಮತ್ತು ಆರ್‌ಎಸ್‌ಎಸ್/ಬಿಜೆಪಿ ನಡುವಿನ ಸಂಘರ್ಷ ತಾರಕಕ್ಕೇರಿತ್ತು. ಯಾವುದೇ ಸರ್ಕಾರಿ ಸ್ಥಳಗಳಲ್ಲಿ, ಮುಜರಾಯಿ ದೇವಾಲಯಗಳ ವ್ಯಾಪ್ತಿಯಲ್ಲಿ ಕಾರ್ಯಕ್ರಮ ನಡೆಸುವ ಮುನ್ನ, ಸರ್ಕಾರದ ಅನುಮತಿಯನ್ನು ಪಡೆಯಬೇಕು ಎಂದು ಅಂದಿನ ಸಿದ್ದರಾಮಯ್ಯ ಸರ್ಕಾರ ಕಾನೂನು ಜಾರಿಗೆ ತಂದಿತ್ತು. ಇದು, ಪ್ರಿಯಾಂಕ್ ಮತ್ತು ಬಿಜೆಪಿ ನಡುವಿನ ತಿಕ್ಕಾಟಕ್ಕೆ ಕಾರಣವಾಗಿತ್ತು.

ಚಿತ್ತಾಪುರದಲ್ಲಿ ಆರ್‌ಎಸ್‌ಎಸ್ ಪಥಸಂಚಲನ: ಪ್ರಿಯಾಂಕ್ ಖರ್ಗೆಯವರ ತವರು ಕ್ಷೇತ್ರ ಚಿತ್ತಾಪುರದಲ್ಲಿ ಆರ್ ಎಸ್ ಎಸ್ ಪಥಸಂಚಲನಕ್ಕೆ ಸರ್ಕಾರ ಅನುಮತಿಯನ್ನು ನೀಡಿರಲಿಲ್ಲ. ಇದನ್ನು ಪ್ರಶ್ನಿಸಿ ಸಂಘ ಕೋರ್ಟ್ ಮೆಟ್ಟಿಲೇರಿತ್ತು. ನ್ಯಾಯಾಲಯ, ಕೆಲವೊಂದು ಷರತ್ತುಗಳನ್ನು ವಿಧಿಸಿ, ಅನುಮತಿಯನ್ನು ನೀಡಿತ್ತು. ಪ್ರಿಯಾಂಕ್ ಖರ್ಗೆ ಮತ್ತು ಸಂಘದ ನಡುವಿನ ಸಂಘರ್ಷ, ರಾಷ್ಟ್ರ ಮಟ್ಟದಲ್ಲಿ ದೊಡ್ಡ ಸುದ್ದಿಯನ್ನು ಮಾಡಿತ್ತು. ಈಗ, ಪ್ರಿಯಾಂಕ್ ಖರ್ಗೆಯವರು ಗೃಹ ಸಚಿವರಾಗಿರುವ ಹಿನ್ನಲೆಯಲ್ಲಿ ಸಂಘದ ವಿಚಾರದಲ್ಲಿ ಬಿಜೆಪಿ ಮತ್ತು ಸರ್ಕಾರದ ನಡುವೆ, ವಾಕ್ಸಮರ ಇನ್ನಷ್ಟು ಜಾಸ್ತಿಯಾಗಲಿದೆಯಾ ಎನ್ನುವುದು ಪ್ರಶ್ನೆಯಾಗಿದೆ.

ನಿಮ್ಮಪ್ಪನಿಂದಲೇ ಆರ್‌ಎಸ್‌ಎಸ್‌ಗೆ ಏನು ಮಾಡಲು ಆಗಿಲ್ಲ, ನಿಮ್ಮಿಂದ ಆಗುತ್ತಾ?

ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ಸಿ.ಟಿ ರವಿ ಕಿಡಿ



ಬೆಂಗಳೂರು: ನಿಮ್ಮಪ್ಪನಿಂದಲೇ ಆರ್‌ಎಸ್‌ಎಸ್‌ಗೆ ಏನು ಮಾಡಲು ಆಗಿಲ್ಲ, ನಿಮ್ಮಿಂದ ಆಗುತ್ತಾ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ಬಿಜೆಪಿ ನಾಯಕ ಸಿ.ಟಿ. ರವಿ ವಾಗ್ದಾಳಿ ನಡೆಸಿದ್ದಾರೆ.

ಆರ್‌ಎಸ್‌ಎಸ್ ಅವರು ನೋಂದಣಿ ಮಾಡಿಸಲು ರೆಡಿಯಾಗಿ ಎಂಬ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹೇಳಿಕೆಗೆ ವಿಧಾನ ಸೌಧದಲ್ಲಿ ಪ್ರತಿಕ್ರಿಯೆ ನೀಡಿದ ಅವರು, ನೆಹರು ಪ್ರಧಾನಿ ಆಗಿದ್ದರು, ಅವರು ಆರ್‌ಎಸ್‌ಎಸ್ ವಿರೋಧ ಮಾಡಿದ್ದರು. ಆರ್‌ಎಸ್‌ಎಸ್ ಇನ್ನು ಇದೆ. ನೆಹರು ಇಲ್ಲ. ಇಂದಿರಾಗಾಂಧಿ ತುರ್ತುಸ್ಥಿತಿ ಹೇರಿದ್ದರು. ಆರ್‌ಎಸ್‌ಎಸ್ ಬ್ಯಾನ್ ಮಾಡಿದ್ದರು. ಇಂದಿರಾಗಾಂಧಿ ಇಲ್ಲ. ಆರ್‌ಎಸ್‌ಎಸ್ ಇನ್ನು ಇದೆ. ಪ್ರಿಯಾಂಕ್ ಅವರೇ ನೀವು ನಿನ್ನೆ ಮೊನ್ನೆ ಹೋಂ ಮಿನಿಸ್ಟರ್ ಆಗಿರೋದು. ನಿಮ್ಮ ಅಪ್ಪ ನಿಮಗಿಂತ ಮುಂಚೆ ಗೃಹ ಸಚಿವರು ಆಗಿದ್ದರು. ನಿಮ್ಮಪ್ಪನಿಂದ ಏನು ಮಾಡಲು ಆಗಿಲ್ಲ ಇನ್ನು ನಿಮ್ಮಿಂದ ಆಗುತ್ತಾ ಎಂದು ಕಿಡಿಕಾರಿದರು.

ನೀವು ಸರ್ವಾಧಿಕಾರಿ ಅಲ್ಲ. ಇದು ನಿಮ್ಮ ಪಕ್ಷದ ಕೊನೆ ದಿನಗಳು. ನಿಮ್ಮ ಅಪ್ಪನ ಆಣೆ ಕಾಂಗ್ರೆಸ್ ಮುಂದೆ ಅಧಿಕಾರಕ್ಕೆ ಬರಲ್ಲ. ಆರ್‌ಎಸ್‌ಎಸ್ ರಾಷ್ಟ್ರದ ಕೆಲಸ, ವ್ಯಕ್ತಿಗೆ ಸಂಸ್ಕಾರ ಕೊಡುವ ಕೆಲಸ ಮಾಡುತ್ತಿದೆ. ನೋಂದಣಿ ಮಾಡೋಕೆ ಅದು ಸಂಘ ಅಲ್ಲ. ಸಮಾಜವನ್ನ ಸಂಘಟಿಸುವ ಸಂಘಟನೆ ಅದು. ನಿಮಗೆ ಗೃಹ ಸಚಿವರಾಗಿ ಬೇರೆ ಕೆಲಸ ಇದೆ. ಅದನ್ನ ನೋಡಿ. ಅಕ್ರಮ ಬಾಂಗ್ಲಾ ವಲಸಿಗರು ಇದ್ದಾರೆ. ದರೋಡೆ, ಡ್ರಗ್ಸ್, ಹೆಣ್ಣು ಮಕ್ಕಳು ನಾಪತ್ತೆ ಈ ಬಗ್ಗೆ ಗಮನಹರಿಸಿ. ಆರ್‌ಎಸ್‌ಎಸ್‌ನಿಂದ ಅಪಾಯ ಇಲ್ಲ. ಇಲ್ಲೇ ಇದ್ದು ಬಾಂಬ್ ತಯಾರು ಮಾಡೋರ ಕಡೆ ಗಮನ ಕೊಡಿ ಎಂದು ಹರಿಹಾಯ್ದರು.

ನೀವು ಹೋಂ ಮಿನಿಸ್ಟರ್, ಹೋಂ ಮಿನಿಸ್ಟರ್ ರೀತಿ ವರ್ತನೆ ಮಾಡಿ, ಗೂಂಡಾ ರೀತಿ ವರ್ತನೆ ಮಾಡಬೇಡಿ. ಅಧಿಕಾರ ಶಾಶ್ವತ ಅಲ್ಲ. ಅಧಿಕಾರದಲ್ಲಿ ಮೆರೆದವರಿಗೆ ಇಂದು ಪಶ್ಚಿಮ ಬಂಗಾಳದಲ್ಲಿ ಅಟ್ಟಾಡಿಸಿ ಹೊಡೆಯುತ್ತಿದ್ದಾರೆ. ಆ ಭಯದಿಂದ ಎಚ್ಚರಿಕೆ ವಹಿಸಿ. ನೀವು ಮಾಡಬೇಕಾದ ಕೆಲಸ ಬೇರೆ ಇದೆ ಅದನ್ನ ಮಾಡಿ. ಡ್ರಗ್ಸ್, ಅಕ್ರಮ ವಲಸಿಗರ ಬಗ್ಗೆ ಗಮನ ಕೊಡಿ. ಬೆಂಕಿ ಹಚ್ಚೋ ಕೆಲಸ ಮಾಡಬೇಡಿ. ಬೆಂಕಿ ಆರಿಸೋ ಕೆಲಸ ಮಾಡಿ. ಬೆಂಕಿ ಹಚ್ಚೋಕೆ ಹೋದರೆ ಆ ಬೆಂಕಿ ನಿಮ್ಮನ್ನು ಸುಡುತ್ತದೆ ಎಂದು ಕೆಂಡ ಕಾರಿದರು.

ನಕ್ಕರೆ ಅದೇ ಸ್ವರ್ಗ

ರಾಮ ಬಿಲ್ಲು ಮುರಿದಿದ್ದಕ್ಕೆ ಸೀತೆ ಅಪ್ಪನನ್ನು ಬಿಟ್ಟು ಬಂದ್ಲು...
ಕೃಷ್ಣ ಕೊಳಲು ಊದಿದ್ದಕ್ಕೆ ರಾಧೆ ಅಪ್ಪನನ್ನು ಬಿಟ್ಟು ಬಂದ್ಲು...
ಅರೆ, ನಾನು ಬರೀ ಒಂದು ಮೆಸೇಜ್ ಕಳಿಸಿದ್ದಕ್ಕೆ
ಇಡೀ ಅವರ ಕುಟುಂಬ ಕರಕೊಂಡು ಬಂದ್ಲು...!!!

ಮೈಸೂರು ಮಿತ್ರ

ಬುಧವಾರ, ಜೂನ್ 10, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

'ಮೌನ' ಜಗತ್ತಿನ ಅತೀ ಸುಂದರವಾದ ಮಾತು...

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ನಿನ್ನದಲ್ಲ ಸರ್ವ ಆಸ್ತಿ, ಒಳ್ಳೆಯದಲ್ಲ ಗರ್ವ ಜಾಸ್ತಿ.

ನಿಮ್ಮ ಪತ್ರಗಳು

ಶಾಲಾ ಆಸನ ಬದಲಾವಣೆ ಕ್ರಾಂತಿಕಾರಿ ನಿರ್ಧಾರ

ಮಾನ್ಯರೆ,

ಸರ್ಕಾರಿ ಶಾಲೆಗಳಲ್ಲಿ ಸಾಂಪ್ರದಾಯಿಕ ಬೆಂಚುಗಳ ಬದಲಿಗೆ ಕೇರಳ ಮಾದರಿಯ 'ಯು' ಆಕಾರದ ಆಸನ ವ್ಯವಸ್ಥೆ ತರಲು ಶಿಕ್ಷಣ ಇಲಾಖೆ ಯೋಚಿಸುತ್ತಿರುವುದು ಸ್ವಾಗತಾರ್ಹ. ಈ ಹೊಸ ವಿನ್ಯಾಸವು ಮಕ್ಕಳಲ್ಲಿ ಶೇಕಡ 100 ರಷ್ಟು ಗಮನ, ಸೃಜನಶೀಲತೆ ಮತ್ತು ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ. ಹಳೆಯ ಸಾಲು-ಸಾಲಿನ ಪದ್ಧತಿಗಿಂತ ಇದು ವಿದ್ಯಾರ್ಥಿಗಳಲ್ಲಿ ಸಮಾನತೆ ಮತ್ತು ಒಗ್ಗಟ್ಟನ್ನು ಮೂಡಿಸುತ್ತದೆ. ಶಿಕ್ಷಕರು ತರಗತಿಯ ಕೇಂದ್ರ ಬಿಂದುವಾಗಿ ಪ್ರತಿಯೊಬ್ಬ ವಿದ್ಯಾರ್ಥಿಯನ್ನೂ ಸುಲಭವಾಗಿ ಗಮನಿಸಲು ಇದು ಪೂರಕವಾಗಿದೆ. ಇದರಿಂದ ಗುಂಪು ಚರ್ಚೆ ಹಾಗೂ ಸಂವಹನ ಕೌಶಲ್ಯಗಳು ಉತ್ತಮಗೊಳ್ಳುತ್ತವೆ. ಆದರೆ, ಇದಕ್ಕೆ ಪೂರಕವಾಗಿ ವರ್ಗಕೋಣೆಗಳ ಸ್ಥಳಾವಕಾಶದ ಮರುವಿನ್ಯಾಸ ಮತ್ತು ಶಿಕ್ಷಕರಿಗೆ ಜಾಗತಿಕ ಮಟ್ಟದ ತರಬೇತಿ ನೀಡುವುದು ಅತ್ಯಗತ್ಯ. ಆರ್ಥಿಕ ಹಾಗೂ ನಿರ್ವಹಣಾ ಸವಾಲುಗಳನ್ನು ಸಮರ್ಥವಾಗಿ ನಿಭಾಯಿಸಿ ಈ ಯೋಜನೆ ಜಾರಿಯಾದರೆ ಸರ್ಕಾರಿ ಶಾಲೆಗಳ ಶಿಕ್ಷಣದ ಗುಣಮಟ್ಟ ಖಂಡಿತ ಕ್ರಾಂತಿಕಾರಿಯಾಗಿ ಸುಧಾರಿಸುತ್ತದೆ.

– ಡಾ.ಹೆಚ್.ಕೆ.ವಿಜಯ್‌ಕುಮಾರ್, ಮೈಸೂರು.

ಗೃಹ ಸಚಿವರ ಗಮನಕ್ಕೆ

ಮಾನ್ಯರೆ,

ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿ ಮತ್ತು ದ್ವೇಷ ಹರಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಪೊಲೀಸ್ ಇಲಾಖೆಗೆ ಗೃಹಮಂತ್ರಿ ಪ್ರಿಯಾಂಕ್ ಖರ್ಗೆ ಸ್ಪಷ್ಟ ಸೂಚನೆ ನೀಡಿದ್ದಾರೆ. ಅಂತೆಯೇ... ಸಾರ್ವಜನಿಕ ಕುಂದುಕೊರತೆ, ಸರಕಾರಿ ಅಧಿಕಾರಿಗಳ ಲಂಚಗುಳಿತನ, ಭ್ರಷ್ಟಾಚಾರ, ಪುಂಡರ ಹಾವಳಿ, ಸಾರ್ವಜನಿಕ ಸ್ಥಳಗಳ ಒತ್ತುವರಿ, ಅತಿಕ್ರಮಣ, ಅನಾಚಾರ ಹಾಗೂ ಅಕ್ರಮಾದಿತ್ಯರ ಅಟ್ಟಹಾಸ ಇತ್ಯಾದಿ ವಿಚಾರವಾಗಿ ಅದೇ ಸಾಮಾಜಿಕ ಜಾಲತಾಣಗಳಲ್ಲಿ ಧ್ವನಿ ಎತ್ತುವವರ ಕಡೆಗೂ ಗಮನಹರಿಸಿ, ಅಂತಹ ಸಮಸ್ಯೆಗಳನ್ನೂ ಬಗೆಹರಿಸುವಂತೆ ಗೃಹಮಂತ್ರಿ ಪ್ರಿಯಾಂಕ್ ಖರ್ಗೆಯವರು ಪೊಲೀಸ್ ಇಲಾಖೆಗೆ ಸ್ಪಷ್ಟ ಸೂಚನೆ ನೀಡಲಿ.

–ಪಿ.ಜೆ.ರಾಘವೇಂದ್ರ ನ್ಯಾಯವಾದಿ ಮೈಸೂರು

ಸಾತಗಳ್ಳಿ ಬಡಾವಣೆಯಲ್ಲಿ ಒಳಚರಂಡಿ ನೀರಿನ ಸಮಸ್ಯೆ

ಮಾನ್ಯರೇ,

ಮೈಸೂರಿನ ಸಾತಗಳ್ಳಿ 2ನೇ ಹಂತದಲ್ಲಿ ಒಳಚರಂಡಿ ನೀರು ನಿರಂತರವಾಗಿ ರಸ್ತೆ ಮೇಲೆ ಹರಿಯುತ್ತಿದ್ದು, ಇದರಿಂದ ಭಾರೀ ದುರ್ವಾಸನೆ ಬೀರುತ್ತಿದೆ. ಈ ಸಮಸ್ಯೆಯ ಕುರಿತು ಈಗಾಗಲೇ ಹಲವು ಬಾರಿ ಗಮನಕ್ಕೆ ತಂದಿದ್ದರೂ ಇದುವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ.

ಪ್ರಸ್ತುತ ಮಳೆ ಆರಂಭವಾಗಿರುವ ಕಾರಣ ಒಳಚರಂಡಿ ನೀರು ಹಾಗೂ ಮಳೆನೀರು ಮನೆಗಳ ಒಳಗೆ ನುಗ್ಗುತ್ತಿದ್ದು, ನಿವಾಸಿಗಳು ತುಂಬಾ ತೊಂದರೆ ಅನುಭವಿಸುವಂತಾಗಿದೆ. ಇದರಿಂದ ಆರೋಗ್ಯ ಸಮಸ್ಯೆಗಳು ಉಂಟಾಗುವ ಸಾಧ್ಯತೆಯೂ ಹೆಚ್ಚಾಗಿದೆ. ಮುಂದಿನ ದಿನಗಳಲ್ಲಿ ನಿಯಮಿತ ಮಳೆ ಆರಂಭವಾದರೆ ಪರಿಸ್ಥಿತಿ ಇನ್ನಷ್ಟು ಗಂಭೀರವಾಗುವ ಸಾಧ್ಯತೆ ಇರುವುದರಿಂದ ದಯವಿಟ್ಟು ತಕ್ಷಣ ಸ್ಥಳ ಪರಿಶೀಲನೆ ನಡೆಸಿ ಒಳಚರಂಡಿ ಸ್ವಚ್ಛತೆ ಹಾಗೂ ಅಗತ್ಯ ದುರಸ್ತಿ ಕಾಮಗಾರಿಗಳನ್ನು ಕೈಗೊಂಡು ಸಮಸ್ಯೆಯನ್ನು ಶೀಘ್ರ ಪರಿಹರಿಸುವಂತೆ ಮನವಿ.

– ರವಿ ಟಿ, ಸಾತಗಳ್ಳಿ, ಮೈಸೂರು.

ಖಾಸಗಿ ಉದ್ಯೋಗ ವಿನಿಮಯ ಕೇಂದ್ರ : ಅವಲೋಕನ ಅಗತ್ಯ

ಮಾನ್ಯರೆ,

ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಳ್ಳುವ ಮೂಲಕ ಒಂದು ಹೊಸತಲೆಮಾರಿನ ಆಳ್ವಿಕೆ ಪ್ರಾರಂಭವಾದಂತಾಗಿದೆ. ಮೊದಲ ಸಚಿವ ಸಂಪುಟ ಸಭೆಯಲ್ಲಿ ಕೆಲವು ಜನೋಪಯೋಗಿ ನಿರ್ಧಾರಗಳನ್ನು ತೆಗೆದುಕೊಂಡಿದ್ದಾರೆ. ಖಾಸಗಿ ಕ್ಷೇತ್ರದ ಉದ್ಯೋಗಕ್ಕಾಗಿ ಖಾಸಗಿ ಉದ್ಯೋಗ ವಿನಿಮಯ ಕೇಂದ್ರ ತೆರೆಯುವುದಾಗಿ ಹೇಳಿದ್ದಾರೆ. ಆದರೆ ಇದರಿಂದ ಕೆಲವೊಂದು ಅಡೆತಡೆಗಳು ಉಂಟಾಗಬಹುದು.

ಸಾಮಾನ್ಯವಾಗಿ ಕಂಪನಿಗಳು ಆಗಷ್ಟೇ ಪದವಿ ಮುಗಿಸಿ ಹೊರಬರುವ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಕ್ಯಾಂಪಸ್ ಮೂಲಕ ಉದ್ಯೋಗಕ್ಕೆ ಆಯ್ಕೆ ಮಾಡಿಕೊಳ್ಳುತ್ತಾರೆ. ಉದ್ಯೋಗ ವಿನಿಮಯ ಕೇಂದ್ರದ ಮೂಲಕ ಆಯ್ಕೆ ಮಾಡಿಕೊಳ್ಳುವುದಾದಲ್ಲಿ ಕ್ಯಾಂಪಸ್ ಆಯ್ಕೆಗೆ ಅವಕಾಶವಿರುವುದಿಲ್ಲ. ಇದರಿಂದ ಪೋಷಕರಲ್ಲೂ ಆತಂಕ ಉಂಟಾಗಬಹುದು. ಹಾಗೂ ವಿನಿಮಯ ಕೇಂದ್ರದಲ್ಲಿ ನೋಂದಣಿ ಮಾಡಿಸಿದ ನಂತರ ಜೇಷ್ಠತೆ ಮೇಲೆ ಪರಿಗಣಿಸಬೇಕಾದ ಸಂಭವ ಇರುವುದರಿಂದ ಆಗಷ್ಟೇ ಪದವಿ ಮುಗಿಸಿ ಹೊರಬಂದ ವಿದ್ಯಾರ್ಥಿಗಳು ಉದ್ಯೋಗಕ್ಕಾಗಿ ಕಾಯಬೇಕಾದ ಪರಿಸ್ಥಿತಿ ಉಂಟಾಗಿ ಅವರ ಅಮೂಲ್ಯ ಸಮಯ ವ್ಯರ್ಥವಾಗಬಹುದು. ಇದರಿಂದ ಮಕ್ಕಳಲ್ಲಿ ನಿರುತ್ಸಾಹದ ಜೊತೆಗೆ ಅವರ ಪ್ರತಿಭಾ ಕೌಶಲ್ಯ ಪರಿಣಾಮಕಾರಿಯಾಗಿ ಬಳಕೆಯಾಗಬೇಕಾದ ಸಮಯದಲ್ಲಿ ಬಳಕೆಯಾಗದೆ ಕುಂಠಿತಗೊಳ್ಳಬಹುದು. ಖಾಸಗಿ ಸಂಸ್ಥೆಗಳು ಕೂಡ ಈ ನಿರ್ಧಾರವನ್ನು ವಿರೋಧಿಸಬಹುದಾದ ಸಂಭವ ವಿದ್ದು, ಹೊಸ ಕಂಪನಿಗಳು ಕರ್ನಾಟಕಕ್ಕೆ ಕಾಲಿಡುವಲ್ಲಿಯೂ ಹಿಂಜರಿಯುವ ಸಾಧ್ಯತೆ ಉದ್ಭವವಾಗಬಹುದು. ಅದುದರಿಂದ ಇದರ ಜಾರಿ ಮುನ್ನ ಸಾಧಕ ಬಾಧಕಗಳ ಬಗ್ಗೆ ಚರ್ಚಿಸಿ ತೆರೆಯುವುದು ಒಳಿತು.

–ಕೆ.ಎಂ. ನಾಗರಾಜು, ವಿಜಯನಗರ 1ನೇ ಹಂತ, ಮೈಸೂರು

ಮಹಾರಾಜ ಪ್ರೌಢಶಾಲೆ ಆವರಣದಲ್ಲಿ ಕಸ ತೆರವುಗೊಳಿಸಿ




ಮಾನ್ಯರೆ,

ಮೈಸೂರಿನ ಮಹಾರಾಜ ಪ್ರೌಢ ಶಾಲೆ ಆವರಣದಲ್ಲಿ ಎಲ್ಲೆಂದರಲ್ಲಿ ನೀರಿನ ಪ್ಲಾಸ್ಟಿಕ್ ಬಾಟಲುಗಳು, ತ್ಯಾಜ್ಯ ವಸ್ತುಗಳ ಮತ್ತು ಕಸದ ರಾಶಿಯೇ ಇದೆ. ನಗರ ಪಾಲಿಕೆ ಸಿಬ್ಬಂದಿ ಇತ್ತ ಗಮನಹರಿಸಿಲ್ಲ. ಇದರ ನಡುವೆಯೇ ವಿದ್ಯಾರ್ಥಿಗಳು ವ್ಯಾಸಂಗ ಮಾಡುವಂತಾಗಿದೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಕಸ ತೆರವುಗೊಳಿಸುವಂತೆ ಮನವಿ.

–ಇಂದಿರಾ ವಿವೇಕ್, ಮೈಸೂರು.

ಅಮೂಲ್ಯ ನೆನಪುಗಳ ಫ್ರೇಂ....

–ಆರ್.ಜಿ.ಸಿಂಗ್
ಕಾರ್ಯದರ್ಶಿ, ರಾಮಸನ್ಸ್ ಕಲಾ ಪ್ರತಿಷ್ಠಾನ



*ಸರ್ದಾರ್ ಚಿಕ್ಕ ಕೃಷ್ಣೇ ಅರಸು ಮತ್ತು ದೇವಜಮ್ಮಣ್ಣಿ (ಹಗಿನವಾಳು ಚಿಕ್ಕಲಿಂಗರಾಜ ಅರಸು ಅವರ ಪುತ್ರಿ) ಅವರು 10ನೇ ಚಾಮರಾಜೇಂದ್ರ ಒಡೆಯರ್ ಮತ್ತು ಅವರ ಸಹೋದರರ ಜೈವಿಕ ಪೋಷಕರು. ಸರ್ದಾರ್ ಚಿಕ್ಕ ಕೃಷ್ಣೇ ಅರಸು ಅವರು ಬೆಟ್ಟದಕೋಟೆ ವಂಶದವರು. ಇವರು ಕೃಷ್ಣೇ ಅರಸರ ಪುತ್ರ. ಕೃಷ್ಣೇ ಅರಸರು ದೇವಜಮ್ಮಣಿ ಮತ್ತು ಚೆಲುವಜಮ್ಮಣ್ಣಿ ಅವರ ಹಿರಿಯ ಸಹೋದರರಾಗಿದ್ದರು. ದೇವಜಮ್ಮಣ್ಣಿ ಹಾಗೂ ಚೆಲುವಜಮ್ಮಣ್ಣಿ ಅವರು ಕ್ರಮವಾಗಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಮೊದಲ ಮತ್ತು ಮೂರನೇ ಪತ್ನಿಯರಾಗಿದ್ದರು.


ಕುಳಿತಿರುವ ಮಹಾರಾಜ 10ನೇ ಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಹಾಗೂ ಅವರ ಸಹೋದರರು (ಎಡದಿಂದ ಬಲಕ್ಕೆ ಗೋಪಾಲ ರಾಜೇ ಅರಸ್, ಸಿಆರ್‌ಡಬ್ಲ್ಯೂ ಮತ್ತು ಸುಬ್ರಹ್ಮಣ್ಯ ರಾಜೇ ಅರಸ್) ಈ ಛಾಯಾಚಿತ್ರವು 1876ರಲ್ಲಿ ಅಂದಿನ ಪ್ರಸಿದ್ಧ ಛಾಯಾಗ್ರಾಹಕರಾದ ಬೌರ್ನ್ ಮತ್ತು ಶೆಫರ್ಡ್ ತೆಗೆದಿದ್ದಾಗಿದೆ. ಇವರು ಕಲ್ಕತ್ತಾ, ಬಾಂಬೆ ಮತ್ತು ಸಿಮ್ಲಾದಲ್ಲಿ (1864–1900) ಸ್ಟುಡಿಯೋಗಳನ್ನು ಹೊಂದಿದ್ದರು. ಛಾಯಾಚಿತ್ರಗಳ ಆಲ್ಬಮ್ ಅನ್ನು ಜನವರಿ 15, 1887ರಂದು ಡಾ.ಜಾನ್ ವಿಲಿಯಂ ಟೈಲರ್ ಅವರು ರಾಣಿ ವಿಕ್ಟೋರಿಯಾ ಅವರಿಗೆ ನೀಡಿದರು.

ಚಿತ್ರ ಸಂಗ್ರಹ ಮತ್ತು ಕೃಪೆ: ರಾಯಲ್ ಆರ್ಕೈವ್ಸ್, ರಾಯಲ್ ಕಲೆಕ್ಷನ್ ಟ್ರಸ್ಟ್, ಯುಕೆ.

1926ರಿಂದ 1941ರವರೆಗೆ ಮೈಸೂರು ದಿವಾನರಾಗಿದ್ದ ಸರ್ ಮಿರ್ಜಾ ಇಸ್ಮಾಯಿಲ್ ಅವರು ತಮ್ಮ 'ಮೈ ಪಬ್ಲಿಕ್ ಲೈಫ್–ರಿಕಲೆಕ್ಷನ್ಸ್ ಅಂಡ್ ರಿಫ್ಲೆಕ್ಷನ್ಸ್' ಪುಸ್ತಕದ ಮೊದಲ ಅಧ್ಯಾಯದಲ್ಲಿ ಆಸಕ್ತಿದಾಯಕ ವಿಷಯವೊಂದನ್ನು ಉಲ್ಲೇಖಿಸಿದ್ದಾರೆ. 1881 ರಿಂದ 1883ರವರೆಗೆ ಮೈಸೂರು ಸಂಸ್ಥಾನದ ದಿವಾನರಾಗಿದ್ದ ಸಿ.ರಂಗಾಚಾರ್ಲು ಅವರ ಮನವೊಲಿಕೆ ಮೇರೆಗೆ ಯುವ ಮಹಾರಾಜ ಹತ್ತನೇ ಚಾಮರಾಜೇಂದ್ರ ಒಡೆಯರ್ (ಆಳ್ವಿಕೆ 1868–1894) ಅವರ ಮುಸಾಹಿಬ್ (ಆಪ್ತ ಸಲಹೆಗಾರ) ಅಥವಾ ಎಯ್ಡ್–ಡಿ–ಕ್ಯಾಂಪ್ (ಮಹಾರಾಜರ ವೈಯಕ್ತಿಕ ಸಹಾಯಕ ಅಧಿಕಾರಿ) ಎಂಬ ಗೌರವಯುತ ಹುದ್ದೆಯನ್ನು ಅಲಂಕರಿಸಲು ಅವಕಾಶ ಸಿಕ್ಕಿತು ಎಂದು ಉಲ್ಲೇಖಿಸಿದ್ದಾರೆ.

'ನನ್ನ ತಂದೆಯವರು ಮಹಾರಾಜರ ಬಗ್ಗೆ ಅಪಾರ ನಿಷ್ಠೆ ಹೊಂದಿದ್ದರು. ಮಹಾರಾಜರಿಗೂ ನಮ್ಮ ತಂದೆಯ ಎಂದರೆ ಅಷ್ಟೇ ಆತ್ಮೀಯತೆ ಇತ್ತು. 1894ರಲ್ಲಿ ಕಲ್ಕತ್ತಾದಲ್ಲಿ ಕೇವಲ 31ನೇ ವಯಸ್ಸಿನವರಿದ್ದಾಗ 10ನೇ ಚಾಮರಾಜೇಂದ್ರ ಒಡೆಯರ್ ಅವರು ಅಕಾಲಿಕ ನಿಧನ ಹೊಂದಿದ್ದು ಸಂಸ್ಥಾನಕ್ಕೆ ಅಪಾರ ನಷ್ಟವನ್ನುಂಟು ಮಾಡಿತು. ಜೊತೆಗೆ ಈ ದುಃಖದ ಘಟನೆಗೆ ಎಲ್ಲೆಡೆ ಶೋಕ ವ್ಯಕ್ತವಾಯಿತು. ವಿಚಿತ್ರವೆಂದರೆ ಮಹಾರಾಜರ ಇಬ್ಬರೂ ಅಣ್ಣಂದಿರು ಸಹ ಅದೇ ವಯಸ್ಸಿನಲ್ಲಿ ನಿಧನರಾಗಿದ್ದರು. ತಾವೂ ಸಹ ಆ ವಯಸ್ಸು ಮೀರಿ ಬದುಕುವುದಿಲ್ಲ ಎಂಬ ಭಾವನೆ ಮಹಾರಾಜರಿಗೂ ಇತ್ತು' ಎಂದು ಪುಸ್ತಕದಲ್ಲಿ ನಮೂದಿಸಲಾಗಿದೆ.

ಮಹಾರಾಜ 10ನೇ ಚಾಮರಾಜೇಂದ್ರ ಒಡೆಯರ್ ಅವರ ಜೈವಿಕ ತಂದೆ (ಹೆತ್ತ ತಂದೆ) ಸರ್ದಾರ್ ಚಿಕ್ಕ ಕೃಷ್ಣೇಅರಸ್* ಅವರು ಮಹಾರಾಜರ ಜನನಕ್ಕೆ ಸುಮಾರು ಒಂದು ವಾರ ಮುಂಚೆಯೇ ನಿಧನರಾದರು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ಕನ್ನಡಕ್ಕೆ ಹೊಸ ಮೆರುಗು ನೀಡಿದ ದೇವುಡು

ಕನ್ನಡ ಸಹಸ್ರಾರು ವರ್ಷಗಳಿಂದ ಕರುನಾಡ ಜನರ ಉಸಿರಾಗಿರುವ ಭಾಷೆ. ಇದರ ಪ್ರಾಚೀನ ಸಾಹಿತ್ಯ ಕೃತಿಗಳು ಉಳಿದು ಬಂದಿಲ್ಲದಿದ್ದರೂ ಅವು ಆ ಕಾಲದಲ್ಲಿ ಪ್ರಚಲಿತವಾಗಿದ್ದುವೆಂಬುದಕ್ಕೆ ಪುರಾವೆಗಳು ದೊರಕುತ್ತವೆ. ಕವಿರಾಜ ಮಾರ್ಗ ಉಪಲಬ್ಧ ಕೃತಿಗಳಲ್ಲಿ ಮೊದಲನೆಯದು. ಅದು ಲಕ್ಷಣ ಗ್ರಂಥ. ಉಪಲಬ್ಧ ಕಾವ್ಯಗಳಲ್ಲಿ ಪಂಪನ ಆದಿಪುರಾಣ, ವಿಕ್ರಮಾರ್ಜುನ ವಿಜಯ ಆದಿಮಕೃತಿಗಳು. ಅವು ಕಾಲದ ದೃಷ್ಟಿಯಿಂದ ಮಾತ್ರವಲ್ಲ, ಗುಣದ ದೃಷ್ಟಿಯಿಂದಲೂ ಮೊದಲಿಗೆ ಪರಿಗಣಿಸಲ್ಪಡಬೇಕಾದ ಕೃತಿಗಳೇ. ಅನಂತರ ಕಾಲದಲ್ಲಿ ರನ್ನ, ಪೊನ್ನ, ಜನ್ನರು ಕನ್ನಡ ಸಾಹಿತ್ಯವನ್ನು ಬೆಳೆಸಿದರು. ಶರಣ ವಚನಕಾರರು ಅದರ ಪಾಲನೆಯನ್ನೂ ಹರಿದಾಸರು ಅದರ ಲಾಲನೆಯನ್ನೂ ಮಾಡಿದರು. ಕುಮಾರವ್ಯಾಸ, ರಾಘವಾಂಕ, ಲಕ್ಷ್ಮೀಶ, ಷಡಕ್ಷರಿ, ರತ್ನಾಕರ ವರ್ಣಿ ಮುಂತಾದವರು ಕನ್ನಡ ಸಾಹಿತ್ಯ ವಿಶ್ವಮನ್ನಣೆಯನ್ನು ಗಳಿಸುವ ಉನ್ನತಿಗೆ ಒಯ್ದರು. ಹತ್ತೊಂಬತ್ತನೆಯ ಮತ್ತು ಇಪ್ಪತ್ತನೆಯ ಶತಮಾನಗಳಲ್ಲಿ ಇಂಗ್ಲಿಷ್ ಸಾಹಿತ್ಯದ ಸಂಪರ್ಕದಿಂದ ಕನ್ನಡದಲ್ಲಿ ಹೊಸ ಶಾಖೆಗಳೂ ಪ್ರಕಾರಗಳೂ ಚಿಗುರಿದವು. ಭಾವಗೀತೆ, ಸಣ್ಣಕತೆ, ಕಾದಂಬರಿ, ಹಾಡುಗಬ್ಬ, ಹನಿಕವಿತೆ ಇತ್ಯಾದಿ ಇತ್ಯಾದಿ ಪ್ರಕಾರಗಳಲ್ಲಿ ನವೀನವಾದ ಪ್ರಯೋಗಗಳು ನಡೆದುವು. ಬಿ.ಎಂ.ಶ್ರೀ, ಕುವೆಂಪು, ಬೇಂದ್ರೆ, ಕಾರಂತ, ಮಾಸ್ತಿ, ಗೋಕಾಕ ಮುಂತಾದವರು ಕನ್ನಡಕ್ಕೆ ವಿಶ್ವಮನ್ನಣೆ ದೊರಕುವ ಕೃತಿಗಳನ್ನು ರಚಿಸಿದರು. ನಾವು ಕನ್ನಡಿಗರು ಎಂದು ಹೇಳಿಕೊಂಡು ನಮ್ಮ ಜನ ಹೆಮ್ಮೆಪಡುವಂತಹ ಕೃತಿಗಳು ಕನ್ನಡದಲ್ಲಿ ಹುಟ್ಟಿದವು. ಅನಕೃ, ತರಾಸು, ಭೈರಪ್ಪ ಅದ್ಭುತ ಕೃತಿಗಳನ್ನು ಸೃಷ್ಟಿಸಿದರು. ಡಿವಿಜಿಯವರ ಮಂಕುತಿಮ್ಮನ ಕಗ್ಗ ಕನ್ನಡದ ಭಗವದ್ಗೀತೆ ಎಂಬ ಖ್ಯಾತಿಯನ್ನು ಪಡೆದು ಎಲ್ಲರ ನಾಲಿಗೆಯ ಮೇಲೆ ನಲಿದಾಡುವಂತಾಯಿತು.

ಇಂತಹ ಸನ್ನಿವೇಶದಲ್ಲಿ ಪರಂಪರಾಗತ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು, ಸಂಸ್ಕೃತ ಸಾಹಿತ್ಯ ಸಾರವನ್ನು ಸಾಕ್ಷಾತ್ಕರಿಸಿಕೊಂಡು, ಜೀವನಾನುಭವವನ್ನು ರಕ್ತಗತವನ್ನಾಗಿ ಮಾಡಿಕೊಂಡು, ತಮ್ಮದೇ ಆದ, ಇತರರು ಅನುಸರಿಸುವುದಕ್ಕಿರಲಿ, ಅನುಕರಣೆ ಮಾಡುವುದಕ್ಕೂ ಕಷ್ಟವೆನಿಸುವ ಶೈಲಿಯಲ್ಲಿ ಅನೇಕ ಕೃತಿಗಳನ್ನು ರಚಿಸಿದವರು ದೇವುಡು, ಎಂದರೆ ದೇವುಡು ನರಸಿಂಹಶಾಸ್ತ್ರಿ. ಕೆಲವರು ಕನ್ನಡ ಸಾಹಿತಿಗಳು ಹೆಚ್ಚು ಪ್ರಸಿದ್ಧರಾಗಿರಬಹುದು. ದೊಡ್ಡ ಪ್ರಶಸ್ತಿಗಳಿಗೆ ಭಾಜನರಾಗಿರಬಹುದು. ಪ್ರಾಧ್ಯಾಪಕ ಇತ್ಯಾದಿ ಹುದ್ದೆಗಳನ್ನು ಅಲಂಕರಿಸಿರಬಹುದು. ಆದರೆ ಅವರು ಯಾರೂ ವೇದಶಾಸ್ತ್ರ ಪಾಂಡಿತ್ಯದಲ್ಲಿ ದೇವುಡುಗೆ ನಾನು ಸಮಾನ ಎಂದು ಹೇಳಿಕೊಳ್ಳಲಾರರು.

ದೇವುಡು ನರಸಿಂಹಶಾಸ್ತ್ರಿಗಳು ಜನಿಸಿದ್ದು ಹತ್ತೊಂಬತ್ತನೆಯ ಶತಮಾನದ ಕೊನೆಯ ದಶಕದಲ್ಲಿ (29–12–1896). ಅವರು ಈ ಲೋಕದಲ್ಲಿದ್ದುದು ಅರುವತ್ತಾರು ವರ್ಷಗಳಿಗಿಂತ ಕೊಂಚ ಕಡಿಮೆ (ನಿಧನ 27–10–1962). ಅಷ್ಟು ಅಲ್ಪ ಕಾಲದಲ್ಲಿ ಎಷ್ಟೊಂದು ಸಾಧನೆ! ಸುಮಾರು ಒಂದು ನೂರು ಕೃತಿಗಳು. ಕೆಲವು ಮಕ್ಕಳಿಗಾಗಿ ಕೆಲವು ಸಾಮಾನ್ಯರಿಗಾಗಿ, ಕೆಲವು ವಿದ್ವಾಂಸರಿಗಾಗಿ, ಅದು ಎಂತಹ ಪ್ರತಿಭೆ!

ದೇವುಡು ಸಂಪ್ರದಾಯ ನಿಷ್ಠವಾಗಿದ್ದ ಬ್ರಾಹ್ಮಣ ಕುಲದಲ್ಲಿ ಹುಟ್ಟಿದವರು. ವೇದವೇದಾಂಗಗಳ ಶಾಸ್ತ್ರೋಕ್ತ ಅಧ್ಯಯನವನ್ನು ಮಾಡಿದವರು. ಸಂಧ್ಯಾವಂದನೆ, ದೇವತಾರ್ಚನೆಗಳನ್ನು ಮಾಡುತ್ತಿದ್ದ ಕರ್ಮಕಬ್ರಾಹ್ಮಣರು. ಅವರ ಮನೆಗೆ ಕ್ರಿಶ್ಚಿಯನ್ ರೆವರೆಂಡ್ ಉತ್ತಂಗಿ ಚೆನ್ನಪ್ಪನವರು ಬರುವ ಸನ್ನಿವೇಶ. ದೇವುಡು ತಮ್ಮ ವಿದ್ಯಾಗುರುಗಳೂ ಮೀಮಾಂಸರತ್ನ ಎನಿಸಿಕೊಂಡಿದ್ದವರೂ ಆಗಿದ್ದ ವೈದ್ಯನಾಥ ಶಾಸ್ತ್ರಿಗಳಿಗೆ ವಿಷಯವನ್ನು ತಿಳಿಸಿ ಅವರನ್ನು ನಾನು ಹೇಗೆ ಸ್ವಾಗತಿಸಬೇಕು? ಎಂದು ಕೇಳಿದರು. ಸಾಕ್ಷಾತ್ ಏಸು ಸ್ವಾಮಿಯೇ ನಿನ್ನ ಮನೆಗೆ ಬಂದರೆ ಹೇಗೆ ಸ್ವಾಗತಿಸಬೇಕೋ ಹಾಗೆ ಸ್ವಾಗತಿಸು ಎಂದು ಗುರುಗಳು ಹೇಳಿದರು. ಉತ್ತಂಗಿ ಚೆನ್ನಪ್ಪನವರು ಬಂದಾಗ ದೇವುಡು ನರಸಿಂಹ ಶಾಸ್ತ್ರಿಗಳು ಅವರ ಪಾದಗಳನ್ನು ತಾವೇ ಕೈಯಿಂದ ತೊಳೆದು ಭಕ್ತಿಯಿಂದ ಬರಮಾಡಿಕೊಂಡು ಭೋಜನ ಮಾಡಿಸಿದರು. ದೊಡ್ಡವರು ಎಂದೂ ದೊಡ್ಡವರೇ.

ದೇವುಡು ಎಂಬುದು ತೆಲುಗು ಪದ. ಅವರ ವಂಶದಲ್ಲಿ ಹಿಂದೆ ಯಾರಿಗೋ ದೇವರು ಕಾಣಿಸಿದ್ದ ಕಾರಣ ದೇವುಡು ಎಂಬ ಹೆಸರು ಆ ವಂಶದವರಿಗೆ ಬಂದಿತು. ಅಷ್ಟು ದೊಡ್ಡ ಹೆಸರಿದ್ದರೂ ಜೀವನ ಅವರಿಗೆ ಸುಖದ ಸುಪ್ಪತ್ತಿಗೆಯಾಗಿರಲಿಲ್ಲ. ದೇವುಡು ನರಸಿಂಹ ಶಾಸ್ತ್ರಿಗಳು



ದೇವುಡು ನರಸಿಂಹಶಾಸ್ತ್ರಿಗಳು

ಬಿ.ಎ., ಎಂ.ಎ. ವಿದ್ಯಾಭ್ಯಾಸ ಮಾಡಿದ್ದು ಮೈಸೂರಿನಲ್ಲಿ (1917–23). ಡಾ. ಎಸ್.ರಾಧಾಕೃಷ್ಣನ್, ಪ್ರೊ. ಎಂ.ಹಿರಿಯಣ್ಣ ಮುಂತಾದ ಮಹಾಮೇಧಾವಿಗಳು ಅಧ್ಯಾಪನ ಮಾಡುತ್ತಿದ್ದ ಸುವರ್ಣಯುಗ ಅದು. ಕನ್ನಡ, ತೆಲುಗು, ಸಂಸ್ಕೃತ, ಇಂಗ್ಲಿಷ್ ಭಾಷೆಗಳಲ್ಲಿ ಆಗಲೇ ನಿರರ್ಗಳವಾಗಿ ಮಾತುಗಳನ್ನಾಡುತ್ತಿದ್ದ ದೇವುಡು ಎಲ್ಲರ ಗಮನ ಸೆಳೆದಿದ್ದ ವಿದ್ಯಾರ್ಥಿ. ಆ ವಾಗ್‌ಝರಿ ಅವರನ್ನು ಮುಂದೆಯೂ ಶ್ರೇಷ್ಠ ವಾಗ್ಮಿಗಳನ್ನಾಗಿ ಮಾಡಿತು. ಉಪನಿಷತ್ತುಗಳು, ಭಗವದ್ಗೀತೆ, ಕಾಳಿದಾಸ ಇತ್ಯಾದಿಗಳ ಮೇಲೆ ಶಾಸ್ತ್ರಿಗಳು ಭಾಷಣ ಮಾಡಿದರೆ ಅದು ಶ್ರೋತೃಗಳಿಗೆ ಅಮೃತಪಾನ, ಸ್ವರ್ಗಸೋಪಾನ.

ದೇವುಡು ಶ್ರೇಷ್ಠ ಶಿಕ್ಷಕರಾಗಿದ್ದರು. ಶಿಕ್ಷಕರಾಗಿ ಅವರು ವೃತ್ತಿಯನ್ನು ಆರಂಭಿಸಿದ್ದು ಮೈಸೂರಿನ ಸದ್ವಿದ್ಯಾ ಶಾಲೆಯಲ್ಲಿ (1923). ಅದು ಸ್ವಲ್ಪ ಕಾಲ ಮಾತ್ರ. ಆಮೇಲೆ ಕೆಲವು ತಿಂಗಳು ಶೃಂಗೇರಿ ಮಠದಲ್ಲಿ ಪೇಷ್ಕಾರ್. 1924ರಿಂದ 1929ರವರೆಗೆ ಬೆಂಗಳೂರಲ್ಲಿ ಆರ್ಯ ವಿದ್ಯಾಶಾಲಾ ಹೆಡ್ಮಾಸ್ಟರ್.

ದೇವುಡು ಶಿಕ್ಷಕರಾಗಿದ್ದರೂ ಅವರ ಒಳಗಿದ್ದ ತುಡಿತ ಕಲಾ ಪ್ರಪಂಚಕ್ಕೆ ಸೆಳೆದೊಯ್ಯುತ್ತಿತ್ತು. ಚಾಮುಂಡೇಶ್ವರಿ ನಾಟಕದ ಕಂಪನಿಯಲ್ಲಿ ನಟರೂ ಆಗಿದ್ದರು. ಆಗ, ಎಂದರೆ 1920ರ ದಶಕದಲ್ಲಿ ಮೂಕಿ (ಎಂದರೆ ಮಾತಿಲ್ಲದ, ಅಭಿನಯ ಮಾತ್ರ ಇರುತ್ತಿದ್ದ) ಚಲನಚಿತ್ರಗಳ ಯುಗ. ಅಂತಹ ಚಿತ್ರಗಳಲ್ಲೂ ದೇವುಡು ನಟಿಸಿದರು. ಕರ್ನಾಟಕ ಫಿಲ್ಮ್ ಕಂಪನಿ ಸ್ಥಾಪಿಸಿದರಂತೆ. ಎಂತಹ ಸಾಹಸ–ಮಾರ್ಕಂಡೇಯ ಅಥವಾ ಚಿರಂಜೀವಿ ಎಂಬ ಚಿತ್ರದಲ್ಲಿ ಮೃಕಂಚಮುನಿಯ ಪಾತ್ರ ವಹಿಸಿದ್ದರಂತೆ. ಭಕ್ತ ಧ್ರುವ ಎಂಬ ಚಿತ್ರ 1934 ರಲ್ಲಿ ಕನ್ನಡದಲ್ಲಿ ತಯಾರಾಯಿತು. ಮೂಕಿ ಚಿತ್ರಗಳ ಬದಲು ಟಾಕಿ ರೂಢಿಗೆ ಬಂದಿತ್ತು. ಅದಕ್ಕೆ ಸಾಹಿತ್ಯವನ್ನು ದೇವುಡು ಬರೆದರು. 1942ರಲ್ಲಿ ಗಾಂಧಿ ನಗರ ಪ್ರೌಢಶಾಲೆಯನ್ನು ಸ್ಥಾಪಿಸಿ ತಾವೇ ಪ್ರಿನ್ಸಿಪಾಲರಾಗಿ ದುಡಿದರು. 1943 ರಿಂದ 1945ರವರೆಗೆ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು. 1950 ರಲ್ಲಿ ಬೆಂಗಳೂರು ಶಂಕರಪುರದಲ್ಲಿ ಗೀರ್ವಾಣ ವಿದ್ಯಾಪೀಠವನ್ನು ಸ್ಥಾಪಿಸಿದರು. ಕೊನೆಗಾಲದವರೆಗೂ ಸಾಹಸಮಯ ಜೀವನವನ್ನು ನಡೆಸಿ ನಿಧನವನ್ನು ಹೊಂದಿದರು.

ಭಗವದ್ಗೀತೆಯ ಬಗೆಗೆ ಭಾಷಣ ಮಾಡುವುದು ಸುಲಭ. ಆದರೆ ಅದರಲ್ಲಿ ಹೇಳಿದ ರೀತಿಯಲ್ಲಿ ನಡೆದುಕೊಳ್ಳುವುದು ಅತೀವ ಕಷ್ಟ.

ಯೋ ನ ಹೃಷ್ಯತಿ ನ ದ್ವೇಷ್ಟಿ ನ ಶೋಚತಿ ನ ಕಾಂಕ್ಷತಿ
ಸರ್ವಾರಂಭ ಪರಿತ್ಯಾಗೀ ಭಕ್ತಿಮಾನ್ ಮೇ ಪ್ರಿಯೋ ನರಃ॥

ಎಂಬುದರ ಬಗೆಗೆ ಗಂಟೆಗಟ್ಟಲೆ ಮಾತನಾಡಬಹುದು. ಆದರೆ ಹಾಗೆ ಆಚರಿಸುವುದು ಅಂತಹ ಘಳಿಗೆ ದೇವುಡು ಅವರ ಜೀವನದಲ್ಲೂ ಬಂದಿತ್ತು. ಉಡುಪಿಯಲ್ಲಿ ಗೀತೆಯ ಮೇಲೆ ಉಪನ್ಯಾಸ. ಸಾವಿರಾರು ಜನ ಸೇರಿದ್ದಾರೆ. ಶಾಸ್ತ್ರಿಗಳು ಉಪನ್ಯಾಸ ಆರಂಭಿಸಬೇಕು. ಆಗ ಅವರಿಗೊಂದು ಟೆಲಿಗ್ರಾಂ ಬಂದಿತು. ಒಡೆದು ಓದಿಕೊಂಡರು. ಸ್ಥಿತಪ್ರಜ್ಞರಾಗಿ ಆ ಟೆಲಿಗ್ರಾಮನ್ನು ಮಡಚಿ ಪುಸ್ತಕದಲ್ಲಿಟ್ಟು ಉಪನ್ಯಾಸ ಆರಂಭಿಸಿದರು. ಅವರ ಮಾತು ಅಸ್ಖಲಿತವಾಗಿ ಗಂಗಾಪ್ರವಾಹದಂತೆ ಹರಿಯಿತು. ಜನರು ದ್ವಾಪರ ಯುಗದಲ್ಲಿ ಕೃಷ್ಣನ ಮಾತುಗಳನ್ನೇ ನೇರವಾಗಿ ಕೇಳಿದವರಂತೆ ಆನಂದಿಸಿದರು. ಉಪನ್ಯಾಸವಾದ ಮೇಲೆ ತತ್‌ಕ್ಷಣವೇ ಕಾರಿನಲ್ಲಿ ಕಡೂರಿಗೆ ಬಂದು ಅಲ್ಲಿಂದ ರೈಲಿನಲ್ಲಿ ಬೆಂಗಳೂರಿಗೆ, ಅಲ್ಲಿಂದ ಮನೆಗೆ ತಲುಪಿದರು. ಟೆಲಿಗ್ರಾಂನಲ್ಲಿದ್ದ ವಾರ್ತೆ ಅವರ ಹಿರಿಯ ಮಗ ರಾಮು ನಿಧನ ಹೊಂದಿದ ವಿಷಯವನ್ನೊಳಗೊಂಡಿತ್ತು. ಆ ವಾರ್ತೆಯನ್ನು ತಿಳಿದೂ ಮನಸ್ಸಿನ ದುಃಖವನ್ನು ದುಗುಡವನ್ನೂ ತಡೆದುಕೊಂಡು ಅವಿಚಲಿತರಾಗಿ ಉಪನ್ಯಾಸವನ್ನು ಮಾಡಿದ ದೇವುಡು ಅವರಲ್ಲದೆ ಬೇರೆ ಯಾರು ಸ್ಥಿತಪ್ರಜ್ಞರು?

ಕನ್ನಡ ಸಾಹಿತ್ಯಕ್ಕೆ ದೇವುಡು ಕೊಟ್ಟಿರುವ ಕೊಡುಗೆ ಅನುಪಮ. ಅಪಾರ, ಜೈಮಿನಿ ಮುನಿಗಳು ಸೂತ್ರಗಳನ್ನು ರಚಿಸಿರುವ, ಶಬರ ಮುನಿಗಳು ಭಾಷ್ಯವನ್ನು ಬರೆದಿರುವ, ಕುಮಾರಿಲಭಟ್ಟ ಮತ್ತು ಪ್ರಭಾಕರ ಗುರುಗಳು ವಿವರಿಸಿರುವ ಮೀಮಾಂಸಾ ಶಾಸ್ತ್ರ ಅತ್ಯಂತ ಗಹನ. ಅದನ್ನು ಆಳವಾಗಿ ಅಧ್ಯಯನ ಮಾಡಿ ಅದರ ಸಾರ ಸರ್ವಸ್ವವನ್ನು ದೇವುಡು ಕನ್ನಡದಲ್ಲಿ **ಮೀಮಾಂಸಾದರ್ಪಣ** ಎಂಬ ಗ್ರಂಥದಲ್ಲಿ ಹೇಳಿದ್ದಾರೆ. ಅವರು ಬರೆದ ಕಾದಂಬರಿಗಳೇ ಹದಿನೇಳು. 1952 ರಲ್ಲಿ ಅವರು ಬರೆದ **ಮಹಾಬ್ರಾಹ್ಮಣ** ಅವರಿಗೆ ಸಾಹಿತ್ಯ ವಲಯದಲ್ಲಿ ಗೌರವವನ್ನು ತಂದುಕೊಟ್ಟಿತು. 1959 ರಲ್ಲಿ ಅವರು ರಚಿಸಿದ ಮಹಾಕ್ಷತ್ರಿಯ ಎಂಬ ಕಾದಂಬರಿಗೆ 1963ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಘೋಷಿಸಲಾಯಿತು. ಆದರೆ ಅದಕ್ಕೆ ಮೊದಲೇ ದೇವುಡು ಪರಲೋಕಕ್ಕೆ ತೆರಳಿದ್ದರು. ಅವರ ಪತ್ನಿ ಗೌರಮ್ಮನವರು ಪ್ರಧಾನ ಮಂತ್ರಿ ಜವಾಹರಲಾಲ್ ನೆಹರೂ ಅವರಿಂದ ಪ್ರಶಸ್ತಿಯನ್ನು ಸ್ವೀಕರಿಸಬೇಕಾಯಿತು. 1960ರಲ್ಲಿ ದೇವುಡು ಬರೆದ ಕೊನೆಯ ಕಾದಂಬರಿ **ಮಹಾದರ್ಶನ**. ಈ ಮೂರು ಕೃತಿಗಳನ್ನು ದೇವುಡು ಸಾಹಿತ್ಯದ ರತ್ನತ್ರಯ ಎನ್ನಬಹುದು. ಇವುಗಳನ್ನು ಕುರಿತು ಮುಂದಿನ ಲೇಖನಗಳಲ್ಲಿ ಚರ್ಚಿಸೋಣ.

ದೇವುಡು ಇನ್ನೂ ಹದಿನೆಂಟು ವರ್ಷದವರಾಗಿದ್ದಾಗಲೇ ಕಾದಂಬರಿ ಬರೆಯಲಾರಂಭಿಸಿದ್ದರಂತೆ. 1912 ರಲ್ಲಿ ಅವರು ಬರೆದದ್ದು ಸಾಹಸ ವರ್ಮ ಎಂಬ ಕಾದಂಬರಿ. 1926 ರಲ್ಲಿ **ಕಳ್ಳರ ಕೂಟ,** 1931ರಲ್ಲಿ ಮಯೂರ, ಅದೇ ವರ್ಷದಲ್ಲಿ **ಅಂತರಂಗ,** 1951ರಲ್ಲಿ **ಒಡೆದ ಮುತ್ತು ಇತ್ಯಾದಿಗಳು** ಅವರ ಕೃತಿಗಳು. ಇವಲ್ಲದೆ **ದೇವುಡು ಕಥೆಗಳು, ಬುದ್ಧಿಯ ಕಥೆಗಳು, ದೇಶಾಂತರದ ಕಥೆಗಳು** ಇತ್ಯಾದಿ ಹಲವು ಕಥಾ ಸಂಗ್ರಹಗಳೂ ಅವರಿಂದ ರಚಿತವಾದವು. ಇಷ್ಟೇ ಅಲ್ಲ, ದೇವುಡು ಕನ್ನಡ ಪತ್ರಿಕೋದ್ಯಮದಲ್ಲೂ ದುಡಿದರು. ನಮ್ಮ ಪುಸ್ತಕ ಎಂಬ ಪತ್ರಿಕೆಯ ಸಂಪಾದಕರಾಗಿ ದೀರ್ಘಕಾಲ ಅದನ್ನು ನಡೆಸಿದರು.

ಇಷ್ಟೆಲ್ಲಾ ಪ್ರತಿಭಾ ಸಂಪನ್ನರಾಗಿದ್ದ ದೇವುಡು ನರಸಿಂಹ ಶಾಸ್ತ್ರಿಗಳು ಬಡತನದ ಬವಣೆಯನ್ನು ಅನುಭವಿಸಿದರು ಎಂಬುದು ಮಾತ್ರ ದುಃಖವನ್ನು ತರುವ ಸಂಗತಿ. ಅವರದು ದೊಡ್ಡ ಸಂಸಾರ. ಮೂವರು ಗಂಡು ಮಕ್ಕಳು, ಆರು ಹೆಣ್ಣು ಮಕ್ಕಳು. ಪತ್ನಿ ಗೌರಮ್ಮ ಹೇಗೋ ಸಂಸಾರವನ್ನು ನಿಭಾಯಿಸಿಕೊಂಡು ಹೋಗುತ್ತಿದ್ದರು. ಅವರಿಗಿದ್ದ ಸ್ಥಿತಿಯನ್ನು ಬೆಳಗೆರೆ ಕೃಷ್ಣಶಾಸ್ತ್ರಿಗಳು ವಿವರಿಸಿದ್ದಾರೆ. ಒಮ್ಮೆ ದೇವುಡು ಮೈಸೂರಿಗೆ ಬಂದಾಗ ಬಸ್ ಸ್ಟ್ಯಾಂಡ್‌ನಿಂದ ಕೃಷ್ಣಶಾಸ್ತ್ರಿಗಳು ಅವರನ್ನು ನರಸಿಂಹ ಮೊಹಲ್ಲಾದಲ್ಲಿದ್ದ ತಮ್ಮ ಮನೆಗೆ ಕರೆದುಕೊಂಡು ಹೋಗಬೇಕಾಗಿತ್ತು. ಸಿಟಿ ಬಸ್‌ನಲ್ಲಿ ಹೋಗೋಣವೆಂದು ಇಬ್ಬರೇ ಕಾಯುತ್ತಿದ್ದರು. ಅಲ್ಲೊಬ್ಬ ಸೌತೇಕಾಯಿ ಹಚ್ಚಿ ಮಾರುತ್ತಿದ್ದುದನ್ನು ಕಂಡ ದೇವುಡು ಅವರು "ಸೌತೇಕಾಯಿ ಎಳೆಯದಾಗಿದೆ, ತಿನ್ನೋಣವೇ' ಎಂದರು. ಕೃಷ್ಣಶಾಸ್ತ್ರಿಗಳ ಬಳಿ ಇದ್ದದ್ದು ಕೇವಲ ಎಂಟಾಣೆ (ಒಂದು ರೂಪಾಯಿನ ಅರ್ಧಭಾಗ) ಮಾತ್ರ. ಅದನ್ನು ಕೊಟ್ಟು ಸೌತೆಕಾಯಿ ಕೊಂಡರು. ಇಬ್ಬರೂ ತಿಂದರು. ಆಗ ಸಿಟಿ ಬಸ್ ಛಾರ್ಜಿಗೆ ಏನು ಮಾಡುವುದು? 'ನಿಮ್ಮ ಬಳಿ ಎಂಟಾಣೆ ದುಡ್ಡಿದೆಯೇ? ಬಸ್ಸಿಗೆ ಕೊಡಬೇಕು' ಎಂದು ಕೃಷ್ಣಶಾಸ್ತ್ರಿಗಳು ದೇವುಡು ಅವರನ್ನು ಕೇಳಿದರು. 'ಶಿವರಾತ್ರಿ ಜೊತೆ ಏಕಾದಶಿ ಬಂದ ಹಾಗೆ ಆಯಿತು. ನನ್ನ ಬಳಿ ಕಾಸೂ ಇಲ್ಲ' ಎಂದರು ದೇವುಡು. ವಿಧಿ ಇಲ್ಲದೆ ಇಬ್ಬರೂ ಉರಿ ಬಿಸಿಲಿನಲ್ಲಿ ನಡೆದುಕೊಂಡೇ ಹೋಗಿ ಅವರ ಮನೆಗೆ ತಲುಪಿದರು".

ಕಾಳಿದಾಸ ಹೇಳಿದ್ದಾನೆ –
'ಸಂಗತಂ ಶ್ರೀಸರಸ್ವತ್ಯೋರೇಕ ಸಂಶ್ರಯ ದುರ್ಲಭಮ್'

(ಲಕ್ಷ್ಮೀಸರಸ್ವತಿಯರು ಒಬ್ಬರಲ್ಲೇ ಇರುವುದು ದುರ್ಲಭ). ಇದಕ್ಕೆ ಸರಿಯಾದ ಉದಾಹರಣೆ ದೇವುಡು ನರಸಿಂಹ ಶಾಸ್ತ್ರಿಗಳು. ಅವರ ಬಗೆಗೆ **ಮುಲಕನಾಡು ಮಹನೀಯರು** ಸರಣಿಯಲ್ಲಿ ಪುಸ್ತಕ ಬರೆದಿರುವ ಪ್ರೊ.ಜಿ.ಅಶ್ವತ್ಥನಾರಾಯಣ ಅವರು ದೇವುಡು ಅವರನ್ನು ಕುರಿತು ಎಂ.ಎನ್. ವ್ಯಾಸರಾವ್ ಅವರು ಬರೆದ ಒಂದು ಪದ್ಯವನ್ನು ಉದಾಹರಿಸಿದ್ದಾರೆ. ಅದರೊಡನೆ ಈ ಲೇಖನವನ್ನು ಮುಗಿಸೋಣ.

ಉರುಳಿ ಹೋದ ಯುಗಗಳನ್ನು ಕಣ್ಣ ಮುಂದೆ ಮರಳಿಸಿ
ಮರೆತುಹೋದ ಆಶ್ರಮಗಳನು ಮತ್ತೆ ಇಲ್ಲಿ ಸೃಷ್ಟಿಸಿ
ದೇವಲೋಕ ಮರ್ತ್ಯಲೋಕ ಬೆಸೆದು ಒಂದುಗೂಡಲು
ದೈವತ್ವಕ್ಕೆ ಒಯ್ದರಂದು ಮನುಜರನ್ನು ದೇವುಡು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಬುಧವಾರ 10 ಜೂನ್ 2026





ಕಂಡ ಕಂಡಲ್ಲಿ ಕಸ ಹಾಕುವವರಿಗೆ ಮತ್ತೊಂದು ನಮೂನೆ ಮಾರ್ಗದರ್ಶನ

● ಅವರು ತಂದು ಸುರಿದ ಕಸ ಸ್ವಚ್ಛ ಮಾಡಿ; ಅದರಲ್ಲಿನ ಉಪಯುಕ್ತ ಪದಾರ್ಥಗಳಿಂದ ಸ್ವಚ್ಛ ಪಾಠ ● ಈ ಪ್ರಯತ್ನ ಫಲ ನೀಡುವ ನಿರೀಕ್ಷೆಯಲ್ಲಿ ಪಾಲಿಕೆ ಸ್ವಚ್ಛತಾ ಸಿಬ್ಬಂದಿ






ಮೈಸೂರು ಮಹಾ ನಗರಪಾಲಿಕೆಯಿಂದ ನಗರಾದ್ಯಂತ ಕಂಡ ಕಂಡಲ್ಲಿ ಕಸ ಸುರಿಯುತ್ತಿದ್ದ ಸ್ಥಳಗಳನ್ನು ಗುರ್ತಿಸಿ, ಶುಚಿಗೊಳಿಸಿ ಹೊಸ ರೂಪ ನೀಡಿ, ಸಾರ್ವಜನಿಕರಿಗೆ ಜಾಗೃತಿ ಮೂಡಿಸಿರುವುದನ್ನು ಚಿತ್ರಗಳಲ್ಲಿ ಕಾಣಬಹುದು.

ಮೈಸೂರು, ಜೂ.9(ಎಂಕೆ)–ಎಲ್ಲೆಂದರಲ್ಲಿ ಕಸ ಬಿಸಾಡುವವರ ಮನಸ್ಥಿತಿ ಬದಲಾವಣೆಗಾಗಿ 'ಕಸದಿಂದ ರಸ (ತ್ಯಾಜ್ಯದಿಂದ ಸಂಪತ್ತು)' ಸನ್ಮಾರ್ಗವನ್ನು ಹಿಡಿಯಲಾಗಿದೆ.

'ಸ್ವಚ್ಛ ಮೈಸೂರು–ಸಮರ್ಥ ಮೈಸೂರು' ಧ್ಯೇಯವನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ನಗರಪಾಲಿಕೆಯ ಪೌರ ಕಾರ್ಮಿಕರು ಹಾಗೂ ಆರೋಗ್ಯ ನಿರೀಕ್ಷಕರು(ಹೆಲ್ತ್ ಇನ್ಸ್‌ಪೆಕ್ಟರ್) ವಿನೂತನ ಮಾರ್ಗ ಹಿಡಿದ್ದಿದ್ದು, ಬಿಸಾಡಿದ ವಸ್ತುಗಳನ್ನು ಮರುಬಳಕೆ ಮಾಡುವ ಮೂಲಕ ಕಂಡ ಕಂಡಲ್ಲಿ ಕಸ ಎಸೆಯುವವರಿಗೆ ಕಡಿವಾಣ ಹಾಕಲು ಮುಂದಾಗಿದ್ದಾರೆ.

ಪಾಲಿಕೆಯಿಂದ ಪ್ರತ್ಯೇಕ ಅನುದಾನವಿಲ್ಲದಿದ್ದರೂ ಆಯಾ ಭಾಗದ ಸ್ಥಳೀಯ ಮುಖಂಡರುಗಳ ಸಹಕಾರದಿಂದ ರಸ್ತೆ ಬದಿಗಳಲ್ಲಿ, ವಿದ್ಯುತ್ ಕಂಬಗಳು ಮತ್ತು ಗಿಡ–ಮರಗಳ ಕೆಳಗೆ, ಪಾರ್ಕ್‌ಗಳ ಬಳಿಯಲ್ಲಿ ಬಿಸಾಡಿರುವ ಹಳೆ ಟಯರ್, ಬಾಟಲ್, ಬಿದಿರಿನ ಕಟ್ಟಿಗೆಗಳು ಸೇರಿದಂತೆ ಇನ್ನಿತರೆ ತ್ಯಾಜ್ಯಗಳನ್ನು ಮರುಬಳಕೆ ಮಾಡಿ ಕಸ ಸುರಿಯುವ ಜನರ ಮನಸ್ಥಿತಿಯನ್ನು ಬದಲಾವಣೆ ಮಾಡುವ ಪ್ರಯತ್ನ ಮಾಡುತ್ತಿದ್ದಾರೆ.

ಆಯಾ ವಾರ್ಡ್ ವ್ಯಾಪ್ತಿಯಲ್ಲಿ ಕಸ ಸುರಿಯುವ ಸ್ಥಳಗಳನ್ನು ಗುರ್ತಿಸಿ, ಆ ಸ್ಥಳವನ್ನು ಶುಚಿಗೊಳಿಸಿದ ನಂತರ ವೇಸ್ಟ್ ಪದಾರ್ಥಗಳಿಂದಲೇ ಆಕರ್ಷಕವಾಗಿ ಸಿಂಗರಿಸಿ, ಸ್ವಚ್ಛತಾ ಅರಿವಿನ ಸಂದೇಶವುಳ್ಳ ಫಲಕಗಳನ್ನು ಅಳವಡಿಸಲಾಗುತ್ತಿದೆ. ಪಾಲಿಕೆ ಪೌರಕಾರ್ಮಿಕರು, ಆರೋಗ್ಯ ನಿರೀಕ್ಷಕರ ಈ ಕಾರ್ಯಕ್ಕೆ ವ್ಯಾಪಕ ಮೆಚ್ಚುಗೆಯೂ ವ್ಯಕ್ತವಾಗು ತ್ತಿದ್ದು, ಶುಚಿಗೊಳಿಸಿದ ಸ್ಥಳಗಳಲ್ಲಿದ್ದ ಅನೈರ್ಮಲ್ಯ ಕಣ್ಮರೆಯಾಗುತ್ತಿದೆ.

ಮೈಸೂರಿನ ವಿಜಯನಗರ ಮೂರನೇ ಹಂತ, ಗೋಕುಲಂ, ಮಹದೇವಪುರ ಮುಖ್ಯರಸ್ತೆ, ಅರವಿಂದನಗರ ಸೇರಿದಂತೆ ಕಸ ಸುರಿಯುವ ಸುಮಾರು 15ರಿಂದ 20 ಸ್ಥಳಗಳನ್ನು ಗುರ್ತಿಸಿ, ಕಸದಿಂದ ದುರ್ವಾಸನೆ ಕಾರುತ್ತಿದ್ದ ಸ್ಥಳಗಳಲ್ಲಿ ಶುಭ್ರ ವಾತಾವರಣವನ್ನು ಸೃಷ್ಟಿಸಲಾಗಿದೆ. ಹೂ ಗಿಡಗಳನ್ನು ನೆಟ್ಟು, ಹೂವಿನ ಪಾಟ್‌ಗಳನ್ನಿಟ್ಟು ಹಾಗೂ ಕಸ ಸುರಿಯುವ ಸ್ಥಳದ ಸುತ್ತಲೂ ಹಸಿರು ಪರದೆ ಮತ್ತು ಬಿದಿರಿನ ಕಟ್ಟಿಗೆಗಳಿಂದ ತಾತ್ಕಾಲಿಕ ಬೇಲಿ ನಿರ್ಮಿಸಿ ಕಸ ಬಿಸಾಡುವುದಕ್ಕೆ ಕಡಿವಾಣ ಹಾಕಲಾಗುತ್ತಿದೆ.

> ಸಾರ್ವಜನಿಕರು ಕಸ ಬಿಸಾಡುವ ಸ್ಥಳಗಳನ್ನು ಗುರ್ತಿಸಿ, ಸ್ವಚ್ಛತೆ ಮಾಡಿ, ಹೊಸ ರೂಪಕ್ಕಿಳಿಲಾಗುತ್ತಿದೆ. ಈ ಕಾರ್ಯಕ್ಕೆ ಪಾಲಿಕೆಯಿಂದ ಯಾವುದೇ ಅನುದಾನವಿಲ್ಲ. ಕಸ ಬಿಸಾಡುವ ಮನಸ್ಥಿತಿ ದೂರಾದರೆ, ಈ ವಿನೂತನ ಕಾರ್ಯ ಹಮ್ಮಿಕೊಂಡಿರುವುದಕ್ಕೂ ಸಾರ್ಥಕತೆ ದೊರೆಯಲಿದೆ. ಇದರ ಎಲ್ಲಾ ಕ್ರೆಡಿಟ್ ಪೌರ ಕಾರ್ಮಿಕರು ಮತ್ತು ಆರೋಗ್ಯ ನಿರೀಕ್ಷಕರಿಗೆ ಸಲ್ಲಬೇಕು.
> **–ಮೃತ್ಯುಂಜಯ, ಕಾರ್ಯಪಾಲಕ ಇಂಜಿನಿಯರ್, ಪರಿಸರ ವಿಭಾಗ, ಮೈಸೂರು ನಗರಪಾಲಿಕೆ**

ಮನಸ್ಥಿತಿ ಬದಲಾವಣೆ: ಮೈಸೂರಲ್ಲಿ ಕಂಡ ಕಂಡಲ್ಲಿ ಕಸ ಸುರಿಯುವುದು ಕಡಿಮೆಯಾಗಬೇಕಾದರೆ ಮೊದಲು ಸುರಿಯುವವರ ಮನಸ್ಥಿತಿ ಬದಲಾಗಬೇಕು. ಇಲ್ಲಿ ಕಸ ಬಿಸಾಡಬಾರದು ಸ್ವಚ್ಛತೆ ಕಾಪಾಡಿಕೊಳ್ಳಬೇಕು ಎಂಬ ಸ್ವಯಂ ಜಾಗೃತಿ ಅವರಲ್ಲೇ ಮೂಡಬೇಕು. ಈ ನಿಟ್ಟಿನಲ್ಲಿ ಕಸದಿಂದ ತುಂಬಿ ತುಳುಕುತ್ತಿದ್ದ ಸ್ಥಳಗಳನ್ನು ಕಸ ಮುಕ್ತವನ್ನಾಗಿ ಮಾಡಲಾಗುತ್ತಿದೆ. ಅಲ್ಲಿನ ಅಲಂಕೃತ ಸ್ಥಳ ನೋಡಿಯೇ ಇಲ್ಲಿ ಕಸ ಬಿಸಾಡಬಾರದು, ಸ್ವಚ್ಛತೆ ಕಾಪಾಡಬೇಕು ಎಂಬ ಭಾವನೆ ಜನರ ಮನಸ್ಸಿನಲ್ಲಿ ಮೂಡಬೇಕು. ಈ ನಿಟ್ಟಿನಲ್ಲಿ ನಿರಂತರವಾಗಿ ಕಸದಿಂದ ಕೂಡಿದ್ದ ಸ್ಥಳಗಳಿಗೆ ಸ್ವಚ್ಛತಾ ರೂಪ ನೀಡಲಾಗುತ್ತಿದೆ ಎಂದು ಮೈಸೂರು ನಗರಪಾಲಿಕೆ ಪರಿಸರ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಮೃತ್ಯುಂಜಯ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

550 ಟನ್ ಕಸ ಸಂಗ್ರಹ: ಸಾಂಸ್ಕೃತಿಕ ನಗರಿಯಲ್ಲಿ ಪ್ರತಿನಿತ್ಯ 15 ರಿಂದ 20 ಟನ್ ಕಸ ಸಂಗ್ರಹವಾಗುತ್ತಿದ್ದು, ಅದರಲ್ಲಿ ಹಸಿ ಕಸವೇ 300 ಟನ್ ಆಗಿದೆ. ಹಾಗೆಯೇ 245 ರಿಂದ 250 ಟನ್ ಒಣ ತ್ಯಾಜ್ಯ ಸಂಗ್ರಹವಾಗುತ್ತಿದೆ. ಹಾಗೆಯೇ ಎಲ್ಲೆಂದರಲ್ಲಿ ಕಸ ಸುರಿಯುವವರಿಗೆ ದಂಡ ವಿಧಿಸಿ, ಜನವರಿ ತಿಂಗಳಿಂದ ಇಲ್ಲಿಯವರೆಗೆ ಸುಮಾರು 7.50 ಲಕ್ಷ ರೂ.ವಸೂಲಿ ಮಾಡಲಾಗಿದೆ ಎಂದರು.

52 ಸ್ಥಳಗಳಲ್ಲಿ ಸಿಸಿ ಕ್ಯಾಮರಾ: ಕಸ ಸುರಿಯುವ ಸ್ಥಳಗಳನ್ನು ಸ್ವಚ್ಛಗೊಳಿಸುವ ಜೊತೆಗೆ ಸಿಸಿ ಕ್ಯಾಮೆರಾ ಅಳವಡಿಸಿ ಕಸವನ್ನು ತೂರಿ ಬಿಸಾಡುವವರ ಮೇಲೆ ಕಣ್ಣಿಡಲಾಗಿದೆ. ಆಗಾಗಿ ಮೈಸೂರಿನ ಸುಮಾರು 52 ಸ್ಥಳಗಳಲ್ಲಿ ಸಿಸಿಕ್ಯಾಮರಾ ಅಳವಡಿಸಲಾಗಿದೆ. ವಾಣಿವಿಲಾಸ ವಾಟರ್ ವರ್ಕ್ಸ್‌ನಲ್ಲಿ ತೆರೆದಿರುವ ಕಣ್ಗಾವಲು ಘಟಕದಿಂದ ದಿನದ 24 ಗಂಟೆಯೂ ಕಂಡ ಕಂಡಲ್ಲಿ ಕಸ ಬಿಸಾಡುದನ್ನು ಗಮನಿಸುತ್ತಿದ್ದು, ಈ ಕೇಂದ್ರ ಶೇ.100ರಷ್ಟು ಕಾರ್ಯ ನಿರ್ವಹಿಸಲು ಮುಂದಾದರೆ ಅನುಕೂಲವಾಗಲಿದೆ ಎಂದು ತಿಳಿಸಿದರು.

ಪ್ರತಿಯೊಬ್ಬರು ಗಿಡ ನೆಟ್ಟು ಪರಿಸರ ಸಂರಕ್ಷಿಸಬೇಕು

ಮಾಜಿ ಸಚಿವ ಎಸ್.ಎ.ರಾಮದಾಸ್ ಕಿವಿಮಾತು



ಮೈಸೂರಿನ ಮಾನಂದವಾಡಿ ರಸ್ತೆಯಲ್ಲಿರುವ ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯಲ್ಲಿ ವಿಶ್ವ ಪರಿಸರ ದಿನ ಆಚರಿಸಲಾಯಿತು.

ಮೈಸೂರು,ಜೂ.9(ಎಂಕೆ)– ಪ್ರತಿಯೊಬ್ಬರು ಒಂದೊಂದು ಗಿಡ ನೆಟ್ಟು, ಅದನ್ನು ದತ್ತು ಪಡೆದು ಬೆಳೆಸುವ ಮೂಲಕ ಪರಿಸರ ದಿನವನ್ನು ಅರ್ಥಪೂರ್ಣವಾಗಿ ಆಚರಿಸಬೇಕಿದೆ ಎಂದು ಮಾಜಿ ಸಚಿವ ಎಸ್.ಎ.ರಾಮದಾಸ್ ಹೇಳಿದರು.

ಮೈಸೂರಿನ ಮಾನಂದವಾಡಿ ಮುಖ್ಯ ರಸ್ತೆಯಲ್ಲಿರುವ ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯಲ್ಲಿ ಆಯೋಜಿಸಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಗಿಡ ನೆಡುವುದು ಪರಿಸರ ದಿನಕ್ಕೆ ಮಾತ್ರ ಸಿಮೀತವಾಗಬಾರದು. ದಿನಕ್ಕೊಂದು ಗಿಡ ನೆಟ್ಟು ಬೆಳೆಸಿದರೆ ಅದುವೇ ಪ್ರಕೃತಿಗೆ ನಾವು ನೀಡುವ ಉಡುಗೊರೆಯಾಗಿದೆ ಎಂದರು.

ಜಗದೀಶ್ ಚಂದ್ರ ಬೋಸ್ ಎಂಬ ವಿಜ್ಞಾನಿಗಳು, ಗಿಡಗಳಿಗೆ ಜೀವ ಇದೆ, ಅವು ಉಸಿರಾಡುತ್ತವೆ. ಅವುಗಳಿಗೆ ಭಾಷೆ ಇದೆ. ಅವುಗಳು ಕೂಡ ಮಾತನಾಡುತ್ತವೆ. ಸ್ನೇಹ ಮಾಡುತ್ತವೆ ಎಂದು ಹೇಳಿದಾಗ ಪ್ರಾರಂಭದಲ್ಲಿ ಎಲ್ಲರು ನಂಬಲಿಲ್ಲ ಆದರೆ, ಇಂದು ಎಲ್ಲರೂ ಗಿಡಗಳ ಬಗ್ಗೆ ಅಧ್ಯಯನ ಮಾಡುತ್ತಿದ್ದಾರೆ. ನಾವು ಭೂಮಿಯಲ್ಲಿನ ಗಾಳಿ ಮತ್ತು ನೀರನ್ನು ಶುದ್ಧವಾಗಿ ಇಟ್ಟುಕೊಂಡರೆ ಉತ್ತಮವಾದ ಆರೋಗ್ಯ ಕಾಪಾಡಿಕೊಳ್ಳಬಹುದು ಎಂದರು.

ಸಿಎಸ್‌ಆರ್‌ಟಿಐ ನಿರ್ದೇಶಕಿ ಡಾ.ಪಿ.ದೀಪಾ ಮಾತನಾಡಿ, ಪ್ರಸ್ತುತ ದಿನಗಳಲ್ಲಿ ಪರಿಸರ ಸಂರಕ್ಷಣೆ ಅನಿವಾರ್ಯ ವಾಗಿದ್ದು, ಪರಿಸರ ಸ್ನೇಹಿ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕು. ಪರಿಸರ ಸ್ನೇಹಿ ಕೃಷಿ ಪದ್ಧತಿಯಿಂದ ಮಣ್ಣಿನ ಮಾಲಿನ್ಯವನ್ನು ತಡೆಯಬಹುದು. ಅಲ್ಲದೆ ಪರಿಸರ ಮಾಲಿನ್ಯ ತಡೆಗಟ್ಟುವ ನಿಟ್ಟಿನಲ್ಲಿ ಪ್ರತಿಯೊಬ್ಬರು ಜಾಗೃತರಾಗಬೇಕು ಎಂದು ಕರೆ ನೀಡಿದರು.

ಇದಕ್ಕೂ ಮುನ್ನ ಸಂಸ್ಥೆಯ ಆವರಣದಲ್ಲಿ ಮಹಾಗನಿ, ಅರಳಿ, ನೇರಳೆ, ಕಹಿಬೇವು, ಅತ್ತಿ, ಹೊನ್ನೆ, ಬೀಟೆ, ಮಾವು, ಹೊಂಗೆ, ಶಿವಾನೆ, ತಪಸಿ, ಹೊಳೆ ಮತ್ತಿ, ಕಾಡು ಬಾದಾಮಿ, ಆಲ, ದಾಸವಾಳ ಮತ್ತಿತರ ಗಿಡಗಳನ್ನು ನೆಡಲಾಯಿತು. ಮೈಸೂರು ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಕೆ.ಪರಮೇಶ, ಹಿರಿಯ ವಿಜ್ಞಾನಿ ಡಾ.ಎಸ್.ಮಹಿಬಾ ಹೆಲೇನ್, ಡಾ.ಮಧುಸೂಧನ್, ಡಾ.ಸುರೇಶ್, ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ ಮೈಸೂರಿನ ಡಾ.ಕೆ.ಕುಸುಮ, ಡಾ.ಮಂಜಪ್ಪ ಮತ್ತಿತರರಿದ್ದರು.

ಮೈಸೂರಿನ ಸಿಎಫ್‌ಟಿಆರ್‌ಐನಿಂದ ಬೆಂಗಳೂರಲ್ಲಿ ಜೂ.13ರಂದು 'ರೈಸ್' ಸಮಾವೇಶ

ಸಿಎಫ್‌ಟಿಆರ್‌ಐ ನಿರ್ದೇಶಕ ಡಾ.ಗಿರಿಧರ್ ಪರ್ವತಂ ಮಾಹಿತಿ



ಮೈಸೂರಿನ ಸಿಎಫ್‌ಟಿಆರ್‌ಐನ ಚೆಲುವಾಂಬ ಸಭಾಂಗಣದಲ್ಲಿ ಸಿಎಫ್‌ಟಿಆರ್‌ಐ ನಿರ್ದೇಶಕ ಡಾ.ಗಿರಿಧರ್ ಪರ್ವತಂ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಜೂ.9(ಬಿಎಲ್ ಯು)– ಮೈಸೂರಿನ ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾ ಸಂಸ್ಥೆ (ಸಿಎಫ್‌ಟಿಆರ್ ಐ), ರಾಷ್ಟ್ರೀಯ ಏರೋಸ್ಪೇಸ್ ಪ್ರಯೋಗಾಲಯ ಹಾಗೂ ಪೋರ್ಥ್ ಪ್ಯಾರಡೈಮ್ ಇನ್ಸಿಟ್ಯೂಟ್ ಸಂಯುಕ್ತವಾಗಿ ಬೆಂಗಳೂರಿನಲ್ಲಿ ಜೂನ್ 13ರಂದು ಸಂಶೋಧನೆ, ಕೈಗಾರಿಕೆ, ಸ್ಟಾರ್ಟ್ ಅಪ್ ಮತ್ತು ಉದ್ಯಮಶೀಲತೆ (ರೈಸ್) ಸಮಾವೇಶ ಆಯೋಜಿಸಿದೆ ಎಂದು ಸಿಎಫ್‌ಟಿಆರ್‌ಐ ನಿರ್ದೇಶಕ ಡಾ.ಗಿರಿಧರ್ ಪರ್ವತಂ ತಿಳಿಸಿದ್ದಾರೆ.

ಮೈಸೂರಿನ ಸಿಎಫ್‌ಟಿಆರ್‌ಐನ ಚೆಲುವಾಂಬ ಸಭಾಂಗಣದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ರಾಜ್ಯ ಸಚಿವ ಡಾ.ಜಿತೇಂದ್ರ ಸಿಂಗ್ ಅವರು ಸಮಾವೇಶ ಉದ್ಘಾಟಿಸಲಿದ್ದು, ಕೈಗಾರಿಕಾ ವಲಯದ ನಾಯಕರು, ಸ್ಟಾರ್ಟ್ ಅಪ್ ಸಂಸ್ಥಾಪಕರು ಹಾಗೂ ನವೋದ್ಯಮಿಗಳೊಂದಿಗೆ ಸಂವಾದ ನಡೆಸಲಿದ್ದಾರೆ ಎಂದರು.


ಆಹಾರ ಉತ್ಪಾದನಾ ಹಾಗೂ ಏರೋಸ್ಪೇಸ್ ಕ್ಷೇತ್ರದಲ್ಲಿ ಎಐ (ಕೃತಕ ಬುದ್ಧಿಮತ್ತೆ) ಯನ್ನು ಗುಣಮಟ್ಟದಲ್ಲಿ ಬಳಕೆ ಮಾಡುವ ಬಗ್ಗೆ ಅಂದಿನ ಸಮಾವೇಶದಲ್ಲಿ ಅರ್ಥಪೂರ್ಣ ಚರ್ಚೆಗಳು ನಡೆಯಲಿದೆ ಎಂದು ಡಾ.ಗಿರಿಧರ್ ಪರ್ವತಂ ಹೇಳಿದರು.

ವಿಕಸಿತ ಭಾರತಕ್ಕಾಗಿ ನವೋದ್ಯಮ ಮತ್ತು ಉದ್ಯಮಶೀಲತೆಯಿಂದ ಚಾಲಿತ ಬೆಳವಣಿಗೆ, ಸಂಪೂರ್ಣ ಸರ್ಕಾರ, ಸಂಪೂರ್ಣ ಸಮಾಜ, ಸಂಪೂರ್ಣ ವಿಜ್ಞಾನ ನವೋದ್ಯಮ ಬಗ್ಗೆ ಸಮಾಲೋಚನೆ ನಡೆಯಲಿದೆ ಎಂದರು.

ಅಲ್ಲದೆ ರಾಷ್ಟ್ರೀಯ ಬೆಳವಣಿಗೆಗಾಗಿ ಏರೋಸ್ಪೇಸ್ ತಂತ್ರಜ್ಞಾನಗಳು, ವಿಜ್ಞಾನ ಸಂವಹನ, ಸಮಾಜ ಮತ್ತು ನೈತಿಕತೆಯ ದೃಷ್ಟಿಯಿಂದ ಎಐ, ಸ್ಟಾರ್ಟ್ ಅಪ್ ಅಭಿವೃದ್ಧಿ ಮತ್ತು ಉದ್ಯಮ ಶೀಲತೆ, ಶೈಕ್ಷಣಿಕ ಸಂಶೋಧನೆಯನ್ನು ಕೈಗಾರಿಕಾ ಅಗತ್ಯಗಳಿಗೆ ಹೊಂದಾಣಿಕೆ ಮಾಡು ವುದು ಸೇರಿದಂತೆ ಹಲವು ವಿಚಾರಗಳ ಬಗ್ಗೆ ಚರ್ಚೆ ನಡೆಯಲಿದೆ ಎಂದು ತಿಳಿಸಿದರು.

ಈ ಸಮಾವೇಶದಿಂದ ಭಾರತವನ್ನು ಜಾಗತಿಕ ನವೋದ್ಯಮ ಶಕ್ತಿ ಕೇಂದ್ರವನ್ನಾಗಿ ರೂಪಿಸುವ ಪ್ರಯಾಣಕ್ಕೆ ಮತ್ತಷ್ಟು ಬಲ ನೀಡುವ ನಿರೀಕ್ಷೆ ಇದೆ ಎಂದು ಡಾ.ಗಿರಿಧರ್ ಪರ್ವತಂ ವಿಶ್ವಾಸ ವ್ಯಕ್ತಪಡಿಸಿದರು. ಸಿಎಫ್‌ಟಿಆರ್ ಐ ವಿಜ್ಞಾನಿಗಳಾದ ಪ್ರೊ.ಆರ್.ಎಸ್.ವಾಚೆ, ಡಾ.ಎ.ಎ.ಇನಾಮ್ದಾರ್, ಡಾ.ಸುಹಾಸ್ ಆರ್ ಹಾಗೂ ಡಾ.ವಿಕಾಸ್ ಚೌಹಾಣ್ ಅವರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಅಭಿನಂದನೆ...



ನೂತನ ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಅವರನ್ನು ಸಿದ್ದರಾಮಯ್ಯ ಅಭಿಮಾನಿಗಳ ಬ್ರಿಗೇಡ್ ವತಿಯಿಂದ ಸನ್ಮಾನಿಸಲಾಯಿತು. ಈ ವೇಳೆ ಬ್ರಿಗೇಡ್‌ನ ರಾಜ್ಯಾಧ್ಯಕ್ಷ ಹಿನಕಲ್ ಉದಯ್, ನಗರಾಧ್ಯಕ್ಷ ಮೋಹನ್ ವಿಶ್ವ ಹಾಜರಿದ್ದರು.

ಕಲಾತಂಡಗಳಿಂದ ಅರ್ಜಿ ಆಹ್ವಾನ

ಮೈಸೂರು, ಜೂ.9– ಭಾರತೀಯ ಸಾಂಸ್ಕೃತಿಕ ಸಂಬಂಧಗಳ ಪರಿಷತ್ ಹಾಗೂ ಕರ್ನಾಟಕ ಸರ್ಕಾರದ ನಡುವೆ ಸಂಸ್ಕೃತಿ, ಕಲೆ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದಂತೆ ಮಹತ್ವದ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ, ಮೈಸೂರು ಜಿಲ್ಲೆಯ ಅರ್ಹ ಕಲಾವಿದರು ಮತ್ತು ಕಲಾತಂಡಗಳಿಂದ ನೋಂದಣಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಸಂಸ್ಥೆಯ ವತಿಯಿಂದ ಸರ್ಕಾರದ ಸಾಂಸ್ಕೃತಿಕ ಕಲಾತಂಡಗಳು, ಅಂತರರಾಷ್ಟ್ರೀಯ ಮಟ್ಟದಲ್ಲಿ ನಡೆಯುವ ವಿವಿಧ ಸಾಂಸ್ಕೃತಿಕ ಉತ್ಸವ ಹಾಗೂ ಕಾರ್ಯಕ್ರಮಗಳಿಗೆ ಕಳುಹಿಸಿಕೊಡುವ ಮೂಲಕ ಕಲಾತಂಡಗಳು ಹಾಗೂ ಕಲಾವಿದರನ್ನು ಮಾಡುವುದರೊಂದಿಗೆ ಅವರ ಪ್ರತಿಭೆಯನ್ನು ಹೆಚ್ಚು ಪ್ರಚುರಪಡಿಸಲು ಅವಕಾಶವಾಗುತ್ತದೆ. ಆಸಕ್ತರು ಹಾಗೂ ಕಲಾತಂಡಗಳು www.kannada siri. karnataka.gov.inನಲ್ಲಿ ಅಳವಡಿಸಿರುವ ನಮೂನೆಯನ್ನು ಭರ್ತಿ ಮಾಡಿ ಅಗತ್ಯ ದಾಖಲೆಗಳೊಂದಿಗೆ ಜೂ.12 ರೊಳಗೆ ಸಹಾಯಕ ನಿರ್ದೇಶಕರ ಕಚೇರಿ, ಕನ್ನಡ–ಸಂಸ್ಕೃತಿ ಇಲಾಖೆ, ಕಲಾ ಮಂದಿರ, ಮೈಸೂರು ಇಲ್ಲಿಗೆ ಸಲ್ಲಿಸಿ ನೋಂದಣಿಯಾಗಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂಖ್ಯೆ: 0821–2513225 ಅನ್ನು ಸಂಪರ್ಕಿಸಬಹುದೆಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ಮಾಜಿ ಸಿಎಂ ಡಿ.ದೇವರಾಜ ಅರಸು ಮೊಮ್ಮಗನಾದರೂ ಸೂರಜ್ ಹೆಗಡೆಯವರಿಗೆ ಸೂಕ್ತ ಅವಕಾಶ ಸಿಗಲಿಲ್ಲ

● ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್ ವಿಷಾದ ● ಸೂರಜ್ ಹೆಗಡೆಯವರಿಗೆ ಮೈಸೂರು ಕಾಂಗ್ರೆಸ್ ಭಾವಪೂರ್ಣ ಶ್ರದ್ಧಾಂಜಲಿ ● ಪಕ್ಷಕ್ಕಾಗಿ ದುಡಿದವರಿಗೆ ಸೂಕ್ತ ಸ್ಥಾನ ಸಿಗುತ್ತಿಲ್ಲ; ಅಂತಹವರು ವಯೋಸಹಜ ಕಾಯಿಲೆಯ ಚಿಕಿತ್ಸೆಗೂ ಹಣವಿಲ್ಲದೆ ಮರೆಯಾಗುತ್ತಿದ್ದಾರೆ: ಬಿಜೆವಿ ಬೇಸರ



ಮೈಸೂರು ನಗರ ಮತ್ತು ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಇತ್ತೀಚೆಗೆ ನಿಧನರಾದ ಎಐಸಿಸಿ ಕಾರ್ಯದರ್ಶಿ ಹಾಗೂ ಕರ್ನಾಟಕ ಸರ್ಕಾರ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ರಾಜ್ಯ ಉಪಾಧ್ಯಕ್ಷ ಸೂರಜ್ ಹೆಗಡೆ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮೈಸೂರು, ಜೂ.9(ಎಂಕೆ)– ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಕಾಂಗ್ರೆಸ್ ಕಚೇರಿಯಲ್ಲಿ ಮೈಸೂರು ನಗರ ಮತ್ತು ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಇತ್ತೀಚೆಗೆ ನಿಧನರಾದ ಎಐಸಿಸಿ ಕಾರ್ಯದರ್ಶಿ ಹಾಗೂ ಕರ್ನಾಟಕ ಸರ್ಕಾರ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ರಾಜ್ಯ ಉಪಾಧ್ಯಕ್ಷ ಸೂರಜ್ ಹೆಗಡೆ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಹಾಗೂ ನುಡಿನಮನ ಸಲ್ಲಿಸಲಾಯಿತು.

ಸೂರಜ್ ಹೆಗಡೆ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಮೌನಾಚರಣೆ ಮೂಲಕ ಸಂತಾಪ ಸೂಚಿಸಲಾಯಿತು. ಬಳಿಕ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ. ವಿಜಯ್‌ಕುಮಾರ್ ಮಾತನಾಡಿ, ಕಾಂಗ್ರೆಸ್ ಪಕ್ಷದ ನಿಷ್ಠಾವಂತ ನಾಯಕರಾಗಿದ್ದ ಸೂರಜ್ ಹೆಗಡೆ ಅವರು, ಪಕ್ಷ ನೀಡಿದ ಎಲ್ಲಾ ಜವಾಬ್ದಾರಿಗಳನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರ ಮೊಮ್ಮಗನಾಗಿದ್ದರೂ ಸೂಕ್ತ ಅವಕಾಶಗಳು ಅವರಿಗೆ ದೊರೆಯಲಿಲ್ಲ ಎಂದು ವಿಷಾದಿಸಿದರು.

ಪಕ್ಷಕ್ಕಾಗಿ ದುಡಿದ ಬಹಳಷ್ಟು ಮಂದಿ ಪದಾಧಿಕಾರಿಗಳಿಗೆ ಸೂಕ್ತ ಸ್ಥಾನಮಾನ ದೊರೆಯದೆ ಕೊನೆಗೆ ವಯೋ ಸಹಜ ಕಾಯಿಲೆಗಳಿಗೆ ತುತ್ತಾಗಿ ಪಕ್ಷ ಸಂಘಟನೆಯಿಂದ ದೂರ ಉಳಿಯಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಕೊನೆಗೆ ಚಿಕಿತ್ಸೆಗೂ ಹಣವಿಲ್ಲದೆ ಸಾವನ್ನಪ್ಪಿರುವ ಅನೇಕ ಘಟನೆಗಳನ್ನು ನೋಡಿದ್ದೇವೆ. ಆದ್ದರಿಂದ ಪಕ್ಷಕ್ಕಾಗಿ ದುಡಿದವರಿಗೆ ಸಂಕಷ್ಟದ ಕಾಲದಲ್ಲಿ ನೆರವಾಗಲು ತುರ್ತು ನಿಧಿ ಸ್ಥಾಪಿಸಲು ಎಲ್ಲರೂ ಸಹಕಾರ ನೀಡಬೇಕು ಎಂದು ಕೋರಿದರು. ಅಲ್ಲದೆ ಕೆಪಿಸಿಸಿ ಟ್ರೈನಿಂಗ್ ಸೆಂಟರ್‌ಗೆ ಸುಮಾರು 30 ವರ್ಷಗಳ ಕಾಲ ಯೂತ್ ಕಾಂಗ್ರೆಸ್ ಸೇರಿದಂತೆ ನಾನಾ ಜವಾಬ್ದಾರಿಗಳನ್ನು ನಿರ್ವಹಿಸಿ ಸೂರಜ್ ಹೆಗಡೆ ಅವರ ಹೆಸರನ್ನಿಡಬೇಕು ಎಂದು ಆಗ್ರಹಿಸಿದರು.

ನಗರಾಧ್ಯಕ್ಷ ಆರ್.ಮೂರ್ತಿ ಮಾತನಾಡಿ, ಅಖಿಲ ಭಾರತ ಕಾಂಗ್ರೆಸ್ ಸಮಿತಿಯಲ್ಲಿ ಕೆಲಸ ಮಾಡಿರುವ ಸೂರಜ್ ಹೆಗಡೆ ಅವರಿಗೆ ಕಳೆದ ಎರಡು ವರ್ಷಗಳಿಂದ ಹೃದಯ ಸಮಸ್ಯೆ ಇತ್ತು. ಕಳೆದ ಮೂರು ತಿಂಗಳಿಂದ ಅವರ ಆರೋಗ್ಯ ಕ್ಷೀಣಿಸಿತ್ತು. ಆದರೂ ಎಡಬಿಡದೆ ಕೆಲಸ ಮಾಡುತ್ತಿದ್ದರು. ಮೈಸೂರಿನಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಕಾಂಗ್ರೆಸ್ ಭವನಕ್ಕೆ ಗೌಪ್ಯವಾಗಿ 1 ಲಕ್ಷದ 80 ಸಾವಿರ ನೀಡಿ ನಮ್ಮ ತಾತ ದೇವರಾಜ ಅರಸು ಅವರು ಕಂಡ ಕನಸು ನನಸಾಗಬೇಕು ಎಂದು ಹೇಳಿಕೊಂಡಿದ್ದರೆಂದು ಸ್ಮರಿಸಿದರು. ಕಾಂಗ್ರೆಸ್ ಮುಖಂಡರಾದ ಎಂ.ಶಿವಣ್ಣ, ಎಡತಲೆ ಮಂಜುನಾಥ್, ಪುಷ್ಪಲತಾ ಚಿಕ್ಕಣ್ಣ, ಪ್ರೇಮ ಶಂಕರ್, ಮೋದಾಮಣಿ, ಎಂ.ಕೆ.ಅಶೋಕ್, ಈಶ್ವರ್ ಚಕ್ಕಡಿ, ಎನ್.ಆರ್.ನಾಗೇಶ್, ಶಿವಪ್ರಸಾದ್, ಗಿರೀಶ್, ಡೈರಿ ವೆಂಕಟೇಶ್, ಚಂದನ್ ಕುಮಾರ್, ನಾಗೇಶ್, ಸಿದ್ದಯ್ಯ, ಡಾ.ನಾಗರಾಜ್, ಮೋಹನ್, ರಾಹುಲ್ ಕುಂಬರಹಳ್ಳಿ, ಸಂತೋಷ್ ಮಳಿಯೂರ್, ಚಿಕ್ಕಣ್ಣ, ಸುನಂದ್‌ಕುಮಾರ್ ಮತ್ತಿತರರಿದ್ದರು.

ಹೆಚ್ಚಿನ ಮಕ್ಕಳಿರುವ ಶಾಲೆಗಳಿಗೆ ಬಸ್ ವ್ಯವಸ್ಥೆ

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ



ಕಾರ್ಯಕ್ರಮವನ್ನು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಉದ್ಘಾಟಿಸಿದರು.

ಮಂಡ್ಯ, ಜೂ.9– ಹೆಚ್ಚಿನ ಮಕ್ಕಳು ವಿದ್ಯಾಭ್ಯಾಸಕ್ಕೆ ಬರುವ ಶಾಲೆಗಳಿಗೆ ಬಸ್ ವ್ಯವಸ್ಥೆ ಮಾಡುತ್ತೇನೆ ಎಂದು ಕೇಂದ್ರದ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ತಿಳಿಸಿದರು.

ತಾಲೂಕಿನ ಕೀಲಾರ ಗ್ರಾಮದ ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಪಾಠಶಾಲೆಗೆ ಮೇಘಾ ಟ್ರಾವೆಲ್ಸ್‌ನ ತಿಮ್ಮೇಗೌಡರು ಕೊಡುಗೆ ನೀಡಿರುವ ಬಸ್‌ಗೆ ಚಾಲನೆ ನೀಡಿ ಮಾತನಾಡಿದ ಅವರು, ದಿವಂಗತ ಕೆ.ವಿ.ಶಂಕರಗೌಡರು ಶಿಕ್ಷಣ ಕ್ಷೇತ್ರಕ್ಕೆ ದೊಡ್ಡ ಕೊಡುಗೆ ನೀಡಿದ್ದಾರೆ. ಅದರಲ್ಲೂ ಮಂಡ್ಯ ಜಿಲ್ಲೆಗೆ ಅವರ ಕೊಡುಗೆ ಅಪಾರವಾಗಿದ್ದು, ಜೊತೆಗೆ ಈ ದೇಶದ ಬೆನ್ನೆಲುಬು ರೈತನ ಬದುಕಿನ ಬಗ್ಗೆ ಚಿಂತಿಸಿದ್ದರು ಎಂದು ಹೇಳಿದರು.

ಕೆ.ವಿ.ಶಂಕರಗೌಡರು ಬುನಾದಿ ಹಾಕಿರುವ ಕೀಲಾರ ಸರ್ಕಾರಿ ಶಾಲೆಯನ್ನು ಹಲವು ದಾನಿಗಳ ಸಹಕಾರದಿಂದ ಮುಂದುವರಿಸಿಕೊಂಡು ಹೋಗಬೇಕು ಎಂದ ಅವರು, ಜನ್ಮ ಕೊಟ್ಟ ತಂದೆ ತಾಯಿ, ಕುಟುಂಬದಲ್ಲಿರುವ ಅಕ್ಕ ತಂಗಿಯರು, ಅಣ್ಣ–ತಮ್ಮಂದಿರಲ್ಲಿ ಸಹೋದರ, ಸಹೋದರಿ ಮನೋಭಾವ ಕ್ಷುಲ್ಲಕ ಕಾರಣಕ್ಕೆ ನಶಿಸಿ ಹೋಗುತ್ತಿವೆ. ಈ ಹಿಂದೆ ಕುಟುಂಬದಲ್ಲಿ 20 ಜನ ಒಟ್ಟೊಟ್ಟಿಗೆ ಕುಳಿತು ಊಟ ಮಾಡುತ್ತಿದ್ದ ದಿನಗಳು ಇಂದು ಇಲ್ಲ. ಹಳ್ಳಿಗಳಲ್ಲಿ ವಿದ್ಯುತ್ ಸೌಲಭ್ಯ ರಸ್ತೆ ಇರಲಿಲ್ಲ. ಆದರೂ ಕುಟುಂಬದಲ್ಲಿ ಅನ್ಯೋನ್ಯತೆ, ನೆಮ್ಮದಿ ಇತ್ತು ಎಂದರು.

ವಿದ್ಯಾರ್ಥಿಗಳು ಕಡಿಮೆ ಅಂಕ ಬಂದರೆ ಬೇರೆ ಪ್ರಭಾವಕ್ಕೆ ಒಳಗಾಗದಿರಿ. ನಿಮ್ಮಲ್ಲಿ ಪ್ರತಿಭೆ ಇದೆ. ಅವುಗಳನ್ನು ಸರಿಯಾಗಿ ಉಪಯೋಗಿಸಿಕೊಳ್ಳಬೇಕು. ಕಡಿಮೆ ಅಂಕ ಪಡೆದಿರುವವರೇ ದೇಶಕ್ಕೆ ದೊಡ್ಡ ಕೊಡುಗೆ ನೀಡಿದ್ದಾರೆ. ತಂದೆ ತಾಯಿಗಳಿಗೆ ಶಿಸ್ತು ಬದ್ಧವಾಗಿದ್ದು ಗೌರವ ಬರುವ ರೀತಿ ನಡೆದುಕೊಳ್ಳಿ ಎಂದರು.

ಜನರ ಮೇಲೆ ನನಗೆ ನಂಬಿಕೆ ಇದೆ. ರಾಜ್ಯದಲ್ಲಿ ಆರೋಗ್ಯ, ಶಿಕ್ಷಣ, ರೈತರ ಬದುಕು ಎಷ್ಟು ಕಷ್ಟದಲ್ಲಿದೆ ಎನ್ನುವುದು ನನಗೆ ಗೊತ್ತು. ನಾನು ಬದುಕಿರುವವರೆಗೂ ನಿಮ್ಮ ಕಷ್ಟ ಸುಖದಲ್ಲಿ ಭಾಗಿಯಾಗುತ್ತೇನೆ. ನೀವುಗಳು ರಾಜಕಾರಣವನ್ನು ಚುನಾವಣೆ ಸಮಯದಲ್ಲಿ ಮಾಡಿ ಬೇರೆ ಸಮಯದಲ್ಲಿ ಅಣ್ಣ ತಮ್ಮಂದಿರ ಹಾಗೇ ಒಟ್ಟಾಗಿರಿ ಎಂದರು.

ಈ ವೇಳೆ ಶಾಸಕ ಹೆಚ್.ಟಿ.ಮಂಜು, ಜೆಡಿಎಸ್ ಮುಖಂಡರಾದ ಕೆ.ಎಸ್.ವಿಜಯಾನಂದ, ಬಿ.ಆರ್.ರಾಮಚಂದ್ರ, ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ಮೇಘಾ ಟ್ರಾವೆಲ್ಸ್ ತಿಮ್ಮೇಗೌಡ, ತಾಪಂ ಮಾಜಿ ಸದಸ್ಯ ತಿಮ್ಮೇಗೌಡ, ಅಮರಾವತಿ ಚಂದ್ರಶೇಖರ್, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ನೆಲ್ಲಿಗೆರೆ ಬಾಲು, ಕೀಲಾರ ಗ್ರಾಮದ ಕೆ.ಆರ್.ರಮೇಶ್ ಸೇರಿದಂತೆ ಇತರರಿದ್ದರು.

ಹೈನುಗಾರಿಕೆ ಕುರಿತು ಅಧ್ಯಯನ ಪ್ರವಾಸಕ್ಕೆ ಚಾಲನೆ



ಅಧ್ಯಯನ ಪ್ರವಾಸಕ್ಕೆ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಚಾಲನೆ ನೀಡಿದರು.

ಪಾಂಡವಪುರ, ಜೂ.9– ಹೈನುಗಾರಿಕೆ ಕುರಿತು ಅಧ್ಯಯನಕ್ಕೆ ಗುಜರಾತ್‌ಗೆ ಹೊರಟ ತಾಲೂಕಿನ ಡೇರಿ ಸದಸ್ಯರು ಹಾಗೂ ಕಾರ್ಯದರ್ಶಿಗಳ ಪ್ರವಾಸಕ್ಕೆ ಮನ್‌ಮುಲ್ ಮುಖ್ಯ ವ್ಯವಸ್ಥಾಪಕ ನಿರ್ದೇಶಕ ಹೆಚ್.ಆರ್.ರಘು ಹಾಗೂ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಚಾಲನೆ ನೀಡಿದರು.

ಮನ್‌ಮುಲ್ ಮುಖ್ಯ ವ್ಯವಸ್ಥಾಪಕ ಹೆಚ್.ಆರ್.ರಘು ಮಾತನಾಡಿ, ಹೈನುಗಾರಿಕೆ ಕುರಿತು ವೈಜ್ಞಾನಿಕವಾಗಿ ಅನುಭವ ಪಡೆದು ತಮ್ಮ ರಾಜ್ಯದ ಹೈನುಗಾರಿಕೆಯಲ್ಲಿ ರೈತರು ಅಳವಡಿಸಿಕೊಳ್ಳಲು ಅನುಕೂಲವಾಗುವ ಉದ್ದೇಶದಿಂದ ಗುಜರಾತ್ ರಾಜ್ಯದ ಆನಂದ್ ಎನ್‌ಡಿಡಿಬಿ ಪ್ರವಾಸಕ್ಕೆ ಇಲ್ಲಿನ ರೈತರು ಹಾಗೂ ಡೇರಿ ಕಾರ್ಯದರ್ಶಿಗಳನ್ನು ಕಳುಹಿಸಲಾಗಿದೆ. ರೈತರು ಅಲ್ಲಿನ ತಂತ್ರಜ್ಞಾನ, ವೈಜ್ಞಾನಿಕವಾಗಿ ಹಸು ಸಾಕಾಣೆ, ಗುಣಮಟ್ಟದ ಹಾಲು ಉತ್ಪಾದನೆ ಮಾಡುವುದನ್ನು ತಿಳಿದುಕೊಳ್ಳಬೇಕು. ಪ್ರವಾಸದ ವೇಳೆ ಅಧ್ಯಯನಕ್ಕೆ ಆದ್ಯತೆ ನೀಡಬೇಕು ಎಂದರು.

ಹೈನುಗಾರಿಕೆಯಲ್ಲಿ ಪಾಂಡವಪುರ ತಾಲೂಕು ಮಾದರಿಯಾಗಿದೆ. ಕಾಮನ್ ಸಾಫ್ಟ್‌ವೇರ್ ಅಳವಡಿಸಿಕೊಂಡು ರೈತರಿಗೆ ಹಾಲಿನ ಗುಣಮಟ್ಟದ ಮೇಲೆ ದರ ನೀಡುತ್ತಿದ್ದಾರೆ. ರೈತರು ಸಹ ಗುಣಮಟ್ಟದ ಹಾಲು ಪೂರೈಕೆ ಮಾಡಬೇಕು ಎಂದರು.

ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಮಾತನಾಡಿ, ಹಾಲು ಉತ್ಪಾದನೆಯಲ್ಲಿ ಗುಜರಾತ್ ದೇಶದಲ್ಲೇ ಮೊದಲ ಸ್ಥಾನದಲ್ಲಿದೆ. ಹೀಗಾಗಿ ನಮ್ಮ ರೈತರು ಅಲ್ಲಿನ ತಂತ್ರಜ್ಞಾನವನ್ನು ಹೈನುಗಾರಿಕೆಯಲ್ಲಿ ಅಳವಡಿಸಿಕೊಳ್ಳಲಿ ಎಂಬ ಉದ್ದೇಶದಿಂದ ರೈತರು ಮತ್ತು ಡೇರಿ ಕಾರ್ಯದರ್ಶಿಗಳನ್ನು ಅಧ್ಯಯನ ಪ್ರವಾಸಕ್ಕೆ ಕಳುಹಿಸಲಾಗುತ್ತಿದೆ. ರೈತರು ಅಲ್ಲಿನ ಮಾದರಿ ಅಳವಡಿಸಿಕೊಳ್ಳಬೇಕು ಎಂದರು.

ಈ ವೇಳೆ ವ್ಯವಸ್ಥಾಪಕ ಡಾ.ಅಕ್ಕಪ್ಪರೆಡ್ಡಿ, ಉಪ ವ್ಯವಸ್ಥಾಪಕ ಆರ್.ಪ್ರಸಾದ್, ಮಾರ್ಗ ವಿಸ್ತರಣಾಧಿಕಾರಿಗಳಾದ ಉಷಾ, ನಾಗೇಂದ್ರ, ಪ್ರಜ್ವಲ್, ಪ್ರಕಾಶ್, ಮಧು ಶಂಕರ್, ಟೆಕ್ನಿಷಿಯನ್ ಆನಂದ್, ಕಾರ್ಯದರ್ಶಿಗಳ ಸಂಘದ ಅಧ್ಯಕ್ಷ ಶಿವಪ್ಪ ಸೇರಿದಂತೆ ಹಲವರಿದ್ದರು.

ಬಸ್ ನಿಲುಗಡೆಗೆ ಆಗ್ರಹಿಸಿ ಪ್ರತಿಭಟನೆ



ಬಸ್ ನಿಲುಗಡೆಗೆ ಆಗ್ರಹಿಸಿ ಪ್ರತಿಭಟನೆ ನಡೆಸಲಾಯಿತು.

ಕಿಕ್ಕೇರಿ, ಜೂ.9– ಸಾರಿಗೆ ಬಸ್ ನಿಲುಗಡೆಗೆ ಆಗ್ರಹಿಸಿ ಹೋಬಳಿಯ ಮಾದಾಪುರ ಗೇಟ್ ಬಳಿ ಸುತ್ತಮುತ್ತಲ ಹತ್ತಾರು ಹಳ್ಳಿಗಳ ಗ್ರಾಮಸ್ಥರು ರಸ್ತೆ ತಡೆದು ಪ್ರತಿಭಟನೆ ನಡೆಸಿದರು.

ಈ ವೇಳೆ ಮಾತನಾಡಿದ ಗ್ರಾಮಸ್ಥರು, ಹಳ್ಳಿಗಾಡಿನ ಜನತೆ ಹೋಬಳಿ ಕೇಂದ್ರಕ್ಕೆ ಓಡಾಡಲು ಬಸ್ ಇಲ್ಲದೆ ನಿತ್ಯ ಪರದಾಡುವಂತಾಗಿದೆ. ಬಸ್ ನಿಲುಗಡೆಗೆ ಆದೇಶವಿದ್ದರೂ ಬಸ್ ನಿಲ್ಲಿಸುತ್ತಿಲ್ಲ. ಇದರಿಂದ ಶಾಲಾ ಕಾಲೇಜಿಗೆ ತೆರಳಲು ವಿದ್ಯಾರ್ಥಿಗಳು, ಕೂಲಿ ಕಾರ್ಮಿಕರು, ವಯೋವೃದ್ಧರು, ರೋಗಿಗಳಿಗೆ ತೊಂದರೆಯಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಾದಾಪುರ ಗೇಟ್ ಊಗಿನಹಳ್ಳಿ, ಊಗಿನಹಳ್ಳಿ ಕೊಪ್ಪಲು, ಉದ್ದಿನಮಲ್ಲನ ಹೊಸೂರು, ಗಾಣದಹಳ್ಳಿ, ಮಂಡಲೀಕನಹಳ್ಳಿ, ಮಾದಾಪುರ, ಐಕನಹಳ್ಳಿ, ತುಳಸಿ, ಗೂಡೇಹೊಸಹಳ್ಳಿ, ಕಡಹೆಮ್ಮಿಗೆ ಮತ್ತಿತರ ಹಳ್ಳಿಗಳ ಸಂಪರ್ಕ ಕೇಂದ್ರವಾಗಿದೆ. ಈ ಗ್ರಾಮಗಳಿಂದ ನಿತ್ಯ ಕಾಲ್ನಡಿಗೆಯಲ್ಲಿ ಹೋಬಳಿ ಕೇಂದ್ರವಾದ ಕಿಕ್ಕೇರಿಗೆ ತೆರಳಿ ದೂರದ ಊರುಗಳಿಗೆ ತೆರಳಬೇಕಿದೆ. ಮಳೆ, ಗಾಳಿ, ಬಿಸಿಲಿನಲ್ಲಿ ಓಡಾಡುವುದು ಸಮಸ್ಯೆಯಾಗಿದೆ. ಸೂಕ್ತ ಬಸ್ ಸೌಲಭ್ಯ ಕಲ್ಪಿಸುವಂತೆ ಸಾಕಷ್ಟು ಬಾರಿ ರಸ್ತೆ ತಡೆದು ಪ್ರತಿಭಟನೆ ನಡೆಸಿದರೂ, ಬಸ್ ನಿರ್ವಾಹಕರು ಮಾದಾಪುರ ಗೇಟ್‌ಗೆ ಟಿಕೆಟ್ ಬರುತ್ತಿಲ್ಲ ಎನ್ನುವ ಸಬೂಬು ನೀಡುತ್ತಾರೆ. ಆದರೆ ಚಿಕ್ಕಮಗಳೂರು, ಅರಸೀಕೆರೆ ಡಿಪೋದವರು ಟಿಕೆಟ್ ಕೊಡುತ್ತಾರೆ. ಇದು ಹೇಗೆ ಸಾಧ್ಯ. ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಸೂಕ್ತ ಪರಿಹಾರ ನೀಡುವವರೆಗೆ ಪ್ರತಿಭಟನೆ ಕೈಬಿಡುವುದಿಲ್ಲ ಎಂದು ಪಟ್ಟು ಹಿಡಿದರು.

ಈ ವೇಳೆ ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಕೆ.ಆರ್.ಪೇಟೆ ಸಂಚಾರ ನಿಯಂತ್ರಣಾಧಿಕಾರಿ ಕೃಷ್ಣ ಪ್ರತಿಭಟನಾಕಾರರ ಅಹವಾಲು ಆಲಿಸಿ ಸಮಸ್ಯೆ ಬಗೆಹರಿಸುವುದಾಗಿ ತಿಳಿಸಿ ಎಲ್ಲಾ ಸಾರಿಗೆ ಬಸ್‌ಗಳು ಮಾದಾಪುರ ಗೇಟ್‌ನಲ್ಲಿ ಬಸ್ ನಿಲುಗಡೆ ಮಾಡಲ ಸೂಚಿ ಸಲಾಗುವುದು. ಅಲ್ಲದೇ ಟಿಕೆಟ್ ವಿತರಿಸಲು ಕ್ರಮ ವಹಿಸುವುದಾಗಿ ಭರವಸೆ ನೀಡಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ಮಾದಾಪುರ ಎಂ.ಕೆ.ರಾಮಕೃಷ್ಣೇಗೌಡ, ತುಳಸಿ ನಾಗೇಗೌಡ, ರಾಜೇಗೌಡ, ಮಂಡಲೀಕನಹಳ್ಳಿ ವೆಂಕಟೇಶ್, ಸಣ್ಣೇಗೌಡ, ಧನಂಜಯ, ಪ್ರದೀಪ್, ಎಲ್‌ಐಸಿ ಪುಟ್ಟರಾಜು, ಧರಣೇಶ್, ಕಿರಣ್, ವರುಣ್, ವಿದ್ಯಾರ್ಥಿಗಳು ಇದ್ದರು.

ಭಾರತದಲ್ಲಿ ಗುರು ಪರಂಪರೆಗೆ ಅತ್ಯುನ್ನತ ಸ್ಥಾನ

ಗುರುವಂದನಾ ಕಾರ್ಯಕ್ರಮದಲ್ಲಿ ನಿವೃತ್ತ ಉಪ ಪ್ರಾಂಶುಪಾಲ ಡಿ.ರಾಜೇಗೌಡ



ಕೆ.ಆರ್.ಪೇಟೆ ಶಿಕ್ಷಕರ ಭವನದಲ್ಲಿ ಗುರುವಂದನಾ ಕಾರ್ಯಕ್ರಮ ನಡೆಯಿತು.

ಕೆ.ಆರ್.ಪೇಟೆ, ಜೂ.9– ಗುರುಗಳ ಮಹತ್ವವನ್ನು ವಿಶ್ವಕ್ಕೆ ಸಾರಿದ ಕೀರ್ತಿ ಭಾರತಕ್ಕೆ ಸಲ್ಲುತ್ತದೆ. ದೇಶದಲ್ಲಿ ಗುರು ಪರಂಪರೆಗೆ ಅತ್ಯುನ್ನತ ಸ್ಥಾನವಿದೆ ಎಂದು ನಿವೃತ್ತ ಉಪ ಪ್ರಾಂಶುಪಾಲ ಅಗ್ರಹಾರ ಬಾಚಹಳ್ಳಿ ಡಿ.ರಾಜೇಗೌಡ ತಿಳಿಸಿದರು.

ಪಟ್ಟಣದ ಶಿಕ್ಷಕರ ಭವನದಲ್ಲಿ ಸರ್ಕಾರಿ ಪ್ರೌಢಶಾಲಾ ವಿಭಾಗದ 1994–95ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ಆಯೋಜಿಸಿದ್ದ ಗುರುವಂದನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳು ತಮ್ಮ ಜೀವನಕ್ಕೆ ದಾರಿದೀಪವಾಗಿರುವ ಗುರುಗಳನ್ನು 30 ವರ್ಷ ಕಳೆದರೂ ಮರೆಯದೇ ಜ್ಞಾಪಕದಲ್ಲಿಟ್ಟುಕೊಂಡು ಸನ್ಮಾನಿಸುತ್ತಿರುವುದು ಶ್ಲಾಘನೀಯ. ತನ್ನ ಶಿಷ್ಯ ಉತ್ತನ ಸ್ಥಾನದಲ್ಲಿದ್ದಾನೆ ಎಂದು ತಿಳಿದರೆ ಹೆಚ್ಚು ಸಂತೋಷ ಪಡುವವರು ಶಿಕ್ಷಕರೇ ಆಗಿರುತ್ತಾರೆ ಎಂದರು.

ನಿವೃತ್ತ ಶಿಕ್ಷಕ ಸಣಬ ಯೋಗಾನರಸಿಂಹೇಗೌಡ ಮಾತನಾಡಿ, ವಿದ್ಯಾರ್ಥಿಗಳು ಉತ್ತಮ ಸಂಸ್ಕಾರ ಮತ್ತು ಸಂಸ್ಕೃತಿ ಅಳವಡಿಸಿಕೊಳ್ಳುವ ಮೂಲಕ ಸಮಾಜದ ಅಭಿವೃದ್ಧಿಗೆ ಪೂರಕವಾಗಿದ್ದರೆ ಅದನ್ನು ನೋಡುವ ಗುರು ಧನ್ಯನಾಗುತ್ತಾನೆ. ಒಬ್ಬ ಶಿಷ್ಯನ ಬಗ್ಗೆ ಸಮಾಜವು ಸದಾ ಮೆಚ್ಚುಗೆಯ ಮಾತುಗಳನ್ನಾಡಿದರೆ ಅದು ಗುರುವಿನ ಗೌರವವನ್ನು ಹೆಚ್ಚಿಸುತ್ತದೆ ಎಂದರು.

ಗುರುವಂದನಾ ಕಾರ್ಯಕ್ರಮದಲ್ಲಿ ಗೌರವ ವಂದನೆ ಸ್ವೀಕರಿಸಿ ಮಾತನಾಡಿದ ಶಿಕ್ಷಕರು ಇಂದು ನಮ್ಮನ್ನು ನೆನಪಿನಲ್ಲಿಟ್ಟುಕೊಂಡು ಅಭಿನಂದಿಸುತ್ತಿರುವ ನೀವೆಲ್ಲರೂ ಅಂದು ವಿದ್ಯಾರ್ಥಿಗಳಾಗಿದ್ದಿರಿ. ಪ್ರಸ್ತುತ ನೀವೆಲ್ಲರೂ ಪ್ರಾಂಶುಪಾಲರಾಗಿ, ಉಪನ್ಯಾಸಕರಾಗಿ, ಶಿಕ್ಷಕರಾಗಿ, ರೈತರಾಗಿ, ಶಿಕ್ಷಣ ಸಂಸ್ಥೆಯ ಸ್ಥಾಪಕರಾಗಿ, ವಕೀಲರಾಗಿ, ಪತ್ರಕರ್ತರಾಗಿ, ಸಮಾಜ ಸೇವಕರಾಗಿ ಸಮಾಜದಲ್ಲಿ ಗಣ್ಯ ಸ್ಥಾನದಲ್ಲಿದ್ದೀರಿ. ಅಂದು ನಿಮ್ಮನ್ನು ತಿದ್ದಿದ್ದಕ್ಕೆ ಇಂದು ನಮಗೆಲ್ಲರಿಗೂ ಹೆಮ್ಮೆಯಾಗಿದೆ ಎಂದರು.

ಈ ವೇಳೆ ಶಿಕ್ಷಕರಾದ ಕೆ.ಮಾದೇಗೌಡ, ಹೆಚ್.ಟಿ.ಜಾನಕಿ, ಎಂ.ಕೆ.ಲಕ್ಷ್ಮೇಗೌಡ, ಬಂಡಿಹೊಳೆ ರಾಮೇಗೌಡ, ಹೆಚ್.ಟಿ.ಗೋಪಾಲ್, ಸಣ್ಣತಮ್ಮೇಗೌಡ, ರಂಗರಾಜು, ರವಿಕುಮಾರ್ ಸೇರಿದಂತೆ ಹಲವು ಗುರುಗಳಿಗೆ ಗೌರವ ವಂದನೆ ಸಲ್ಲಿಸಿದ ವಿದ್ಯಾರ್ಥಿಗಳು, ತಮಗೆ ವಿದ್ಯೆ ಕಲಿಸಿ ಉತ್ತಮ ಸ್ಥಾನಮಾನ ಪಡೆದುಕೊಳ್ಳಲು ಮಾರ್ಗದರ್ಶನ ನೀಡಿದ ತಮ್ಮ ಗುರುಗಳ ಪಾದ ಸ್ಪರ್ಶ ಮಾಡಿ ಆಶೀರ್ವಾದ ಪಡೆದುಕೊಂಡರು.

ಕಾರ್ಯಕ್ರಮದಲ್ಲಿ ಹಳೇ ವಿದ್ಯಾರ್ಥಿಗಳಾದ ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನಿರ್ದೇಶಕಿ ಎಂ.ಪಿ.ಕುಮಾರಿ, ಹೊಸಹೊಳಲಿನ ಹೆಚ್.ಜಿ.ಲತಾ, ಯೋಗೇಶ್, ರಾಣಿ, ಕಾಂತರಾಜು, ಅಮ್ಜದ್ ಖಾನ್, ವಿಜಯ್ ಕುಮಾರ್, ರಾಜಶೇಖರ್, ವರದರಾಜು, ಪ್ರದೀಪ್, ಸತೀಶ್, ಶ್ರೀಧರ್, ಸಿದ್ದರಾಜು, ರವಿಕುಮಾರ್ ಮತ್ತಿತರರಿದ್ದರು.

ಜೂ.11, 12 ರಂದು ನೀರು ವ್ಯತ್ಯಯ

ಮಂಡ್ಯ, ಜೂ.9– ಮಂಡ್ಯ ನಗರ ನೀರು ಸರಬರಾಜು ವ್ಯವಸ್ಥೆಯಡಿ ಶ್ರೀರಂಗಪಟ್ಟಣ ಸಮೀಪದ ಮೂಲ ಸ್ಥಾವರಕ್ಕೆ ವಿದ್ಯುತ್ ಸರಬರಾಜು ಮಾಡುವ ವಿದ್ಯುತ್ ಉಪ ವಿತರಣಾ ಕೇಂದ್ರದ ನಿರ್ವಹಣಾ ಕಾಮಗಾರಿಯನ್ನು ಜೂ.11ರಂದು ಬೆಳಗ್ಗೆ 10 ರಿಂದ ಸಂಜೆ 6 ರವರೆಗೆ ಹಮ್ಮಿಕೊಂಡಿರುವುದರಿಂದ ಮೂಲ ಸ್ಥಾವರಕ್ಕೆ ವಿದ್ಯುತ್ ಸರಬರಾಜನ್ನು ಕಡಿತಗೊಳಿಸಲಾಗುವುದು. ಆದ್ದರಿಂದ ಜೂ.11, 12 ರಂದು ನೀರು ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿವೆ.

ಒಂದನೇ ಪುಟದಿಂದ

ಪತ್ನಿ, ಪುತ್ರನ ಕೊಂದು ಬಟ್ಟೆ ವ್ಯಾಪಾರಿ ಆತ್ಮಹತ್ಯೆ

ಎಸ್ಪಿ ಮಾಹಿತಿ: ಈ ಸಂಬಂಧ ಪ್ರತಿಕ್ರಿಯಿಸಿರುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ವಿ.ಜೆ.ಶೋಭಾರಾಣಿ, ಮೃತ ಪ್ರಭಾಕರ್ ಮನೆಗೆ ತೆರಳಿ ಪರಿಶೀಲಿಸಿದಾಗ ಡೆತ್‌ನೋಟ್ ಲಭ್ಯವಾಗಿದ್ದು, ಅದರಲ್ಲಿ ಗೃಹ ಸಾಲಬಾಧೆ ಹೆಚ್ಚಾಗಿತ್ತು ಎಂದು ಉಲ್ಲೇಖಿಸಿದ್ದು, ಇಎಂಐ ಕಟ್ಟುವುದು ಬಹಳ ಹಿಂಸೆಯಾಗಿತ್ತು ಎಂದು ತಿಳಿಸಿದ್ದಾರೆ. ಶಕ್ತಿ ಯೋಜನೆಯಡಿ ಉಚಿತ ಬಸ್‌ನಿಂದ ಗ್ರಾಹಕರು ಬೇರೆ ಬೇರೆ ಕಡೆ ಹೋಗುತ್ತಿದ್ದರಿಂದ ನನಗೆ ವ್ಯಾಪಾರ ಕಡಿಮೆಯಾಗಿತ್ತು ಎಂದು ಬರೆದಿದ್ದು, ಸದ್ಯ ಪ್ರಾಥಮಿಕ ಮಾಹಿತಿ ಸಿಕ್ಕಿರುವುದರಿಂದ ಪ್ರಕರಣದ ಬಗ್ಗೆ ಹೆಚ್ಚಿನ ಮಾಹಿತಿ ಕಲೆ ಹಾಕುತ್ತಿದ್ದೇವೆ ಎಂದು ತಿಳಿಸಿದ್ದಾರೆ.

ಸ್ಥಳದಲ್ಲೇ ಕೆಲ ಮಾಹಿತಿ ಕಲೆ ಹಾಕಿದ ಬಳಿಕ ಪ್ರಭಾಕರ್ ಮೊದಲು ತನ್ನ ಪತ್ನಿಯನ್ನು ಹತ್ಯೆಗೈದು ಬಳಿಕ ಮಗನನ್ನು ಕೊಂದು ನಂತರ ಅಂಗಡಿಗೆ ತೆರಳಿ ತಾನು ಸಹ ಆತ್ಮಹತ್ಯೆ ಮಾಡಿಕೊಂಡಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಮರಣೋತ್ತರ ಪರೀಕ್ಷೆ ಬಳಿಕ ಹೆಚ್ಚಿನ ಮಾಹಿತಿ ಲಭ್ಯವಾಗಲಿದೆ ಎಂದು ಹೇಳಿದರು.

ಪ್ರಭಾಕರ್ ಪುತ್ರ ಸಂತೋಷ್ ಏ.26ರಂದು ಮದುವೆಯಾಗಿದ್ದು, ಕೇವಲ ಒಂದೂವರೆ ತಿಂಗಳಷ್ಟೇ ಕಳೆದಿತ್ತು. ಜೊತೆಗೆ ಒಂದೇ ಮನೆಯಲ್ಲಿ ಅತ್ತೆ– ಮಾವನೊಂದಿಗೆ ಇವರು ವಾಸಿಸುತ್ತಿದ್ದು, ಕಳೆದ ರಾತ್ರಿ 12 ಗಂಟೆ ಸಮಯದಲ್ಲಿ ಊಟ ಮುಗಿಸಿ, ತಮ್ಮ ತಮ್ಮ ರೂಮಿನಲ್ಲಿ ಮಲಗಿದ್ದಾರೆ. ಬಳಿಕ ಸಂತೋಷ್ ಪತ್ನಿ ಇಂದು ಮುಂಜಾನೆ 6.30ಕ್ಕೆ ಎದ್ದು, ತಿಂಡಿ ತಯಾರಿಸಿ, ಸ್ನಾನ ಮತ್ತು ಪೂಜೆ ಮುಗಿಸಿ, ಅತ್ತೆಯನ್ನು ಎಬ್ಬಿಸಲು ಅವರ ರೂಮಿಗೆ ತೆರಳಿದಾಗ ಅತ್ತೆ ಮತ್ತು ಪತಿ ಕೊಲೆಯಾಗಿರುವುದು ಕಂಡು ಬಂದಿದೆ ಎಂದು ವಿಚಾರಣೆ ವೇಳೆ ಪ್ರಭಾಕರ್ ಸೊಸೆ ತಿಳಿಸಿದ್ದಾರೆ ಎಂದು ಎಸ್ಪಿ ವಿವರಿಸಿದರು.

ತಮ್ಮ ಪತಿ ರೂಮಿನಿಂದ ಯಾವಾಗ ಎದ್ದು ತಂದೆ– ತಾಯಿ ರೂಮಿಗೆ ತೆರಳಿದ್ದಾರೆಂಬುದು ಗೊತ್ತಾಗಿಲ್ಲ. ಜೊತೆಗೆ ನಾವು ಅನ್ಯೋನ್ಯವಾಗಿದ್ದೆವು. ಯಾವುದೇ ಸಂದರ್ಭದಲ್ಲೂ ನಮ್ಮ ನಡುವೆ ಜಗಳ ನಡೆದಿರಲಿಲ್ಲ ಎಂದು ಮೃತರ ಸೊಸೆ ಸ್ಪಷ್ಟಪಡಿಸಿದ್ದಾರೆ ಎಂದು ಎಸ್ಪಿ ತಿಳಿಸಿದರು. ಘಟನೆ ಸಂಬಂಧ ಮಂಡ್ಯ ಪೂರ್ವ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಶವಗಳ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಒಪ್ಪಿಸಲಾಗಿದೆ. ಜೊತೆಗೆ ಘಟನೆ ಬಗ್ಗೆ ಸಮಗ್ರ ತನಿಖೆ ನಡೆಸಲಾಗುತ್ತಿದೆ ಎಂದರು.

ಬಿರುಕು ಮೂಡಿಸಲು ಕಾಂಗ್ರೆಸ್ ಯತ್ನ

ನನ್ನನ್ನೇನು ಸಲಹೆ ಕೇಳ್ತಾರೆ: ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಮ್ಮ ನಿವಾಸಕ್ಕೆ ಭೇಟಿ ನೀಡಿ, ಸಲಹೆ ಪಡೆಯುವುದಾಗಿ ಹೇಳಿರುವ ಬಗ್ಗೆ ಪ್ರತಿಕ್ರಿಯಿಸಿ, ನಾನೇನು ಸಲಹೆ ನೀಡಲಿ, ಕುಮಾರಸ್ವಾಮಿ ಎರಡು ಬಾರಿ ಮುಖ್ಯಮಂತ್ರಿ ಆಗಿ ಏನು ಹರಿದಿದ್ದಾರೆ ಎಂದು ಅವರೇ ಕೇಳಿದ್ದಾರೆ. ಎಲ್ಲದಕ್ಕೂ ಸಾಕ್ಷಿ ಗುಡ್ಡೆ ಕೇಳುತ್ತಾರೆ. ನಾನೇನೂ ಹರಿದಿಲ್ಲ, ನನ್ನ ಬಳಿ ಬಂದು ಅವರೇನು ಸಲಹೆ ಕೇಳುತ್ತಾರೆ. ಎಲ್ಲವನ್ನು ನಾನು ಬಲ್ಲೆ. ಹಿರಿಯರು ಒಂದು ಮಾತು ಹೇಳಿದ್ದಾರೆ 'ಅತಿ ವಿನಯಂ ದೂರ್ತ ಲಕ್ಷಣಂ' ಅಂತ. ಆ ಮಾತು ನನಗೆ ಪದೇ ಪದೇ ನೆನಪಿಗೆ ಬರುತ್ತಿದೆ ಎಂದು ತೀಕ್ಷ್ಣವಾಗಿ ಕುಟುಕಿದರು.

ಯತ್ನಾಳ್ ಮತ ಕೇಳುತ್ತೇವೆ: ವಿಧಾನ ಪರಿಷತ್ ಚುನಾವಣೆಗೆ ಜೆಡಿಎಸ್ ಪಕ್ಷವು ಅಭ್ಯರ್ಥಿ ಹಾಕಿರುವ ಬಗ್ಗೆ ಪ್ರತಿಕ್ರಿಯಿಸಿ, ನಮಗೂ ಎರಡು ಮತ ಬೇಕು, ಕಾಂಗ್ರೆಸ್ ಪಕ್ಷಕ್ಕೂ ಎರಡು ಮತ ಬೇಕು. ಇದರಲ್ಲಿ ಯಾವುದೇ ಗೇಮ್ ಪ್ಲಾನ್ ಇಲ್ಲ. ನಾವು ಬಿಜೆಪಿಯಿಂದ ಉಚ್ಚಾಟನೆಯಾಗಿರುವ ಬಸನಗೌಡ ಪಾಟೀಲ ಯತ್ನಾಳ್ ಅವರನ್ನು ಮತ ಹಾಕುವಂತೆ ಕೇಳುತ್ತೇವೆ. ನಮ್ಮ ಪ್ರಯತ್ನ ನಾವು ಮಾಡುತ್ತೇವೆ. ಕಾಂಗ್ರೆಸ್‌ನವರಿಗೆ ಹಣ– ಅಧಿಕಾರ ಬಲ ಇದೆ. ಏನಾಗುತ್ತೆ ಎಂದು ಮುಂದೆ ನೋಡೋಣ ಎಂದರು.

ಜಗತ್ತಿಗೇ ಬೆಲೆ ಏರಿಕೆ ಬಿಸಿ ತಟ್ಟಿದೆ: ಗ್ಯಾಸ್ ಪೆಟ್ರೋಲ್ ಬೆಲೆ ಏರಿಕೆ ಬಗ್ಗೆ ಮಾತನಾಡಿ, ಯುದ್ಧದ ಹಿನ್ನೆಲೆಯಲ್ಲಿ ಬೆಲೆ ಏರಿಕೆಯಾಗಿದೆ. ಇದು ಭಾರತದಲ್ಲಿ ಮಾತ್ರ ಆಗಿರುವುದಲ್ಲ. ಜಗತ್ತಿನ ಎಲ್ಲಾ ದೇಶಗಳಿಗೂ ಈ ಪರಿಸ್ಥಿತಿ ಬಂದಿದೆ. ಕಾಂಗ್ರೆಸ್‌ನವರು ಎಲ್ಲದಕ್ಕೂ ರಾಜಕೀಯ ಮಾಡುತ್ತಿದ್ದಾರೆ. ರಾಜ್ಯದಲ್ಲೇ ನೋಡುವುದಾದರೆ ಇಲ್ಲಿನ ಕಾಂಗ್ರೆಸ್ ಸರ್ಕಾರ ನಿರಂತರವಾಗಿ ಕಳೆದ ಮೂರೂವರೆ ವರ್ಷದಿಂದ ಬೆಲೆ ಏರಿಸುತ್ತಲೇ ಬಂದಿದೆ. ಅದಕ್ಕೆ ಏನೆಂದು ಹೇಳುವುದು ಎಂದು ಕಿಡಿಕಾರಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ, ಕೆ.ಆರ್.ಪೇಟೆ ಶಾಸಕ ಮಂಜುನಾಥ, ಜಿಲ್ಲಾ ಜೆಡಿಎಸ್ ಅಧ್ಯಕ್ಷ ರಮೇಶ್ ಮತ್ತಿತರರ ಮುಖಂಡರು ಹಾಜರಿದ್ದರು.

ಡಿಕೆಶಿ ಮಂತ್ರಿ ಮಂಡಲದಲ್ಲಿಲ್ಲ ಅವಕಾಶ

ರಹೀಂ ಖಾನ್, ಶರಣಬಸಪ್ಪ ದರ್ಶನಾಪುರ ಅವರಿಗೂ ಅವಕಾಶ ಇಲ್ಲ. ಇವರಲ್ಲದೆ, ಸಂತೋಷ್ ಎಸ್. ಲಾಡ್, ಶಿವಾನಂದ ಪಾಟೀಲ್, ಶಿವರಾಜ್ ತಂಗಡಗಿ, ಡಾ.ಎಂ.ಸಿ.ಸುಧಾಕರ್ ಅವರಿಗೂ ಅವಕಾಶ ಕಲ್ಪಿಸದೆ, ಇವರ ಸ್ಥಾನಗಳಿಗೆ ಹೊಸ ಮುಖಗಳು ಬರಲಿವೆ. ಆದರೆ, ಸಿದ್ದರಾಮಯ್ಯ ಸಂಪುಟದಲ್ಲಿ ಮಂತ್ರಿಗಳಾಗಿದ್ದ ಕೆಲವರಿಗೆ ವಿಸ್ತರಣೆ ಸಂದರ್ಭದಲ್ಲಿ ಅವಕಾಶ ದೊರೆಯಲಿದೆ ಎಂದು ಉನ್ನತ ಮೂಲಗಳು ತಿಳಿಸಿವೆ. ವಿಧಾನಸಭಾಧ್ಯಕ್ಷ ಸ್ಥಾನ ತೆರವುಗೊಳಿಸಿರುವ ಯು.ಟಿ.ಖಾದರ್ ಸ್ಥಾನಕ್ಕೆ ಕಾನೂನು ಸಚಿವರಾಗಿ ಕಾರ್ಯನಿರ್ವಹಿಸಿರುವ ಎಚ್.ಕೆ.ಪಾಟೀಲ್ ಅವರನ್ನು ನೇಮಕ ಮಾಡಲು ಮುಖ್ಯಮಂತ್ರಿ ತೀರ್ಮಾನಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ರಾಷ್ಟ್ರೀಯ ನೀತಿ ಆಯೋಗದ ಸಭೆಯಲ್ಲಿ ಭಾಗವಹಿಸಲು ಮುಖ್ಯಮಂತ್ರಿ ಜೂನ್ 10ರಂದು ದೆಹಲಿಗೆ ತೆರಳಲಿದ್ದು, ಈ ಸಂದರ್ಭದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭೇಟಿ ಮಾಡಿ ಸಂಪುಟ ವಿಸ್ತರಣೆಗೆ ಸಂಬಂಧಿಸಿದಂತೆ ಒಂದು ಸುತ್ತಿನ ಮಾತುಕತೆ ನಡೆಸಲಿದ್ದಾರೆ ಎಂದು ಇದೇ ಮೂಲಗಳು ತಿಳಿಸಿವೆ.

ಅಪಖ್ಯಾತಿ ಕಾಂಗ್ರೆಸ್‌ನದು

ಎಂಬುದು ಎಲ್ಲರಿಗೂ ತಿಳಿದ ವಿಷಯ ಎಂದಿದ್ದಾರೆ. ಕೃತಕ ಕಾಳಜಿಯ ಮಾತನಾಡುತ್ತಿರುವ ಕಾಂಗ್ರೆಸ್ಸಿಗರು ಕೊಳಕು ರಾಜಕಾರಣ ಮಾಡುವುದನ್ನು ನಿಲ್ಲಿಸಬೇಕು. ಭಾರತೀಯ ಜನತಾ ಪಕ್ಷ ದೇವೇಗೌಡ ಅವರನ್ನು ಅತ್ಯಂತ ಗೌರವದಿಂದ ನಡೆಸಿ ಕೊಂಡಿದೆ. ಭಾರತದ ಸಮಗ್ರತೆ ಉಳಿಯ ಬೇಕಾದರೆ, ಅಭಿವೃದ್ಧಿ ಹೊಂದಬೇಕಾದರೆ ಪ್ರಧಾನಿ ನರೇಂದ್ರ ಮೋದಿ ಆಡಳಿತದಿಂದ ಮಾತ್ರ ಸಾಧ್ಯ ಎಂಬ ನಂಬಿಕೆಯಿಂದ ದೇವೇಗೌಡ ಅವರು ಬಿಜೆಪಿ ನೇತೃತ್ವದ ಎನ್‌ಡಿಎ ಬೆಂಬಲಿಸಿದರು. ಇದನ್ನು ಸಹಿಸಲಾಗದ ಕಾಂಗ್ರೆಸ್ಸಿಗರು ದೇವೇಗೌಡ ಅವರ ಹೆಸರು ಬಳಸಿಕೊಂಡು ರಾಜಕಾರಣ ಮಾಡಲು ಹೊರಟಿರುವುದು ನಾಚಿಕೆಗೇಡಿನ ಪರಮಾವಧಿ ಎಂದು ವಿಜಯೇಂದ್ರ ಟೀಕಿಸಿದ್ದಾರೆ.

ವಿವಿಧ ಕೋರ್ಸುಗಳಿಗೆ ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

ಮೈಸೂರು, ಜೂ.9– 2026–27 ಸಾಲಿನ D.EL.Ed, D.P.Ed ಮತ್ತು D.P.S.E ಕೋರ್ಸುಗಳ ವ್ಯಾಸಂಗಕ್ಕಾಗಿ ರಾಜ್ಯದ ಸರ್ಕಾರಿ, ಮಾನ್ಯತೆ ಪಡೆದ ಅನುದಾನಿತ ಹಾಗೂ ಅನುದಾನ ರಹಿತ ಸಂಸ್ಥೆಗಳಲ್ಲಿನ ಸರ್ಕಾರಿ ಕೋಟಾದ ಸೀಟುಗಳ ದಾಖಲಾತಿಗಾಗಿ ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ದಿನಾಂಕವನ್ನು ಜೂನ್ 12 ರವರೆಗೆ ವಿಸ್ತರಿಸಲಾಗಿದೆ ಎಂದು ಕೇಂದ್ರೀಕೃತ ದಾಖಲಾತಿ ಘಟಕದ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿರೋಧ ಪಕ್ಷದ ಗದ್ದಲದ ನಡುವೆ ಡೀಲಿಮಿಟೇಷನ್ ಮಸೂದೆ ಜಾರಿಗೆ ಮೋದಿ ಮಾಸ್ಟರ್ ಪ್ಲಾನ್!

ನವದೆಹಲಿ: ನರೇಂದ್ರ ಮೋದಿ ನೇತೃತ್ವದ ಸರ್ಕಾರ 2029 ರ ಸಾರ್ವತ್ರಿಕ ಚುನಾವಣೆಗೆ ಮುಂಚಿತವಾಗಿ ಲೋಕಸಭೆಯಲ್ಲಿ ಮಹಿಳಾ ಮೀಸಲಾತಿಯನ್ನು ಜಾರಿಗೆ ತರಲು ಅಗತ್ಯವಿರುವ ಸೀಮಾ ನಿರ್ಣಯ (ಡೀಲಿಮಿಟೇಷನ್) ಮಸೂದೆಗೆ ಸಾಧ್ಯತೆಯನ್ನು ಅನ್ವೇಷಿಸುತ್ತಿದೆ ಎಂದು ಸರ್ಕಾರಿ ಮೂಲಗಳು ತಿಳಿಸಿವೆ.

ಎರಡು ಪ್ರಮುಖ ವಿರೋಧ ಪಕ್ಷಗಳು ಆಂತರಿಕ ದಂಗೆಗಳೊಂದಿಗೆ ಹೋರಾಡುತ್ತಿರುವುದರಿಂದ ಮತ್ತು ಇಂಡಿಯಾ ಮೈತ್ರಿಕೂಟದಿಂದ ದೂರವಾಗುತ್ತಿರುವಾಗಲೇ ಮಸೂದೆಗೆ ಮರುಜೀವ ಕೊಡಲು ಸರ್ಕಾರ ಚಿಂತನೆ ನಡೆಸುತ್ತಿರುವುದು ಮಹತ್ವ ಪಡೆದುಕೊಂಡಿದೆ.

ಬದಲಾಗುತ್ತಿರುವ ರಾಜಕೀಯ ಭೂದೃಶ್ಯ ಮತ್ತು ಆಡಳಿತಾರೂಢ ಎನ್‌ಡಿಎಗೆ ವಿರೋಧ ಪಕ್ಷದ ಸಂಸದರಿಂದ ಹೆಚ್ಚುತ್ತಿರುವ ಬೆಂಬಲ ಶಾಸನಕ್ಕೆ ಸಂಸತ್ತಿನ ಅನುಮೋದನೆಯನ್ನು ಪಡೆಯುವ ಸಾಧ್ಯತೆಗಳನ್ನು ಸುಧಾರಿಸಬಹುದು ಎಂಬ ವಿಶ್ವಾಸ ಕೇಂದ್ರ ಸರ್ಕಾರದಲ್ಲಿದೆ ಎಂದು ಮೂಲಗಳು ಸೂಚಿಸಿವೆ. ಮಹಿಳೆಯರಿಗೆ ಶೇ.33 ರಷ್ಟು ಮೀಸಲಾತಿ ನೀಡುವ ಸಂವಿಧಾನ ತಿದ್ದುಪಡಿ ಮಸೂದೆಗೆ ಏಪ್ರಿಲ್ 17 ರಂದು ಲೋಕಸಭೆಯಲ್ಲಿ ಸೋಲಾಗಿತ್ತಾದರೂ, ಡೀಲಿಮಿಟೇಷನ್ ಮಸೂದೆ ಮತ್ತು ವಿಧಾನಸಭೆಗಳನ್ನು ಹೊಂದಿರುವ ಕೇಂದ್ರಾಡಳಿತ ಪ್ರದೇಶಗಳಲ್ಲಿ ಮಹಿಳಾ ಮೀಸಲಾತಿ ಕಾನೂನನ್ನು ಜಾರಿಗೆ ತರುವ ಮತ್ತೊಂದು ಕರಡು ಕಾನೂನು ಇನ್ನೂ ಲೋಕಸಭೆಯಲ್ಲಿ ಬಾಕಿ ಉಳಿದಿವೆ ಏಕೆಂದರೆ ಸರ್ಕಾರ ಅವುಗಳನ್ನು ಇನ್ನೂ ಹಿಂಪಡೆದಿಲ್ಲ.

ಇತ್ತೀಚಿನ ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ತೃಣಮೂಲ ಕಾಂಗ್ರೆಸ್ ಸೋಲಿನ ನಂತರ, ಪ್ರಾದೇಶಿಕ ಪಕ್ಷ ರಾಜ್ಯ ವಿಧಾನಸಭೆ ಮತ್ತು ಸಂಸತ್ತಿನಲ್ಲಿ ವಿಭಜನೆಯ ಅಂಚಿನಲ್ಲಿದೆ, ಅವುಗಳಲ್ಲಿ ಬಹುಪಾಲು ಕೇಂದ್ರದಲ್ಲಿ ಆಡಳಿತದ ಪರವಾಗಿವೆ.



ತಮಿಳುನಾಡಿನಲ್ಲಿ ಅಧಿಕಾರ ಕಳೆದುಕೊಂಡ ಡಿಎಂಕೆ, ದಕ್ಷಿಣ ರಾಜ್ಯದಲ್ಲಿ ಹೊಸ ಟಿವಿಕೆ ಸರ್ಕಾರಕ್ಕೆ ಬೆಂಬಲ ನೀಡಿದ್ದಕ್ಕಾಗಿ ಕಾಂಗ್ರೆಸ್ ವಿರುದ್ಧ ಸಿಟ್ಟಾಗಿದೆ. ಕಾಂಗ್ರೆಸ್ ತನ್ನ ಬೆನ್ನಿಗೆ ಚೂರಿ ಹಾಕಿದೆ ಎಂದು ಆರೋಪಿಸಿದ ನಂತರ ಡಿಎಂಕೆ ಇಂಡಿಯಾ ಬಣದಿಂದ ದೂರ ಸರಿದಿದ್ದರಿಂದ, ನಿರ್ಣಾಯಕ ಶಾಸನ ಸೇರಿದಂತೆ ಸಂಸತ್ತಿನಲ್ಲಿ ತಮಿಳುನಾಡು ಪಕ್ಷದಿಂದ ವಿಷಯಾಧಾರಿತ ಬೆಂಬಲವನ್ನು ಪಡೆಯಲು ಬಿಜೆಪಿ ಪ್ರಯತ್ನಿಸಬಹುದು ಎಂದು ಮೂಲಗಳು ಸೂಚಿಸಿವೆ.

ರಾಜ್ಯಸಭೆಯಲ್ಲಿರುವ ಆಮ್ ಆದ್ಮಿ ಪಕ್ಷದ (ಎಎಪಿ) 10 ಸಂಸದರಲ್ಲಿ ಏಳು ಮಂದಿ ಈಗಾಗಲೇ ಬಿಜೆಪಿಗೆ ಸೇರಿದ್ದಾರೆ, ಇದರಿಂದಾಗಿ ಮೇಲ್ಮನೆಯಲ್ಲಿ ಆಡಳಿತ ಮೈತ್ರಿಕೂಟದ ಬಲ ಹೆಚ್ಚಿದೆ.

ಮೇ 28 ರಂದು, ಕೇಂದ್ರ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಪಿಟಿಐಗೆ ನೀಡಿದ್ದ ಹೇಳಿಕೆಯಲ್ಲಿ ಮಹಿಳಾ ಕೋಟಾ ಕಾನೂನು 2029ರ ಸಂಸತ್ ಚುನಾವಣೆಗೆ ಮೊದಲು ಜಾರಿಯಲ್ಲಿರುತ್ತದೆ ಆದ್ದರಿಂದ ಅದಕ್ಕಾಗಿ ಹೆಚ್ಚು ಸಮಯ ಕಾಯಬೇಕಿಲ್ಲ ಎಂದು ಹೇಳಿದ್ದರು.

ಮುಂದಿನ ಲೋಕಸಭಾ ಚುನಾವಣೆಗೆ ಮೊದಲು ಬಹಳಷ್ಟು ವಿಷಯಗಳು ಸಂಭವಿಸುತ್ತವೆ ಎಂದು ಕಾನೂನು ಸಚಿವರು ಹೇಳಿದ್ದರು. ನಾವು ನಾರಿ ಶಕ್ತಿ ವಂದನ ಅಧಿನಿಯಮವನ್ನು ಹೆಚ್ಚು ಸಮಯ ಕಾಯಲು ಬಿಡುವುದಿಲ್ಲ. ದೇಶವು ನಾರಿ ಶಕ್ತಿ ವಂದನ (ಮಹಿಳಾ ಮೀಸಲಾತಿ ಕಾನೂನು) ಹೆಚ್ಚು ಸಮಯ ಕಾಯುವುದನ್ನು ಬಯಸುವುದಿಲ್ಲ ಎಂದು ಅವರು ಪ್ರತಿಪಾದಿಸಿದ್ದರು. 2023 ರ ಮಹಿಳಾ ಕೋಟಾ ಕಾನೂನಿಗೆ ತಿದ್ದುಪಡಿಯನ್ನು ಏಪ್ರಿಲ್‌ನಲ್ಲಿ ಲೋಕಸಭೆಯಲ್ಲಿ ಸೋತಿದ್ದರಿಂದ ಸರ್ಕಾರದ ಭವಿಷ್ಯದ ಯೋಜನೆಯ ಬಗ್ಗೆ ಮೇಘವಾಲ್ ಅವರನ್ನು ಕೇಳಲಾಗಿತ್ತು.

2029 ರಲ್ಲಿ ಮುಂದಿನ ಸಂಸತ್ ಚುನಾವಣೆಗೆ ಮುನ್ನ ಪ್ರಸ್ತುತ 543 ರಿಂದ ಗರಿಷ್ಠ 850ಕ್ಕೆ ಲೋಕಸಭಾ ಸ್ಥಾನಗಳನ್ನು ಹೆಚ್ಚಿಸಲು ಸಂವಿಧಾನ ತಿದ್ದುಪಡಿ ಮಸೂದೆ ಪ್ರಯತ್ನಿಸಿತ್ತು.

ಏಪ್ರಿಲ್ 17 ರಂದು, ಸಂಸತ್ತಿನ ವಿಸ್ತೃತ ಅಧಿವೇಶನದ ಸಮಯದಲ್ಲಿ, 2029 ರಲ್ಲಿ ಶಾಸಕಾಂಗಗಳಲ್ಲಿ ಮಹಿಳೆಯರಿಗೆ ಮೀಸಲಾತಿಯನ್ನು ಜಾರಿಗೆ ತರುವ ಮತ್ತು ಲೋಕಸಭೆಯಲ್ಲಿ ಸ್ಥಾನಗಳ ಸಂಖ್ಯೆಯನ್ನು ಹೆಚ್ಚಿಸುವ ಸಂವಿಧಾನ ತಿದ್ದುಪಡಿ ಮಸೂದೆಯನ್ನು ಕೆಳಮನೆಯಲ್ಲಿ ಸೋಲಿಸಲಾಯಿತು, 298 ಸದಸ್ಯರು ಮಸೂದೆಯನ್ನು ಬೆಂಬಲಿಸಿದರು ಮತ್ತು 230 ಸಂಸದರು ಅದರ ವಿರುದ್ಧ ಮತ ಚಲಾಯಿಸಿದರು. ಮತ ಚಲಾಯಿಸಿದ 528 ಸದಸ್ಯರಲ್ಲಿ, ಮಸೂದೆಗೆ ಮೂರನೇ ಎರಡರಷ್ಟು ಬಹುಮತಕ್ಕೆ 352 ಮತಗಳು ಬೇಕಾಗಿದ್ದವು.

ಮಸೂದೆಯ ಪ್ರಕಾರ, 2011 ರ ಜನಗಣತಿಯ ಆಧಾರದ ಮೇಲೆ ನಡೆದ ಸೀಮಾ ನಿರ್ಣಯದ ನಂತರ (ಡಿಲಿಮಿಟೇಷನ್ ನಂತರ), 2029 ರ ಲೋಕಸಭಾ ಚುನಾವಣೆಗೆ ಮುಂಚಿತವಾಗಿ ಮಹಿಳಾ ಮೀಸಲಾತಿ ಕಾನೂನನ್ನು "ಕಾರ್ಯಗತಗೊಳಿಸಲು" ಲೋಕಸಭಾ ಸ್ಥಾನಗಳನ್ನು ಪ್ರಸ್ತುತ 543 ರಿಂದ ಗರಿಷ್ಠ 850ಕ್ಕೆ ಹೆಚ್ಚಿಸಬೇಕಾಗಿತ್ತು. ಮಹಿಳೆಯರಿಗೆ ಶೇಕಡಾ 33 ರಷ್ಟು ಮೀಸಲಾತಿ ಕಲ್ಪಿಸಲು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಅಸೆಂಬ್ಲಿಗಳಲ್ಲಿ ಸ್ಥಾನಗಳನ್ನು ಹೆಚ್ಚಿಸಬೇಕಾಗಿತ್ತು.

ಪಿಓಕೆಯಲ್ಲಿ ಪ್ರತಿಭಟನಾಕಾರರ ಮೇಲೆ ಪಾಕ್ ಗುಂಡಿನ ದಾಳಿ

15ಕ್ಕೂ ಅಧಿಕ ಜನರ ಸಾವು, 200ಕ್ಕೂ ಹೆಚ್ಚು ಮಂದಿಗೆ ಗಾಯ



ನವದೆಹಲಿ, ಜೂ.9– ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ ಕಳೆದ ಕೆಲವು ದಿನಗಳಿಂದ ಹೆಚ್ಚುತ್ತಿರುವ ಹಣದುಬ್ಬರ, ಗಗನಕ್ಕೇರಿರುವ ವಿದ್ಯುತ್ ಬಿಲ್‌ಗಳು, ಗೋಧಿ ಹಿಟ್ಟಿನ ಬೆಲೆ ಏರಿಕೆ ಹಾಗೂ ಸರ್ಕಾರದ ಅಸಮರ್ಪಕ ನೀತಿಗಳ ವಿರುದ್ಧ ಸಾರ್ವಜನಿಕರು ಬೃಹತ್ ಪ್ರತಿಭಟನೆಗಳನ್ನು ಹಮ್ಮಿಕೊಂಡಿದ್ದಾರೆ. 'ಅವಮಿ ಆಕ್ಷನ್ ಕಮಿಟಿ' ನೇತೃತ್ವದಲ್ಲಿ ಮುಜಾಫರಾಬಾದ್ ಸೇರಿದಂತೆ ಹಲವು ನಗರಗಳಲ್ಲಿ ಜನಾಂದೋಲನ ತೀವ್ರಗೊಂಡಿದೆ. ಈ ವೇಳೆ ಪ್ರತಿಭಟನಾಕಾರರು ಪಾಕಿಸ್ತಾನಿ ವಿರೋಧಿ ಘೋಷಣೆಗಳನ್ನು ಕೂಗುತ್ತಾ ಪ್ರತಿಭಟನೆ ನಡೆಸಿದರು.

ಇದಕ್ಕೆ ಪ್ರತಿಯಾಗಿ ರಾವಲ್ಕೋಟ್‌ನಲ್ಲಿ ಜನರು ಬೆಳಿಗ್ಗೆಯಿಂದಲೇ ಎಲ್ಲಾ ಪ್ರಮುಖ ರಸ್ತೆಗಳನ್ನು ನಿರ್ಬಂಧಿಸುತ್ತಿದ್ದಾರೆ. ಪ್ರತಿಭಟನಾಕಾರರು ಭಿಂಬರ್‌ನಿಂದ ರಾವಲ್ಕೋಟ್ ಕಡೆಗೆ ಮುನ್ನಡೆಯದಂತೆ ತಡೆಯಲು ಪಾಕಿಸ್ತಾನಿ ಪೊಲೀಸರು, ಸೇನೆ ಮತ್ತು ರೇಂಜರ್‌ಗಳು ತಡೆದರು. ಪ್ರತಿಭಟನಾಕಾರರ ಮೇಲೆ ನೇರವಾಗಿ ಗುಂಡು ಹಾರಿಸುವುದರ ಜೊತೆಗೆ, ಅಶ್ರುವಾಯು ಬಳಸಲಾಯಿತು. ಅತ್ಯಂತ ಅಪಾಯಕಾರಿ ಪೆಲೆಟ್ ಗನ್‌ಗಳನ್ನು ಸಹ ಬಳಸಿದ್ದರಿಂದ 7 ಜನರು ಗಂಭೀರವಾಗಿ ಗಾಯಗೊಂಡರು. ಪಲಾಂದ್ರಿ ಮತ್ತು ಸುಧಾನೋತಿಯಂತಹ ಪ್ರದೇಶಗಳಲ್ಲಿ, ಜನರು ಕೈಯಲ್ಲಿ ಕೋಲುಗಳನ್ನು ಹಿಡಿದು ಪಾಕಿಸ್ತಾನಿ ಪಡೆಗಳನ್ನು ಎದುರಿಸಿದರು. ಪ್ರತಿಭಟನೆಗಳಿಂದಾಗಿ ಪಿಓಕೆಯಾದ್ಯಂತ ಮಾರುಕಟ್ಟೆಗಳು ಮತ್ತು ವ್ಯಾಪಾರ ಸಂಸ್ಥೆಗಳು ಸಂಪೂರ್ಣವಾಗಿ ಮುಚ್ಚಲ್ಪಟ್ಟವು.

ಈ ವೇಳೆ ಭದ್ರತಾ ಪಡೆಗಳು ನಡೆಸಿದ ಲಘು ಲಾಠಿ ಪ್ರಹಾರ, ಅಶ್ರುವಾಯು ಪ್ರಯೋಗ ಮತ್ತು ಪ್ಲಾಸ್ಟಿಕ್ ಹಾಗೂ ಜೀವಂತ ಗುಂಡುಗಳ ದಾಳಿಯಿಂದಾಗಿ 35ಕ್ಕೂ ಅಧಿಕ ಮಂದಿ ಸಾವಿಗೀಡಾಗಿ, 200ಕ್ಕೂ ಹೆಚ್ಚು ಪ್ರತಿಭಟನಾಕಾರರು ತೀವ್ರವಾಗಿ ಗಾಯಗೊಂಡಿದ್ದಾರೆ. ಇವರಲ್ಲಿ ಹಲವರ ಸ್ಥಿತಿ ಅತ್ಯಂತ ಚಿಂತಾಜನಕವಾಗಿದೆ. ಈ ಘಟನೆಯ ನಂತರ ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಉದ್ವಿಗ್ನ ವಾತಾವರಣ ನಿರ್ಮಾಣವಾಗಿದ್ದು, ಪ್ರಮುಖ ನಗರಗಳಲ್ಲಿ ಕರ್ಫ್ಯೂ ಪರಿಸ್ಥಿತಿ ಇದೆ.

ಹಿಂಸಾಚಾರದ ವೀಡಿಯೊಗಳು ಮತ್ತು ಮಾಹಿತಿಗಳು ಹರಡದಂತೆ ತಡೆಯಲು ಪಾಕಿಸ್ತಾನ ಸರ್ಕಾರವು ಇಡೀ ಪ್ರದೇಶದಲ್ಲಿ ಮೊಬೈಲ್ ನೆಟ್‌ವರ್ಕ್ ಮತ್ತು ಇಂಟರ್ನೆಟ್ ಸೇವೆಗಳನ್ನು ಸಂಪೂರ್ಣವಾಗಿ ಬಂದ್ ಮಾಡಿದೆ. ಪರಿಸ್ಥಿತಿ ಕೈಮೀರುತ್ತಿರುವುದನ್ನು ಕಂಡು ಪಾಕಿಸ್ತಾನ ಸರ್ಕಾರವು ಪ್ರತಿಭಟನೆಯನ್ನು ಹತ್ತಿಕ್ಕಲು ಹೆಚ್ಚುವರಿ ಸೇನಾ ಪಡೆಗಳನ್ನು ನಿಯೋಜಿಸಿದೆ.

ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದ ನಾಗರಿಕರ ಮೇಲೆ ಪಾಕಿಸ್ತಾನಿ ಪಡೆಗಳು ನಡೆಸಿರುವ ಈ ಭೀಕರ ದಾಳಿಯು ಅಂತರರಾಷ್ಟ್ರೀಯ ಮಟ್ಟದಲ್ಲಿ ತೀವ್ರ ಖಂಡನೆಗೆ ಒಳಗಾಗಿದ್ದು, ಭಾರಿ ಪ್ರಮಾಣದ ಮಾನವ ಹಕ್ಕುಗಳ ಉಲ್ಲಂಘನೆ ನಡೆದಿದೆ ಎಂದು ಸ್ಥಳೀಯ ನಾಯಕರು ಆರೋಪಿಸಿದ್ದಾರೆ.

ಪ್ರತಿಭಟನೆಗೆ ಕಾರಣವೇನು: ಪಿಓಕೆ ಜನರು ಮುಖ್ಯವಾಗಿ 38 ಬೇಡಿಕೆಗಳ ಈಡೇರಿಕೆಗಾಗಿ ಈ ದೀರ್ಘ ಹೋರಾಟವನ್ನು ನಡೆಸುತ್ತಿದ್ದಾರೆ. ಮುಜಫರಾಬಾದ್‌ನ ನೀಲಂ ಸೇತುವೆಯಲ್ಲಿ ಭದ್ರತಾ ಪಡೆಗಳು ಮತ್ತು ನಾಗರಿಕರ ನಡುವೆ ಹಿಂಸಾತ್ಮಕ ಘರ್ಷಣೆಗಳು ನಡೆದವು. ಪಾಕಿಸ್ತಾನದ ಭಾಗವಲ್ಲದ ಪಿಓಕೆ ಪ್ರದೇಶದಲ್ಲಿ ಮಂಗಳಾ ಅಣೆಕಟ್ಟಿನಂತಹ ಪ್ರತಿಷ್ಠಿತ ಜಲವಿದ್ಯುತ್ ಯೋಜನೆಗಳನ್ನು ನಿರ್ಮಿಸಲಾಗುತ್ತಿದೆ ಎಂದು ಆರೋಪಿಸಲಾಗಿದ್ದು, ಅಗ್ಗದ ವಿದ್ಯುತ್ ಮತ್ತು ಸಬ್ಸಿಡಿ ಬೆಲೆಯಲ್ಲಿ ಹಿಟ್ಟು, ಅಕ್ಕಿ ಮತ್ತು ಬೇಳೆಕಾಳುಗಳನ್ನು ಒದಗಿಸಬೇಕೆಂದು ಅವರು ಒತ್ತಾಯಿಸುತ್ತಿದ್ದಾರೆ.

ಮೈಸೂರು ಮಿತ್ರ

ಬುಧವಾರ 10 ಜೂನ್ 2026

ರಾಜ್ಯಸಭೆಗೆ ಟಿಕೆಟ್ ತಪ್ಪಿಸಿ ಬಿಜೆಪಿಯಿಂದ ದೇವೇಗೌಡರಿಗೆ ಅವಮಾನ

●ರಾಜ್ಯ ಕಾಂಗ್ರೆಸ್ ವಕ್ತಾರ ಎಂ.ಲಕ್ಷ್ಮಣ್ ಆರೋಪ ●ಸಚಿವ ಸ್ಥಾನಕ್ಕಾಗಿ ಕುಮಾರಸ್ವಾಮಿ ಈ ವಿಷಯದಲ್ಲಿ ಮೌನ!

ಮೈಸೂರು,ಜೂ.9(ಎಂಟಿವೈ)– ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರನ್ನು ರಾಜ್ಯಸಭಾ ಚುನಾವಣೆಗೆ ಎನ್‌ಡಿಎ ಅಭ್ಯರ್ಥಿಯಾಗಿ ಕಣಕ್ಕಿಳಿಸದೇ ಬಿಜೆಪಿ ಅವಮಾನ ಮಾಡಿದೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆರೋಪಿಸಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎನ್‌ಡಿಎ ಅಭ್ಯರ್ಥಿಯಾಗಿ ಹೆಚ್.ಡಿ.ದೇವೇಗೌಡರನ್ನು ಆಯ್ಕೆ ಮಾಡುವ ನಿರೀಕ್ಷೆ ಇತ್ತು. ಕಳೆದ ಒಂದು ವರ್ಷದಿಂದ ಕಾಂಗ್ರೆಸ್ ಸರ್ಕಾರವನ್ನು ಟೀಕಿಸುವುದಕ್ಕೆ ಬಿಜೆಪಿ ದೇವೇಗೌಡರನ್ನು ಬಳಸಿಕೊಂಡಿತ್ತು. ಅಲ್ಲದೆ, ಪ್ರಧಾನಿ ನರೇಂದ್ರ ಮೋದಿಯವರನ್ನು ದೊಡ್ಡಗೌಡರು ನಿರಂತರವಾಗಿ ಹಾಡಿ–ಹೊಗಳಿದ್ದರು. ಆದರೂ ಇದೀಗ ರಾಜ್ಯಸಭೆ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ನೀಡದೇ ಜೆಡಿಎಸ್‌ಗೆ ಮರ್ಮಾಘಾತ ನೀಡಿದ್ದಾರೆ ಎಂದು ವಿಷಾದಿಸಿದರು.

ಇನ್ನಾದರೂ ಜೆಡಿಎಸ್, ಎನ್‌ಡಿಎ ಒಕ್ಕೂಟಕ್ಕೆ ಸೇರಿರುವ ನಿರ್ಧಾರವನ್ನು ಮರು ಪರಿಶೀಲಿಸಬೇಕು. ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಜೆಡಿಎಸ್ ಪಕ್ಷವನ್ನು ಬಿಜೆಪಿಗೆ ಅಡವಿಟ್ಟಿದ್ದಾರೆ. ಇನ್ನು ಮೂರೇ ತಿಂಗಳಲ್ಲಿ ಕುಮಾರಸ್ವಾಮಿ ಅವರನ್ನು ಮಂತ್ರಿ ಸ್ಥಾನದಿಂದ ಕೆಳಗಿಳಿಸುತ್ತಾರೆ. ಇವರಿಗೆ ದೇವೇಗೌಡರ ಗೌರವಕ್ಕಿಂತ ಸಚಿವ ಸ್ಥಾನವೇ ಹೆಚ್ಚಾಗಿರುವಂತೆ ಕಂಡು ಬರುತ್ತಿದೆ. ದೇವೇಗೌಡರಿಗೆ ರಾಜ್ಯಸಭೆಗೆ ಆಯ್ಕೆ ಮಾಡದ ಬಿಜೆಪಿ ನಡೆ ಖಂಡನಾರ್ಹ ಎಂದರು.



ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಎಸ್‌ಐಆರ್‌ನಲ್ಲಿ ಡಿಸಿ ಉತ್ತಮ ಕಾರ್ಯ: ಮೈಸೂರು ಜಿಲ್ಲೆಯಲ್ಲಿ ಎಸ್‌ಐಆರ್ ಪ್ರಕ್ರಿಯೆಯಲ್ಲಿ 3.48 ಲಕ್ಷ ಅನ್ ಮ್ಯಾಪಿಂಗ್ ಮಾಡಲಾಗಿತ್ತು. ಈಗ ಆ ಸಂಖ್ಯೆ 1 ಲಕ್ಷ ತಲುಪಿದೆ. ಆ ಸಂಖ್ಯೆಯನ್ನು ಕಡಿಮೆ ಮಾಡಬೇಕು. ಶೇ.96.36 ಮ್ಯಾಪಿಂಗ್ ಮುಗಿದಿದೆ. ಶೇ.99 ಮ್ಯಾಪಿಂಗ್ ಮಾಡಬೇಕು. ಜಿಲ್ಲಾಧಿಕಾರಿಗಳು ಉತ್ತಮ ಕೆಲಸ ಮಾಡಿದ್ದಾರೆ ಎಂದು ಪ್ರಸಂಶಿಸಿದರು.

ಎಸ್‌ಐಆರ್ ಮೂಲಕ ಹೆಸರು ಮತದಾರರ ಪಟ್ಟಿಯಲ್ಲಿ ಇಲ್ಲ ಎಂದರೆ ಸರ್ಕಾರದ ಸವಲತ್ತು ಸಿಗುವುದಿಲ್ಲ. ಯಾವುದೇ ಗ್ಯಾರಂಟಿ ಯೋಜನೆಗಳ ಸೌಲಭ್ಯ ಪಡೆಯಲು ಸಾಧ್ಯವಾಗುವುದಿಲ್ಲ. ಇದರಿಂದಾಗಿ ಮತದಾರರು ಎಸ್‌ಐಆರ್ ಆರಂಭವಾಗುವವರೆಗೆ ಮ್ಯಾಪಿಂಗ್ ಮಾಡಿಸಿಕೊಳ್ಳಬೇಕು ಎಂದು ಮನವಿ ಮಾಡಿದರು.

ರಾಜ್ಯದಲ್ಲಿ 5.56 ಕೋಟಿ ಮತದಾರರಿದ್ದಾರೆ. ಇದುವರೆಗೆ 34 ಜಿಲ್ಲೆಗಳಲ್ಲಿ 4.99 ಕೋಟಿ ಮತದಾರರ ಮ್ಯಾಪಿಂಗ್ ಮುಗಿದಿದೆ. ಇನ್ನು 56 ಲಕ್ಷ ಮತದಾರರು ಹೊರಗೆ ಉಳಿದಿದ್ದಾರೆ. ಉಳಿದವರ ಮ್ಯಾಪಿಂಗ್ ಪ್ರಕ್ರಿಯೆ ನಡೆಸಬೇಕು. ಇಲ್ಲದಿದ್ದರೆ ಚುನಾವಣಾ ಆಯೋಗ ನೇರ ಹೊಣೆ ಹೊರಬೇಕಾಗುತ್ತದೆ ಎಂದರು.

ಮೇಕೆದಾಟು ಯೋಜನೆಗೆ ಕೇಂದ್ರ ಅನುಮತಿ ಕೊಡುತ್ತಿಲ್ಲ

> ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಸರ್ಕಾರ ಬದ್ಧವಾಗಿದೆ. ತಮಿಳುನಾಡು ಪಾಲಿನ ನೀರನ್ನು ಬಿಡುವಂತೆ ಸುಪ್ರೀಂಕೋರ್ಟ್ ನಿರ್ದೇಶನವನ್ನು ಪಾಲಿಸಿದರೆ ಅಣೆಕಟ್ಟೆ ಕಟ್ಟಲು ಯಾವುದೇ ಸಮಸ್ಯೆ ಇಲ್ಲ. ಈಗ ಕೇಂದ್ರಕ್ಕೆ ಸಲ್ಲಿಸಿರುವ ವಿಸ್ತೃತ ಯೋಜನಾ ವರದಿಗೆ (ಡಿಪಿಆರ್) ಅನುಮತಿ ಸಿಗುತ್ತಿದ್ದಂತೆಯೇ ಕೆಲಸ ಆರಂಭವಾಗಲಿದೆ. ಆದರೆ, ಕೇಂದ್ರ ಸರ್ಕಾರ ಅನುಮತಿ ಕೊಡುತ್ತಿಲ್ಲ.
>
> –ಎಂ.ಲಕ್ಷ್ಮಣ್, ಕೆಪಿಸಿಸಿ ವಕ್ತಾರ

ಕೇಂದ್ರ ಲೋಪ ಪ್ರಸ್ತಾಪಿಸಿ: ರಾಜ್ಯ ಸರ್ಕಾರ ಆರ್ಥಿಕವಾಗಿ ದಿವಾಳಿಯಾಗಿದೆ ಎಂಬ ಸಂಸದ ಯದುವೀರ್ ಒಡೆಯರ್ ಹೇಳಿಕೆ ಖಂಡಿಸಿದ ಅವರು, ನೀಟ್ ವಿಚಾರದಲ್ಲಿ ದೇಶದಲ್ಲಿ ಲಕ್ಷಾಂತರ ವಿದ್ಯಾರ್ಥಿಗಳಿಗೆ ಅನ್ಯಾಯವಾಗಿದೆ. ದೇಶದ ಶಿಕ್ಷಣ ವ್ಯವಸ್ಥೆಯನ್ನೇ ಅಲ್ಲೋಲ ಕಲ್ಲೋಲ ಮಾಡಿದ್ದಾರೆ. ಉಳ್ಳವರಿಗೆ ಮಾತ್ರವೇ ಅಧಿಕಾರ ಪಡೆಯುವಂತಾಗಿದೆ. ಐದಾರು ಬಾರಿ ಗ್ಯಾಸ್ ಸಿಲಿಂಡರ್ ಬೆಲೆ ಏರಿಕೆಯಾಗಿದೆ. ಪೆಟ್ರೋಲ್, ಡೀಸೆಲ್ ಬೆಲೆ ಮೂರ್ನಾಲ್ಕು ಬಾರಿ ಏರಿಕೆ ಮಾಡಲಾಗಿದೆ. ರೈತರಿಗೆ ಸಮರ್ಪಕವಾಗಿ ರಸಗೊಬ್ಬರ ಸಿಗುತ್ತಿಲ್ಲ. ಇದರ ಬಗ್ಗೆಯೂ ಸಂಸದರು ಮಾತನಾಡಬೇಕು ಎಂದು ಆಗ್ರಹಿಸಿದರು.

ನೀವೇನು ಮಾಡಿದ್ದೀರಿ? :ಮಾಜಿ ಸಿಎಂ ಸಿದ್ದರಾಮಯ್ಯ ಅವರು ಎರಡನೇ ಅವಧಿಯ ಆಡಳಿತದಲ್ಲಿ ಮೂರೇ ವರ್ಷದಲ್ಲಿ ಮೈಸೂರು ನಗರಕ್ಕೆ 2600 ಕೋಟಿ ರೂ, ಹಾಗೂ ಮೈಸೂರು ಜಿಲ್ಲೆಗೆ 2500 ಕೋಟಿ ರೂ. ನೀಡಿದ್ದಾರೆ. ಆದರೆ, ಸಂಸದರು ಏನು ಮಾಡಿದ್ದೀರಿ ಎಂದು ಮೊದಲು ಜನರಿಗೆ ತಿಳಿಸಬೇಕು ಎಂದು ಒತ್ತಾಯಿಸಿದರು. ಈ ವೇಳೆ ಸುದ್ದಿಗೋಷ್ಠಿಯಲ್ಲಿ ಜಿ.ಪಂ. ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಕಾಂಗ್ರೆಸ್ ಜಿಲ್ಲಾ ವಕ್ತಾರ ಕೆ.ಮಹೇಶ್, ಸಾಮಾಜಿಕ ಜಾಲತಾಣದ ಅಧ್ಯಕ್ಷ ಹೇಮಂತ್ ಉಪಸ್ಥಿತರಿದ್ದರು.

ಹಿರಿಯ ದಲಿತ ಮುಖಂಡರ ಕಡೆಗಣನೆ ಖಂಡಿಸಿ ನಾಳೆ ಬೆಂಗಳೂರಲ್ಲಿ ಬೃಹತ್ ಸಮಾವೇಶ

ಮೈಸೂರು, ಜೂ.9(ಜಿಎ)–ಹಿರಿಯ ದಲಿತ ಮುಖಂಡರನ್ನು ಕಾಂಗ್ರೆಸ್ ಪಕ್ಷ ಕಡೆಗಣಿಸುತ್ತಿರುವುದನ್ನು ಖಂಡಿಸಿ ಜೂ.11 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಸಮಾವೇಶ ನಡೆಸಲಾಗುವುದು ಎಂದು ಮಾಜಿ ಮೇಯರ್ ಪುರುಷೋತ್ತಮ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಸಮಾವೇಶ ಕಾಂಗ್ರೆಸ್ ಧೋರಣೆಗೆ ಎಚ್ಚರಿಕೆಯ ಸಂದೇಶವಾಗಲಿದೆ. ನಾವೆಲ್ಲ ಯಾವುದೇ ಪಕ್ಷದಲ್ಲಿದ್ದರೂ ಪ್ರಜಾಪ್ರಭುತ್ವ, ಅಸಮಾನತೆ, ದಲಿತರಿಗೆ ಅನ್ಯಾಯದ ಪ್ರಶ್ನೆ ಬಂದಾಗ ಒಗ್ಗೂಡುತ್ತೇವೆ. ಹಳೇ ಮೈಸೂರು ಭಾಗಕ್ಕೆ ಓರ್ವ ದಲಿತರನ್ನು ಸಚಿವರನ್ನಾಗಿಸಬೇಕು, ಜಿಲ್ಲಾ ಉಸ್ತುವಾರಿ ನೀಡಬೇಕೆಂಬ ಕೂಗನ್ನು ಈ ಸರ್ಕಾರ ಕಡೆಗಣಿಸಿರುವುದು ಸರಿಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಹಿಂದೆ ಅವಕಾಶವಿದ್ದಾಗ ಡಾ.ಜಿ. ಪರಮೇಶ್ವರ್ ಅವರು ತಮ್ಮ ದಕ್ಷತೆ ತೋರಲಿಲ್ಲ. ಈಗ ನನಗೆ ಅನ್ಯಾಯ ಮಾಡಿದ್ದಾರೆ ಎಂದು ಹೇಳಿಕೆ ನೀಡುತ್ತಿದ್ದೀರಾ. ನೀವು 8 ವರ್ಷ ಕೆಪಿಸಿಸಿ ಅಧ್ಯಕ್ಷರಾಗಿದ್ದಾಗ ಯಾಕೆ ಮಾತನಾಡಲಿಲ್ಲ? ಸೋಲಿನ ಅರಿವು ಮೂಡುತ್ತಿದ್ದಂತೆ ಬೇರೆ ನಾಯಕರು ಹೇಗೆ ಮತ್ತೊಂದು ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸುತ್ತಾರೆ ಹಾಗೇ ನೀವು ಮತ್ತೊಂದು ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳಬೇಕಿತ್ತು. ನಿಮ್ಮಲ್ಲಿ ಆ ದಕ್ಷತೆ ಇರಲಿಲ್ಲವೇ ಎಂದು ಪ್ರಶ್ನಿಸಿ, ಪರಮೇಶ್ವರ್ ಅವರ ಮೌಲ್ಯ ಈಗ ಅಪಮೌಲ್ಯವಾಗಿದೆ. ಅವರ ಸ್ವಾರ್ಥದಿಂದ ದಲಿತ ಸಮುದಾಯ ತಲೆ ತಗ್ಗಿಸುವ ಹಂತಕ್ಕೆ ತಲುಪಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಈ ವೇಳೆ ಸುದ್ದಿಗೋಷ್ಠಿಯಲ್ಲಿ ಮಹೇಶ್, ನಾಗರಾಜ್, ರಮೇಶ್, ಪುಟ್ಟರಾಜು, ಮಂಜು ಉಪಸ್ಥಿತರಿದ್ದರು.



> ದಲಿತ ಸಮುದಾಯದ ಪರವಾಗಿ ಬೇರೆಡೆ ಸಮುದಾಯದ ನಾಯಕರಿಗೆ ಸಚಿವ ಸ್ಥಾನ ನೀಡಲಾಗಿದೆ. ಆದರೆ, ಮೈಸೂರು ಭಾಗದ ನಾಯಕರನ್ನು ಆಯ್ಕೆ ಮಾಡಿಲ್ಲ. ಈ ಭಾಗದ ಪ್ರಮುಖ ನಾಯಕರಾದ ಡಾ.ಹೆಚ್.ಸಿ.ಮಹದೇವಪ್ಪ ಅವರನ್ನು ಪರಿಗಣಿಸಬೇಕಾಗಿತ್ತು. ಅವರನ್ನು ಕಡೆಗಣಿಸುವುದು ಖಂಡನೀಯ. ಇದರಿಂದ ಹಳೇ ಮೈಸೂರು ಭಾಗದಲ್ಲಿ ಸಮುದಾಯಕ್ಕೆ ಪ್ರಾತಿನಿಧ್ಯ ಇಲ್ಲವಾಗುತ್ತದೆ. ಡಿ.ಕೆ.ಶಿವಕುಮಾರ್ ಅವರ ಸರ್ಕಾರ ಸುಸೂತ್ರವಾಗಿ ನಡೆಯಬೇಕೆಂದರೆ ದಲಿತರನ್ನು ಅಗೌರವದಿಂದ ನಡೆಸಿಕೊಳ್ಳಬಾರದು. –ಪುರುಷೋತ್ತಮ್

ಮೈಸೂರು ನಾರಾಯಣ ಆಸ್ಪತ್ರೆಯಲ್ಲಿ ಕಾರ್ಟಿಲೇಜ್‌ಗೆ ಅತ್ಯಾಧುನಿಕ ಚಿಕಿತ್ಸೆ ವ್ಯವಸ್ಥೆ

ಮೈಸೂರು, ಜೂ.9(ಜಿಎ)–ಮೈಸೂರಿನ ನಾರಾಯಣ ಆಸ್ಪತ್ರೆಯು ಕೀಲು ಮೃದ್ವಸ್ಥಿಯ (ಕಾರ್ಟಿಲೇಜ್) ಹಾನಿಗೆ ನೀಡಲಾಗುವ ಅತ್ಯಾಧುನಿಕ ರೀಜನರೇಟಿವ್ ಚಿಕಿತ್ಸಾ ಪದ್ಧತಿಯಾದ 'ಹೈಲೋ ಫಾಸ್ಟ್' ತಂತ್ರಜ್ಞಾನವನ್ನು ಪರಿಚಯಿಸಿದ್ದು, ಮಂಡಿ ನೋವು, ಕೀಲುಗಳ ಗಾಯ ಮತ್ತು ಆರಂಭಿಕ ಹಂತದ ಕೀಲು ಸವೆತದ ಸಮಸ್ಯೆಗಳಿಂದ ಬಳಲುತ್ತಿರುವ ರೋಗಿಗಳಿಗೆ ಅತ್ಯಾಧುನಿಕ ವೈದ್ಯಕೀಯ ಚಿಕಿತ್ಸೆ ಕಲ್ಪಿಸುತ್ತಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ನಾರಾಯಣ ಆಸ್ಪತ್ರೆಯ ಮೂಳೆ ಶಸ್ತ್ರಚಿಕಿತ್ಸಕ ಡಾ.ಉಮೇಶ್ ಚೌಡಯ್ಯ ಮಾತನಾಡಿ, ಮೃದ್ವಸ್ಥಿಯ ಹಾನಿಯು ಸಾಮಾನ್ಯವಾಗಿ ಅಪಘಾತಗಳು, ಕ್ರೀಡಾ ಚಟುವಟಿಕೆಗಳ ನಡುವೆ ಉಂಟಾಗುವ ಗಾಯಗಳು ಮತ್ತು ವಯಸ್ಸಾಗುವಿಕೆಯಿಂದ ಸಂಭವಿಸುತ್ತದೆ. ಇದರೊಂದಿಗೆ ಅಂಗಾಂಶಗಳ ಸಾಮಾನ್ಯ ಸವೆತವೂ ಇದಕ್ಕೆ ಕಾರಣವಾಗಿದ್ದು, ಇದು ತೀವ್ರ ನೋವು, ಕೀಲುಗಳ ಬಿಗಿತ, ಬಾತುಕೊಳ್ಳುವಿಕೆ ಮತ್ತು ಕೀಲುಗಳ ಮುಕ್ತ ಚಲನೆ ಕಡಿಮೆಯಾಗಲು ಕಾರಣವಾಗುತ್ತದೆ ಎಂದರು.

ಈ ರೀತಿ ದೀರ್ಘಕಾಲದ ಮಂಡಿ ನೋವಿನಿಂದ ಬಳಲುತ್ತಿರುವ ಜನರು, ಇದು ವಯಸ್ಸಾಗುವಿಕೆಯ ಒಂದು ಸಾಮಾನ್ಯ ಪ್ರಕ್ರಿಯೆ ಎಂದು ಅಥವಾ ತಾವು ಗಾಯದಿಂದ ಚೇತರಿಸಿಕೊಳ್ಳುತ್ತಿರುವ ಹಂತ ಎಂದು ನಂಬಿ ಸುಮ್ಮನಿರುತ್ತಾರೆ. ಆದರೆ ವಾಸ್ತವ ಸಂಗತಿ, ಮೃದ್ವಸ್ಥಿಗೆ (ಕಾರ್ಟಿಲೇಜ್) ಆಗಿರುವ ಹಾನಿಗೆ ಚಿಕಿತ್ಸೆ ನೀಡದೆ ಹಾಗೇ ಬಿಟ್ಟರೆ, ಅದು ಕಾಲಾನಂತರದಲ್ಲಿ ಅವರ ಮುಕ್ತ ಚಲನವಲನದ ಸಾಮರ್ಥ್ಯಕ್ಕೆ ಅಡ್ಡಿಪಡಿಸಲು ಪ್ರಾರಂಭಿಸುತ್ತದೆ. ಹೈಲೋ ಫಾಸ್ಟ್ ತಂತ್ರ ಜ್ಞಾನವು ನಮಗೆ ಆರಂಭಿಕ ಹಂತಗಳಲ್ಲೇ ಮಧ್ಯಪ್ರವೇಶಿಸಿ ಚಿಕಿತ್ಸೆ ನೀಡುವ ಅವಕಾಶವನ್ನು ಒದಗಿಸುತ್ತದೆ, ಇದು ನಮ್ಮ ರೋಗಿಗಳು ತಮ್ಮ ಮಂಡಿ ಕೀಲುಗಳಿಗೆ ಯಾವುದೇ ಧಕ್ಕೆ ಉಂಟಾಗದಂತೆ ಸಾಮಾನ್ಯ ಚಲನವಲನವನ್ನು ಮರಳಿ ಪಡೆಯಲು ಅನುವು ಮಾಡಿಕೊಡುತ್ತದೆ ಎಂದು ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಾರಾಯಣ ಆಸ್ಪತ್ರೆಯ ಮೂಳೆ ಶಸ್ತ್ರಚಿಕಿತ್ಸಕ ಡಾ.ಉಮೇಶ್ ಚೌಡಯ್ಯ ಮಾತನಾಡಿದರು.

ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಅಶೋಕ್ ಮಾತನಾಡಿ, ಇಂತಹ ಚಿಕಿತ್ಸೆಗಳಿಗಾಗಿ ರೋಗಿಗಳು ದೊಡ್ಡ ನಗರಗಳಿಗೆ ಹೋಗಬೇಕಾಗಿತ್ತು. ಮಂಡಿ ಕೀಲುಗಳಿಗೆ ಮತ್ತಷ್ಟು ಹಾನಿಯಾಗುವುದನ್ನು ತಡೆಯಲು ಮತ್ತು ಸುಲಭವಾಗಿ ಚಲನವಲನ ಹೆಚ್ಚಿಸಲು ಸುದೀರ್ಘ ಮಂಡಿ ನೋವಿನ ಆರಂಭಿಕ ಪತ್ತೆ ಮತ್ತು ಚಿಕಿತ್ಸೆ ಅತ್ಯಂತ ಪ್ರಮುಖವಾಗಿದೆ. ಈ ಸುರಕ್ಷಿತ ಮತ್ತು ಸುಧಾರಿತ ಚಿಕಿತ್ಸಾ ಪದ್ಧತಿಯು ಈಗ ಮೈಸೂರಿನಲ್ಲೇ ಲಭ್ಯವಿದೆ. ಇಂದು ಆರೋಗ್ಯ ಸೇವೆ ಎಂದರೆ ಕೇವಲ ರೋಗಗಳಿಗೆ ಚಿಕಿತ್ಸೆ ನೀಡುವುದಲ್ಲ, ಜನರು ತಮ್ಮ ಜೀವನದ ಗುಣಮಟ್ಟ ಮತ್ತು ಸ್ವಾತಂತ್ರ್ಯ ಕಾಪಾಡಿಕೊಳ್ಳಲು ಸಹಾಯ ಮಾಡುವುದು ಎಂದರು.

ಮೈಸೂರಲ್ಲಿ ರೈಲ್ವೆ ಲೆವೆಲ್ ಕ್ರಾಸಿಂಗ್ ಜಾಗೃತಿ ದಿನಾಚರಣೆ

ಮೈಸೂರು, ಜೂ.9(ಬಿಎಲ್‌ಯು)– ರೈಲ್ವೆ ಇಲಾಖೆಯು ಮೈಸೂರಿನಲ್ಲಿ ಮಂಗಳವಾರ ಅಂತರಾಷ್ಟ್ರೀಯ ರೈಲ್ವೆ ಲೆವೆಲ್ ಕ್ರಾಸಿಂಗ್ ಜಾಗೃತಿ ದಿನವನ್ನು ಅರ್ಥಪೂರ್ಣವಾಗಿ ಆಚರಿಸಿತು.

ನಗರದ ಅಶೋಕಪುರಂನ ರೈಲ್ವೆ ನಿಲ್ದಾಣಗಳ ನಡುವಿನ ಲೆವೆಲ್ ಕ್ರಾಸಿಂಗ್ ಗೇಟ್ ಬಳಿ ವಿಶೇಷ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಲೆವೆಲ್ ಕ್ರಾಸಿಂಗ್‌ನಲ್ಲಿ ಜನರು ಸುರಕ್ಷಿತವಾಗಿ ಸಂಚರಿಸುವುದು ಹಾಗೂ ಸುರಕ್ಷಿತಾ ನಿಯಮಗಳ ಉಲ್ಲಂಘನೆಯಿಂದ ಸಂಭವಿಸುವ ಅಪಘಾತಗಳನ್ನು ತಡೆಗಟ್ಟುವ ಕುರಿತಂತೆ ಜನರಲ್ಲಿ ಪರಿಣಾಮಕಾರಿ ಅರಿವು ಮೂಡಿಸಲಾಯಿತು.

ಈ ವೇಳೆ ಮಾತನಾಡಿದ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಮುದಿತ್ ಮಿತ್ತಲ್ ಅವರು, ರೈಲ್ವೆ ಲೆವೆಲ್ ಕ್ರಾಸಿಂಗ್‌ಗಳಲ್ಲಿ ಸುರಕ್ಷತೆ ಕೇವಲ ರೈಲ್ವೆ ಇಲಾಖೆಯ ಜವಾಬ್ದಾರಿ ಅಲ್ಲ. ಬದಲಿಗೆ ಸಾರ್ವಜನಿಕರ ಸಹಭಾಗಿತ್ವದ ಜವಾಬ್ದಾರಿ ಕೂಡ ಆಗಿದೆ. ಲೆವೆಲ್ ಕ್ರಾಸಿಂಗ್ ದಾಟುವಾಗ ಜನರು ಎಚ್ಚರಿಕೆಯಿಂದ ಇರಬೇಕು. ಸುರಕ್ಷತಾ ನಿಯಮಗಳನ್ನು ಪಾಲಿಸಬೇಕು ಎಂದು ಸಲಹೆ ನೀಡಿದರು.

ಯಾವುದೇ ಕಾರಣಕ್ಕೂ ರೈಲು ಬರುವಾಗ ಹಳಿ ದಾಟುವ ಸಾಹಸ ಮಾಡಬಾರದು. ರೈಲು ದೂರದಲ್ಲಿದೆ ಎಂದು ಹಳಿ ದಾಟುವುದು ಅಪಾಯಕಾರಿ. ಹಳಿ ದಾಟುವಾಗ ಮೊಬೈಲ್ ಫೋನ್ ಬಳಸಬಾರದು ಎಂದು ರೈಲ್ವೆ ಅಧಿಕಾರಿಗಳು ಎಚ್ಚರಿಸಿದರು. ಈ ವೇಳೆ ರೈಲ್ವೆ ಅಧಿಕಾರಿಗಳು, ಸಿಬ್ಬಂದಿಗಳು, ಸ್ಕೌಟ್ಸ್ ಅಂಡ್ ಗೈಡ್ಸ್ ವಿದ್ಯಾರ್ಥಿಗಳು ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



ಅಂತರಾಷ್ಟ್ರೀಯ ಲೆವೆಲ್ ಕ್ರಾಸಿಂಗ್ ಜಾಗೃತಿ ದಿನಾಚರಣೆ ಅಂಗವಾಗಿ ಮೈಸೂರಿನ ಅಶೋಕಪುರಂನ ರೈಲ್ವೆ ನಿಲ್ದಾಣಗಳ ನಡುವಿನ ಲೆವೆಲ್ ಕ್ರಾಸಿಂಗ್ ಗೇಟ್ ಬಳಿ ಮಂಗಳವಾರ ರೈಲ್ವೆ ಇಲಾಖೆಯಿಂದ ಜಾಗೃತಿ ಕಾರ್ಯಕ್ರಮ ನಡೆಯಿತು.

ಪುಸ್ತಕ ಬಿಡುಗಡೆ

ಮೈಸೂರು,ಜೂ.9– ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಮಾಜಿ ಉಪಕುಲಪತಿ ಡಾ.ಎನ್.ಎಸ್. ರಾಮೇಗೌಡ ವಿರಚಿತ 'ಶಿಕ್ಷಣ: ಔಪಚಾರಿಕ ಮುಕ್ತ ಮತ್ತು ದೂರ ಶಿಕ್ಷಣದ ಅವಲೋಕನ' ಪುಸ್ತಕ ಬಿಡುಗಡೆ ಸಮಾರಂಭವನ್ನು ಜೂ.20 ರಂದು ಕೆಎಸ್ಓಯುನ ಘಟಿಕೋತ್ಸವ ಸಭಾಂಗಣದಲ್ಲಿ ಬೆಳಗ್ಗೆ 11 ಗಂಟೆಗೆ ಆಯೋಜಿಸಲಾಗಿದೆ.

ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧಿಪತಿ ಶ್ರೀ ಡಾ.ನಿರ್ಮಲಾನಂದನಾಥ ಮಹಾಸ್ವಾಮೀಜಿ, ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಶ್ರೀ ಸ್ವಾಮಿ ಮುಕ್ತಿದಾನಂದ ಜಿ ಮಹಾರಾಜ್ ದಿವ್ಯ ಸಾನಿಧ್ಯ ವಹಿಸಲಿದ್ದಾರೆ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕೃತಿ ಲೋಕಾರ್ಪಣೆ ಮಾಡಲಿದ್ದಾರೆ ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ರಾಷ್ಟ್ರಮಟ್ಟದ ವಿಚಾರ ಸಂಕಿರಣ, ಗ್ರಂಥ ಬಿಡುಗಡೆ

ಮೈಸೂರು,ಜೂ.9– ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯವಿದ್ಯಾ ಸಂಶೋಧನಾಲಯ, ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾನಿಲಯ, ನವದೆಹಲಿ, ವ್ಯಾಸತೀರ್ಥ ಸಂಶೋಧನಾ ಪ್ರತಿ ಷ್ಠಾನಮ್ ಮೈಸೂರು ವತಿಯಿಂದ ' ದರ್ಶನೇಷು ಖ್ಯಾತಿಸ್ವರೂಪ ವಿಮರ್ಶಃ' ಎಂಬ ವಿಚಾರ ಕುರಿತ ಎರಡು ದಿನಗಳ ರಾಷ್ಟ್ರಮಟ್ಟದ ವಿಚಾರ ಸಂಕಿರಣವನ್ನು ಜೂ.12, 13ರಂದು ಮೈಸೂರು ವಿವಿಯ ಪ್ರಾಚ್ಯ ವಿದ್ಯಾ ಸಂಶೋಧನಾಲಯದ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಗ್ರಂಥ ಬಿಡುಗಡೆ: ಕಾರ್ಯಕ್ರಮದಲ್ಲಿ 'ವೇದಾಂತ ಸಿದ್ಧಾಂತ ಮುಕ್ತಾವಲೀ ಸಮಯೋಚಿತಪದ್ಯಮಾಲಿಕಾ ಗ್ರಹಾರತ್ನ ಮಾಲಿಕಾ' ಮತ್ತು 'ಕುವಲಯೋಲ್ಲಾಸ ಸಹಿತಾ ತರ್ಕಸಂಗ್ರಹಚಂದ್ರೀಕಾ' ಎಂಬ ಗ್ರಂಥಗಳ ಬಿಡುಗಡೆ ಸಮಾರಂಭ ನಡೆಯಲಿದೆ. ಕಾರ್ಯಕ್ರಮವನ್ನು ಶ್ರೀ ಉತ್ತರಾದಿ ಮಠದ ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಸ್ವಾಮೀಜಿ ಉದ್ಘಾಟಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ನವದೆಹಲಿ ಕೇಂದ್ರೀಯ ಸಂಸ್ಕೃತ ವಿವಿಯ ಕುಲಪತಿ ಪ್ರೊ.ಶ್ರೀನಿವಾಸ ವರಖೇಡಿ ಸೇರಿದಂತೆ ದೇಶದ ಅತ್ಯುನ್ನತ ವಿದ್ವಾಂಸರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ವಿಶ್ವ ಪರಿಸರ ದಿನಾಚರಣೆ...




ಮೈಸೂರಿನ ನಿವೇದಿತಾನಗರದಲ್ಲಿರುವ ಆಕ್ಮಿ ಶಾಲೆಯಲ್ಲಿ ವಿಶ್ವ ಪರಿಸರ ದಿನ ಆಚರಿಸಲಾಯಿತು. ಈ ವೇಳೆ ಪ್ರಾಂಶುಪಾಲರಾದ ಶ್ವೇತಾ ಚವಾಣ್, ಯೋಗೇಂದ್ರ, ಸಂಸ್ಥೆ ಅಧ್ಯಕ್ಷ ಡಾ.ಸಿ.ಶರತ್‌ಕುಮಾರ್, ಸಂಸ್ಥಾಪಕರಾದ ಆರ್.ಅರುಣ್‌ಸಿಂಗ್, ಸಹ ಸಂಸ್ಥಾಪಕರಾದ ಆರ್.ಸುಭಾಷಿಣಿ ಮತ್ತಿತರರಿದ್ದರು.

ಅಂತಾರಾಷ್ಟ್ರೀಯ ಯೋಗ: ಆಯುಷ್‌ನಿಂದ 'ನಿತ್ಯಯೋಗ' ಆಯೋಜನೆ

ಮೈಸೂರು,ಜೂ.9(ಎಂಟಿವೈ)– ಅಂತಾರಾಷ್ಟ್ರೀಯ ಯೋಗ ದಿನದ ಹಿನ್ನೆಲೆಯಲ್ಲಿ ಈ ಸಾಲಿನಿಂದ ವರ್ಷವಿಡೀ ಯೋಗಾಭ್ಯಾಸ ಪ್ರೇರೇಪಿಸಲು ಕೇಂದ್ರದ ಆಯುಷ್ ಸಚಿವಾಲಯ 'ನಿತ್ಯಯೋಗ' ವಿನೂತನ ಕಾರ್ಯಕ್ರಮವನ್ನು ಆಯೋಜಿಸಲು ನಿರ್ಧರಿಸಿದ್ದು, ರಾಜ್ಯದ ಎಲ್ಲ ಜಿಲ್ಲೆಗಳ ಆಯುಷ್ ಅಧಿಕಾರಿಗಳಿಗೆ ಕಾರ್ಯಕ್ರಮ ಅನುಷ್ಠಾನಗೊಳಿಸಲು ಸೂಚನೆ ನೀಡಿದೆ.

ಜೂ.21ರಂದು ಅಂತರರಾಷ್ಟ್ರೀಯ ಯೋಗ ದಿನ ಆಚರಿಸಲಾಗುತ್ತಿದ್ದು, ಅದಕ್ಕೆ ಎಲ್ಲೆಡೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಆಯುಷ್ ಇಲಾಖೆ ಈಗಾಗಲೇ ತಿಂಗಳುದ್ದಕ್ಕೂ ಯೋಗ ಚಟುವಟಿಕೆ ಆಯೋಜಿಸುವ ಮೂಲಕ ಅಂತರರಾಷ್ಟ್ರೀಯ ಯೋಗ ದಿನಾಚರಣೆಗೆ ಪ್ರಚಾರ ನಡೆಸುತ್ತಿದೆ. ಕೇಂದ್ರ ಆಯುಷ್ ಸಚಿವಾಲಯವು ಕೊಪ್ಪಳ ಜಿಲ್ಲೆಯ ಯೋಗಭಾರತ 365 ಕಾರ್ಯಕ್ರಮದ ಮಾದರಿಯಲ್ಲಿ 'ನಿತ್ಯ ಯೋಗ' ಯೋಜನೆಯನ್ನು ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಜಾರಿಗೊಳಿಸಲು ಸೂಚನೆ ನೀಡಿದೆ. ಆಯುಷ್ ವೈದ್ಯರು ಗೂಗಲ್ ಮೀಟ್, ಜೂಮ್ ಸೇರಿದಂತೆ ವಿವಿಧ ಡಿಜಿಟಲ್ ವೇದಿಕೆಗಳನ್ನು ಬಳಸಿ ಸ್ಥಳೀಯ ಯೋಗ ಸಂಸ್ಥೆಗಳ ತರಬೇತುದಾರರು ಹಾಗೂ ಆಯುಷ್ಮಾನ್ ಆರೋಗ್ಯ ಮಂದಿರದ ಯೋಗ ತರಬೇತುದಾರರ ಸಹಕಾರದೊಂದಿಗೆ ನಿತ್ಯ ಯೋಗಾಭ್ಯಾಸ ತರಗತಿಗಳನ್ನು ಆಯೋಜಿಸಲಿದ್ದಾರೆ.

ಈ ಕುರಿತು ಜಿಲ್ಲಾ ಆಯುಷ್ ಅಧಿಕಾರಿ ಡಾ.ರೇಣುಕಾದೇವಿ ಮಾತನಾಡಿ, ಈ ಕಾರ್ಯಕ್ರಮವು ಜೂ.22ರಿಂದ 2027ರ ಜೂ.21ರವರೆಗೆ ರಾಜ್ಯಾದ್ಯಂತ ಏಕಕಾಲದಲ್ಲಿ ಅನುಷ್ಠಾನಗೊಳ್ಳಲಿದೆ. ಪ್ರತಿಯೊಂದು ಜಿಲ್ಲಾ ಸಮಿತಿಯು ಏಳು ದಿನಗಳ ಕಾಲ ಕಾರ್ಯಕ್ರಮ ನಿರ್ವಹಿಸಲಿದ್ದು, ಪಾಳಿಯ ಆಧಾರದಲ್ಲಿ ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಕಾರ್ಯಕ್ರಮ ನಡೆಯಲಿದೆ. ಸಾರ್ವಜನಿಕ ಆರೋಗ್ಯ ಕಾಪಾಡುವುದನ್ನು ಗಮನದಲ್ಲಿಟ್ಟುಕೊಂಡು ಪ್ರತಿಯೊಬ್ಬರೂ ಯೋಗದಲ್ಲಿ ಪಾಲ್ಗೊಳ್ಳುವಂತೆ ಪ್ರೇರಣೆ ನೀಡಲು ಮೊದಲ ಬಾರಿಗೆ ಕೇಂದ್ರ ಸಚಿವಾಲಯ ರಾಜ್ಯದಲ್ಲಿ 'ನಿತ್ಯಯೋಗ' ಕಾರ್ಯಕ್ರಮ ಜಾರಿಗೊಳಿಸುವಂತೆ ಸೂಚನೆ ನೀಡಿದ್ದು, ಅದರಂತೆ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.



ವರ್ಷವಿಡೀ ಯೋಗಕ್ಕೆ ಉತ್ತೇಜನ ನೀಡುವ ವಿನೂತನ ಕಾರ್ಯಕ್ರಮ

'ನಿತ್ಯ ಯೋಗ' ಕಾರ್ಯಕ್ರಮವು ಒಂದು ಗಂಟೆಯ ಕಾರ್ಯಕ್ರಮವಾಗಿದ್ದು, 45 ನಿಮಿಷಗಳ ಯೋಗ ತರಬೇತಿ ಹಾಗೂ 15 ನಿಮಿಷಗಳ ನುರಿತ ವೈದ್ಯರಿಂದ ಆರೋಗ್ಯಕ್ಕೆ ಸಂಬಂಧಿಸಿದ ಉಪನ್ಯಾಸ ಆಯೋಜಿಸಲಾಗುವುದು. ಬೆಳಗ್ಗೆ 5.30ರಿಂದ 6.30ರವರೆಗೆ ಈ ಕಾರ್ಯಕ್ರಮವನ್ನು ಆಯೋಜಿಸಲಾಗುವುದು.ಯೋಗ ಮತ್ತು ಪ್ರಕೃತಿ ಚಿಕಿತ್ಸೆ ವೈದ್ಯರು ಈ ಕಾರ್ಯಕ್ರಮವನ್ನು ತಮ್ಮ ಸಂಸ್ಥೆಯ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸಲು ಸೂಚಿಸಿದೆ.

ಉತ್ತಮ ಜಿಲ್ಲೆಗೆ ಪುರಸ್ಕಾರ: ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದ ಜಿಲ್ಲೆಗೆ ವಿಶೇಷ ಪ್ರೋತ್ಸಾಹಕರ ಪುರಸ್ಕಾರ ನೀಡಲು ಆಯುಷ್ ಇಲಾಖೆ ನಿರ್ಧರಿಸಿದೆ. ಇದರಿಂದ ಸಾರ್ವಜನಿಕರಲ್ಲಿ ಯೋಗಾಭ್ಯಾಸದ ಬಗ್ಗೆ ಹೆಚ್ಚಿನ ಜಾಗೃತಿ ಮೂಡಿಸುವ ಜೊತೆಗೆ ಆರೋಗ್ಯಕರ ಜೀವನಶೈಲಿಗೆ ಉತ್ತೇಜನ ಸಿಗಲಿದೆ ಎಂಬ ನಿರೀಕ್ಷೆ ವ್ಯಕ್ತವಾಗಿದೆ.

ಜಿಲ್ಲಾ ಮಟ್ಟದಲ್ಲಿ ಸಮಿತಿ ರಚನೆ

ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ನಡೆಸಲು ಹಾಗೂ ಪ್ರತಿನಿತ್ಯ ಆಯೋಜನೆಗೆ ಅನುಕೂಲವಾಗುವಂತೆ ಜಿಲ್ಲಾ ಮಟ್ಟದಲ್ಲಿ ಆಯುಷ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಾಲ್ಕು ಸದಸ್ಯರ ಸಮಿತಿ ರಚಿಸಲು ಸೂಚಿಸಲಾಗಿದೆ. ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದರೆ ಅವರಿಗೆ ಆದ್ಯತೆ ನೀಡಿ ಸಮಿತಿಯಲ್ಲಿ ಸದಸ್ಯರಾಗಿ ನೇಮಕ ಮಾಡುವಂತೆ ಸೂಚಿಸಲಾಗಿದೆ.

ವಸತಿ, ನಿವೇಶನರಹಿತರ ಸಮೀಕ್ಷೆಗೆ ಅರ್ಜಿ ಆಹ್ವಾನ

ಮೈಸೂರು,ಜೂ.9–ರಾಜೀವ್ ಗಾಂಧಿ ವಸತಿ ನಿಗಮದ ಸೂಚನೆಯಂತೆ ಪ್ರಧಾನ ಮಂತ್ರಿ ಅವಾಸ್ ಯೋಜನೆ (ನಗರ) ಜಿಲ್ಲೆಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ವಸತಿ ಸೌಲಭ್ಯ ಕಲ್ಪಿಸುವ ಸಲುವಾಗಿ ವಸತಿರಹಿತ ಹಾಗೂ ನಿವೇಶನ ರಹಿತರ ಸಮೀಕ್ಷೆಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಜೂ.30ರವರೆಗೆ ಕಾಲಾವಕಾಶ ನೀಡಿದ್ದು, ಯೋಜನೆಯಡಿ ಇದುವರೆಗೂ ಯಾವುದೇ ವಸತಿ ಯೋಜನೆಯಡಿ ಸೌಲಭ್ಯ ಪಡೆಯದೇ ಇರುವ ವಸತಿರಹಿತರು (ನಿವೇಶನ/ಹಳೆಯ ಕಚ್ಚಾ ಮನೆ ಉಳ್ಳವರು) ಹಾಗೂ ನಿವೇಶನ ರಹಿತ ಮಹಿಳೆಯರು, ಹಿರಿಯ ನಾಗರಿಕರು, ವಿಧುರರು, ವಿಶೇಷಚೇತನರು, ಮಾಜಿ ಸೈನಿಕರು ಅರ್ಜಿ ಸಲ್ಲಿಸಬಹುದು. ಅರ್ಜಿದಾರರ ಫೋಟೋ, ಆಧಾರ್ ಕಾರ್ಡ್, ರೇಷನ್ ಕಾರ್ಡ್, ಜಾತಿ & ಆದಾಯ ಪ್ರಮಾಣ ಪತ್ರ, ಚುನಾವಣಾ ಗುರುತಿನ ಚೀಟಿ, ಬ್ಯಾಂಕ್ ಪಾಸ್ ಪುಸ್ತಕ, ಕುಟುಂಬದ ಸದಸ್ಯರ ಆಧಾರ್ ಕಾರ್ಡ್‌ಗಳು, ದಾಖಲೆಗಳೊಂದಿಗೆ ಮನೆ ನಿವೇಶನ, ಹಳೆಯ ಕಚ್ಚಾ https/pmay.urban.gov.inನಲ್ಲಿ ಸ್ವಂತವಾಗಿ, ಗ್ರಾಹಕ ಸೇವಾ ಕೇಂದ್ರಗಳಲ್ಲಿ, ನಗರ ಸ್ಥಳೀಯ ಸಂಸ್ಥೆಗಳಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ನಗರ ಸ್ಥಳೀಯ ಸಂಸ್ಥೆಗಳ ವಸತಿ ಶಾಖೆ ಸಂಪರ್ಕಿಸಬಹುದು.

ದೇಶ - ವಿದೇಶ

ಕೇರಳದಲ್ಲಿ ಶೀಗೆಲ್ಲಾ ವೈರಸ್‌ಗೆ ಮಗು ಬಲಿ; ಹಲವರಿಗೆ ಸೋಂಕು ಶಂಕೆ



ಕೇರಳ: ನೆರೆ ರಾಜ್ಯ ಕೇರಳದಲ್ಲಿ ಶೀಗೆಲ್ಲಾ ಸೋಂಕಿಗೆ 4 ವರ್ಷದ ಮಗು ಸಾವನ್ನಪ್ಪಿರುವುದಾಗಿ ವರದಿಯಾಗಿದೆ. ಮಗು ಸಾವಿನ ಬೆನ್ನಲ್ಲೇ, 440ಕ್ಕೂ ಅಧಿಕ ಮಂದಿ ಶಂಕಿತ ಸೋಂಕಿತರನ್ನು ಆಸ್ಪತ್ರೆಗೆ ದಾಖಲಿಸಿ ತುರ್ತು ಚಿಕಿತ್ಸೆ ನೀಡಲಾಗುತ್ತಿದೆ. ವಯನಾಡ್ ಜಿಲ್ಲೆಯ ಸುಲ್ತಾನ್ ಬತ್ತೇರಿ ವ್ಯಾಪ್ತಿಯ ನೆನ್ಮೇನಿ ಪಂಚಾಯತ್ ಮತ್ತು ಸುತ್ತಮುತ್ತಲಿನ ಪ್ರದೇಶ ಹಾಗೂ ಕೋಜಿಕ್ಕೋಡ್ ಜಿಲ್ಲೆಗಳಲ್ಲಿ ಕೆಲ ಭಾಗಗಳಲ್ಲಿ ಸೋಂಕು ವ್ಯಾಪಿಸಿದೆ. ಈ ಹಿನ್ನೆಲೆಯಲ್ಲಿ, ಆರೋಗ್ಯ ಇಲಾಖೆ ಮತ್ತು ಜಿಲ್ಲಾಡಳಿತ ಜಂಟಿಯಾಗಿ ಹೈ ಅಲರ್ಟ್ ಘೋಷಿಸಿವೆ. ಮುಂಜಾಗ್ರತಾ ಕ್ರಮಗಳನ್ನು ತೀವ್ರಗೊಳಿಸಿದ್ದು, ಸದ್ಯಕ್ಕೆ ಪರಿಸ್ಥಿತಿ ನಿಯಂತ್ರಣದಲ್ಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಳೆದ ವಾರ ಸುಲ್ತಾನ್ ಬತ್ತೇರಿಯ ಶಾಲೆಯೊಂದರ ವಿದ್ಯಾರ್ಥಿಗಳಲ್ಲಿ ವಾಂತಿ, ಭೇದಿ ಮತ್ತು ಜ್ವರ ಕಾಣಿಸಿಕೊಂಡಾಗ ಈ ಸೋಂಕು ಮೊದಲ ಬಾರಿಗೆ ಬೆಳಕಿಗೆ ಬಂದಿತು. ವೈದ್ಯಕೀಯ ತಪಾಸಣೆಯಲ್ಲಿ ಇಬ್ಬರು ಮಕ್ಕಳಿಗೆ ಶಿಗೆಲ್ಲಾ ಸೋಂಕು ಇರುವುದು ದೃಢಪಟ್ಟ ಬಳಿಕ 337 ವಿದ್ಯಾರ್ಥಿಗಳು ಸೇರಿ ಒಟ್ಟು 443 ಮಂದಿ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕೆಲವು ಮಕ್ಕಳಲ್ಲಿ ರೋಗಲಕ್ಷಣಗಳು ಮರುಕಳಿಸುತ್ತಿರುವುದರಿಂದ ಮತ್ತೆ ಆಸ್ಪತ್ರೆಗಳಿಗೆ ದಾಖಲಾಗುತ್ತಿದ್ದಾರೆ. ಹೀಗಾಗಿ ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಅಗತ್ಯ ಔಷಧಿಗಳ ದಾಸ್ತಾನು ಇಟ್ಟುಕೊಳ್ಳಲು ಆದೇಶಿಸಲಾಗಿದೆ.

ಹಾರ್ಮುಜ್ ಬಳಿ ಅಮೆರಿಕದ ಅಪಾಚೆ ಹೆಲಿಕಾಪ್ಟರ್ ಪತನ; ಸಿಬ್ಬಂದಿ ಪಾರು


ವಾಷಿಂಗ್ಟನ್: ಮಧ್ಯಪ್ರಾಚ್ಯದಲ್ಲಿ ಉದ್ವಿಗ್ನತೆ ಮುಂದುವರಿದಿದೆ. ಈ ನಡುವೆ ಅಮೆರಿಕ ಸೇನೆಗೆ ಸೇರಿದ ಅಪಾಚೆ ಗನ್‌ಶಿಪ್ ಹೆಲಿಕಾಪ್ಟರ್ ಹಾರ್ಮುಜ್ ಜಲಸಂಧಿ ಸಮೀಪ ಪತನಗೊಂಡಿದ್ದು, ಅದರಲ್ಲಿದ್ದ ಇಬ್ಬರು ಸಿಬ್ಬಂದಿಯನ್ನು ಸುರಕ್ಷಿತವಾಗಿ ರಕ್ಷಿಸಲಾಗಿದೆ. ಸಿಬ್ಬಂದಿ ಸುರಕ್ಷಿತವಾಗಿರುವುದನ್ನು ಅಮೆರಿಕ ಅಧ್ಯಕ್ಷ ಟ್ರಂಪ್ ಖಚಿತಪಡಿಸಿದ್ದಾರೆ. ಹೆಲಿಕಾಪ್ಟರ್ ಪತನಕ್ಕೆ ನಿಖರ ಕಾರಣ ಇನ್ನೂ ತಿಳಿದುಬಂದಿಲ್ಲ. ಇದು ಇರಾನ್ ದಾಳಿಯಿಂದ ಸಂಭವಿಸಿದೆಯೇ ಅಥವಾ ತಾಂತ್ರಿಕ ದೋಷದಿಂದ ಕೆಳಗೆ ಬಿದ್ದಿದೆಯೇ ಎಂಬುದು ಸ್ಪಷ್ಟವಾಗಿಲ್ಲ. ಆದರೆ ಇರಾನ್ ಮತ್ತು ಇಸ್ರೇಲ್ ನಡುವಿನ ಉದ್ವಿಗ್ನತೆ ಹೆಚ್ಚಾಗಿರುವ ಸಮಯದಲ್ಲೇ ಈ ಘಟನೆ ನಡೆದಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ.



ಎಹೆಚ್–64 ಅಪಾಚೆ ಹೆಲಿಕಾಪ್ಟರ್ ಅಮೆರಿಕ ಸೇನೆಯ ಪ್ರಮುಖ ಯುದ್ಧ ಅಸ್ತ್ರಗಳಲ್ಲಿ ಒಂದಾಗಿದೆ. ಹೆಲ್‌ಫೈರ್ ಕ್ಷಿಪಣಿಗಳಿಂದ ಸಜ್ಜುಗೊಂಡಿರುವ ಈ ಹೆಲಿಕಾಪ್ಟರ್ ಅನ್ನು ಅಮೆರಿಕ ಹಲವು ಸೇನಾ ಕಾರ್ಯಾಚರಣೆಗಳಲ್ಲಿ ಬಳಸುತ್ತಿದೆ. ಹಾರ್ಮುಜ್ ಜಲಸಂಧಿಯಲ್ಲಿ ಇರಾನ್ ವಿರುದ್ಧ ಅಮೆರಿಕ ನಡೆಸುತ್ತಿರುವ ಕಾರ್ಯಾಚರಣೆಯಲ್ಲೂ ಅಪಾಚೆ ಹೆಲಿಕಾಪ್ಟರ್ ಪ್ರಮುಖ ಪಾತ್ರ ವಹಿಸುತ್ತಿದೆ. ಈ ಸಂಘರ್ಷದಲ್ಲಿ ಕಳೆದುಕೊಂಡ ಮೊದಲ ಅಪಾಚೆ ಹೆಲಿಕಾಪ್ಟರ್ ಇದಾಗಿರಬಹುದು ಎನ್ನಲಾಗಿದೆ.

'ಜೋಜಿಲಾ ಸುರಂಗ್' ಶೀಘ್ರ ಮುಕ್ತ; ಅಂತಿಮ ಹಂತದ ಸ್ಫೋಟ ಯಶಸ್ವಿ

ಶ್ರೀನಗರ: ಸಮುದ್ರ ಮಟ್ಟದಿಂದ 11,500 ಅಡಿ ಎತ್ತರದಲ್ಲಿ ನಿರ್ಮಾಣವಾಗುತ್ತಿರುವ, ವಿಶ್ವದ ಅತಿ ಉದ್ದದ ಸಿಂಗಲ್–ಟ್ಯೂಬ್ ದ್ವಿಮುಖ ರಸ್ತೆಯು 'ಜೋಜಿಲಾ ಸುರಂಗ'ದ ಅಂತಿಮ ಹಂತದ ಸ್ಫೋಟ(ಬ್ರೇಕ್‌ಥ್ರೂ) ಮಂಗಳವಾರ ಮಧ್ಯಾಹ್ನ ಯಶಸ್ವಿಯಾಗಿ ನೆರವೇರಿತು.



ಲಡಾಖ್ ಕೇಂದ್ರಾಡಳಿತ ಪ್ರದೇಶದ ಮಿನಿಮಾರ್ಗ್ ಬಳಿಯ ಸುರಂಗದ ಪೂರ್ವ ದ್ವಾರದ ಬಳಿ ಕೇಂದ್ರ ಹೆದ್ದಾರಿ ಸಚಿವ ನಿತಿನ್ ಗಡ್ಕರಿ, ರಿಮೋಟ್ ಬಟನ್ ಒತ್ತುವ ಮೂಲಕ ಸುರಂಗದ ಎರಡು ತುದಿಗಳನ್ನು ಜೋಡಿಸಲು 2.5 ಮೀಟರ್ ವ್ಯಾಪ್ತಿಯ ಗೋಡೆಯನ್ನು ಸ್ಫೋಟಿಸಿ, ಭಾರತದ ಮೂಲಸೌಕರ್ಯ ಅಭಿವೃದ್ಧಿಯಲ್ಲಿ ಇದೊಂದು ಸುವರ್ಣ ದಿನ ಎಂದು ಬಣ್ಣಿಸಿದರು. ಈ ಸಂದರ್ಭದಲ್ಲಿ ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಮತ್ತು ಮುಖ್ಯಮಂತ್ರಿ ಓಮರ್ ಅಬ್ದುಲ್ಲಾ ಉಪಸ್ಥಿತರಿದ್ದರು. ದೇಶದ ಅತ್ಯಂತ ಮಹತ್ವಾಕಾಂಕ್ಷೆಯ ಮೂಲಸೌಕರ್ಯ ಯೋಜನೆಗಳಲ್ಲಿ ಒಂದಾದ ಈ ಸುರಂಗ ಮಾರ್ಗವು, ಸಮುದ್ರ ಮಟ್ಟದಿಂದ ಸುಮಾರು 3,535 ಮೀಟರ್(11598 ಅಡಿ) ಎತ್ತರದಲ್ಲಿದೆ. ಸುರಂಗದ ಕೊನೆಯ ಗೋಡೆಯನ್ನು ಸ್ಫೋಟಿಸುವ ಮೂಲಕ ಜೋಜಿಲಾ ಸುರಂಗವು ಅಂತಿಮವಾಗಿ ಬೆಳಕು ಕಂಡಿತು.

ಕೇರಳಂ: ಬಿರುಗಾಳಿ ಸಹಿತ ಭಾರಿ ಮಳೆ




ತಿರುವನಂತಪುರಂ: ಕೇರಳಂನ ಹಲವೆಡೆ ಸೋಮವಾರ ಬಿರುಗಾಳಿ ಸಹಿತ ಭಾರಿ ಮಳೆಯಾಗಿದೆ. ಉತ್ತರದ ಜಿಲ್ಲೆಗಳಲ್ಲಿ ಜಲಾವೃತಗೊಂಡಿವೆ.

ನೈರುತ್ಯ ಮುಂಗಾರು ರಾಜ್ಯದಲ್ಲಿ ತೀವ್ರವಾಗಿದ್ದು, ರಾತ್ರಿಯಿಡೀ ಸುರಿದ ಮಳೆಯಿಂದಾಗಿ ಕೋಯಿಕ್ಕೋಡ್ ಜಿಲ್ಲೆಯ ನಗರ, ಗ್ರಾಮೀಣ ಪ್ರದೇಶಗಳು ಜಲಾವೃತಗೊಂಡು, ಜನಜೀವನ ಅಸ್ತವ್ಯಸ್ತಗೊಂಡಿದೆ.

ದಿಢೀರ್ ಬೀಸಿದ ಬಿರುಗಾಳಿಯಿಂದಾಗಿ ತ್ರಿಶ್ಯೂರ್ ಜಿಲ್ಲೆಯ ಹಲವೆಡೆ ಮರಗಳು ಧರೆಗುರುಳಿವೆ. ಮರಗಳು ಶಾಲೆಯ ವಾಹನ ನಿಲುಗಡೆ ಸ್ಥಳಕ್ಕೆ ಬಿದ್ದ ಪರಿಣಾಮ ಹಲವು ವಾಹನಗಳಿಗೆ ಹಾನಿಯಾಗಿದೆ. ಮಕ್ಕಳು ಶಾಲೆಗೆ ಬರುವ ಸಮಯದಲ್ಲಿಯೇ ಅವಘಡ ನಡೆದಿದ್ದು, ಯಾವುದೇ ತೊಂದರೆಯಾಗಿಲ್ಲ ಎಂದು ಸ್ಥಳೀಯರು ತಿಳಿಸಿದ್ದಾರೆ. ಭೂಕುಸಿತದ ಸಾಧ್ಯತೆ ಇರುವುದರಿಂದ ಅರೇಶ್ವರಾಮ್ ಪ್ರದೇಶದಲ್ಲಿನ ಕೆಲವು ಕುಟುಂಬಗಳನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ.

ಇಸ್ರೇಲ್‌ನಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಪ್ರತಿಮೆ ಸ್ಥಾಪನೆಗೆ ನಿರ್ಧಾರ

ಮುಂಬೈ: ಇಸ್ರೇಲ್‌ನಲ್ಲಿ ಮರಾಠಾ ಸಾಮ್ರಾಜ್ಯದ ದೊರೆ ಛತ್ರಪತಿ ಶಿವಾಜಿ ಮಹಾರಾಜರ ಪ್ರತಿಮೆ ಸ್ಥಾಪಿಸಲು ಇಸ್ರೇಲ್ ಸರ್ಕಾರ ನಿರ್ಧರಿಸಿರುವುದಾಗಿ ಮುಂಬೈನಲ್ಲಿರುವ ಇಸ್ರೇಲ್ ಕಾನ್ಸುಲ್ ಜನರಲ್ ಯಾನಿವ್ ರೆವಾಚ್ ತಿಳಿಸಿದ್ದಾರೆ.



ಸುದ್ದಿ ಸಂಸ್ಥೆಯೊಂದರ ಜೊತೆ ಮಾತನಾಡಿದ ಅವರು, ಭಾರತೀಯರಿಗೆ ಛತ್ರಪತಿ ಶಿವಾಜಿ ಮಹಾರಾಜರ ಪ್ರಭಾವ ಎಷ್ಟಿದೆ ಮತ್ತು ಅವರು ಎಷ್ಟು ಮುಖ್ಯ ಎಂಬುದು ನಮಗೆ ಚೆನ್ನಾಗಿ ತಿಳಿದಿದೆ. ಭಾರತದಲ್ಲಿ ತಯಾರಾಗಲಿರುವ ಮಹಾರಾಜರ ಬೃಹತ್ ಪ್ರತಿಮೆಯನ್ನು ಇಸ್ರೇಲ್‌ಗೆ ಕೊಂಡೊಯ್ದು ಅಲ್ಲಿನ ಪ್ರಮುಖ ನಗರವೊಂದರಲ್ಲಿ ಸ್ಥಾಪಿಸುವುದು ನಮ್ಮ ಆಲೋಚನೆಯಾಗಿದೆ. ಇದು ಕೇವಲ ಒಂದು ಸಾಮಾನ್ಯ ಯೋಜನೆಯಲ್ಲ, ಬದಲಿಗೆ ದೀರ್ಘಕಾಲದವರೆಗೆ ಭಾರತ ಮತ್ತು ಇಸ್ರೇಲ್ ಜನರನ್ನು ಭಾವನಾತ್ಮಕವಾಗಿ ಬೆಸೆಯುವ ಮಹತ್ವದ ಕೊಂಡಿಯಾಗಲಿದೆ ಎಂದಿದ್ದಾರೆ. ಪ್ರತಿಮೆಯ ಕಲಾತ್ಮಕ ವಿನ್ಯಾಸ ಮತ್ತು ನಿಖರ ಐತಿಹಾಸಿಕ ಉಲ್ಲೇಖಗಳಿಗಾಗಿ ಸಹಕಾರ ನೀಡಲು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್ ಸಮ್ಮತಿಸಿದ್ದಾರೆ. ಈ ಕುರಿತು ಫಡ್ನವಿಸ್ ಅವರಿಗೆ ಪತ್ರ ಬರೆದಿರುವ ಇಸ್ರೇಲ್ ರಾಜತಾಂತ್ರಿಕ ಅಧಿಕಾರಿ, ಇಸ್ರೇಲ್ ಜನರಿಗೂ ಶಿವಾಜಿ ಮಹಾರಾಜರ ಶೌರ್ಯ ಮತ್ತು ಸಾಧನೆಗಳ ಬಗ್ಗೆ ಅರಿವು ಮೂಡಿಸುವ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ ಎಂದು ತಿಳಿಸಿದ್ದಾರೆ.

ಕೊಡಗು ಪ್ರವೇಶಿಸಿದ ಮುಂಗಾರು

'ಆರೆಂಜ್ ಅಲರ್ಟ್' ಘೋಷಣೆ




ಮಡಿಕೇರಿ,ಜೂ.9–ನೈರುತ್ಯ ಮುಂಗಾರು ಮಾರುತಗಳು ಈಗಾಗಲೇ ಕೊಡಗನ್ನು ಪ್ರವೇಶಿಸಿದ್ದು, ಹವಾಮಾನ ಇಲಾಖೆ ಮುನ್ಸೂಚನೆಯಂತೆ ಜಿಲ್ಲೆಯಲ್ಲಿ 'ಆರೆಂಜ್ ಅಲರ್ಟ್' ಘೋಷಿಸಲಾಗಿದೆ. ಈ ಅವಧಿಯಲ್ಲಿ 115.6 ಮಿ.ಮೀ. ನಿಂದ 204.4 ಮಿ.ಮೀ ಮಳೆಯಾಗಲಿದೆ ಎಂದು ಮುನ್ಸೂಚನೆ ನೀಡಲಾಗಿದೆ. ಈ ಮುನ್ಸೂಚನೆ ಜೂ.10ರ ಬೆಳಗಿನ 8.30ರವರೆಗೆ ಜಾರಿಯಲ್ಲಿದೆ. ಇನ್ನು ಜಿಲ್ಲೆಯ ವಿವಿಧ ಭಾಗಗಳಲ್ಲಿ ಹಗುರ ಸಹಿತ ಸಾಧಾರಣ ಮಳೆಯಾಗಿದ್ದು, ಮುಂದಿನ ದಿನಗಳಲ್ಲಿ ಮುಂಗಾರು ಚುರುಕು ಪಡೆಯಬಹುದೆಂಬ ನಿರೀಕ್ಷೆ ಹೊಂದಲಾಗಿದೆ.

ಮಳೆ ಪ್ರಮಾಣ ಕುಸಿತ: ಕಳೆದ ವರ್ಷದ ಮಳೆ ಪ್ರಮಾಣಕ್ಕೆ ಹೋಲಿಸಿದರೆ ಈ ಬಾರಿ ಮಳೆ ಪ್ರಮಾಣ ಕುಸಿತವಾಗಿರುವುದು ಕಂಡು ಬರುತ್ತಿದೆ. ಕಳೆದ ವರ್ಷ ಜನವರಿಯಿಂದ ಜೂ.10ರವರೆಗೆ 785.60 ಮಿ.ಮೀ ಮಳೆಯಾಗಿತ್ತು. ಆದರೆ ಈ ವರ್ಷ 223.62 ಮಿ.ಮೀ ಮಳೆ ಮಾತ್ರವೇ ಸುರಿದಿದೆ. ಇದು ಮಳೆ ಕುಸಿತದ ದತ್ತಾಂಶವನ್ನು ಬಿಂಬಿಸುತ್ತಿದೆ.

ಜಿಲ್ಲೆಯ ಮಳೆ ವಿವರ: ಕಳೆದ 24 ಗಂಟೆಯ ಅವಧಿಯಲ್ಲಿ ನಾಪೋಕ್ಲು 23.60 ಮಿ.ಮೀ, ಸಂಪಾಜೆ 27.50, ಭಾಗಮಂಡಲ 38, ವಿರಾಜಪೇಟೆ 28.40, ಅಮ್ಮತ್ತಿ 23, ಹುದಿಕೇರಿ 23, ಶ್ರೀಮಂಗಲ 22, ಪೊನ್ನಂಪೇಟೆ 35, ಬಾಳೆಲೆ 13.06, ಸೋಮವಾರಪೇಟೆ 8.60, ಶನಿವಾರಸಂತೆ 12, ಶಾಂತಳ್ಳಿ 32, ಕೊಡ್ಲಿಪೇಟೆ 7, ಕುಶಾಲನಗರ 2.40, ಸುಂಟಿಕೊಪ್ಪ ವ್ಯಾಪ್ತಿಯಲ್ಲಿ 12 ಮಿ.ಮೀ ಮಳೆಯಾಗಿದೆ.

ಚೆಯ್ಯಂಡಾಣೆಯಲ್ಲಿ ಭುಗಿಲೆದ್ದ ಗ್ರಾಮಸ್ಥರ ಆಕ್ರೋಶ


ಗ್ರಾಮಸ್ಥರು ಅರಣ್ಯಾಧಿಕಾರಿಗಳನ್ನು ತರಾಟೆ ತೆಗೆದುಕೊಂಡಿರುವುದು.

ಮಡಿಕೇರಿ, ಜೂ.9–ಕಾಡಾನೆಗಳ ಹಾವಳಿಯಿಂದ ರೋಸಿಹೋದ ಗ್ರಾಮಸ್ಥರು, ಕಾಡಾನೆಗಳು ಜೀವ ಬಲಿ ಪಡೆಯುವ ಮುನ್ನ ಎಚ್ಚೆತ್ತು ಕೊಳ್ಳುವಂತೆ ಅರಣ್ಯಾಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಘಟನೆ ಚೆಯ್ಯಂಡಾಣೆಯಲ್ಲಿ ನಡೆಯಿತು.

ಶಾಲಾ ಕಾಲೇಜು ವಿದ್ಯಾರ್ಥಿಗಳು, ಕೃಷಿ ಕಾರ್ಮಿಕರು ರಸ್ತೆಯಲ್ಲಿ ಹೋಗಲು ಭಯ ಪಡುವಂಥ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು. ಅವುಗಳನ್ನು ಕಾಡಿಗಟ್ಟುವ ಕಾರ್ಯಾಚರಣೆ ನಡೆಸದೆ, ತಕ್ಷಣವೇ ಸೆರೆ ಹಿಡಿಯಬೇಕೆಂದು ಒತ್ತಾಯಿಸಿದರು.

ನರಿಯಂದಡ ಗ್ರಾಮದ ನಿವಾಸಿ ಪೊಕ್ಕುಳಂಡ್ರ ಧನೋಜ್ ಮಾತನಾಡಿ, ಈ ವ್ಯಾಪ್ತಿಯಲ್ಲಿ 8 ವರ್ಷಗಳಿಂದ ಕಾಡಾನೆಗಳ ಹಾವಳಿ ಮಿತಿ ಮೀರಿದೆ. ತೋಟಗಳಿಗೆ ತೆರಳಲು ಭಯ ಪಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಎರಡು ಬಾರಿ ಮುಖ್ಯ ರಸ್ತೆ ತಡೆದು ಪ್ರತಿಭಟನೆ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ನಾಮಕಾವಸ್ಥೆಗೆ ಅರಣ್ಯಾಧಿಕಾರಿಗಳು ಬಂದು ಹೋಗುತ್ತಾರೆ ಎಂದು ದೂರಿದರು.

ಇಂದು ತೋಟಕ್ಕೆ ಬರುವ ಸಂದರ್ಭ ತೋಟದಲ್ಲಿ ಆನೆ ಕಂಡು ಬಂದಿದ್ದು, ಬೇರೆ ಗ್ರಾಮದ ಸ್ನೇಹಿತರನ್ನು ವಿಚಾರಿದಾಗ ಅಲ್ಲು ಕೂಡ ಆನೆಯಿದೆಯೆಂದು ಹೇಳಿದರು ಕೂಡಲೇ ಆರ್‌ಎಫ್‌ಒ ಶಿವರಾಂ ಅವರಿಗೆ ಫೋನ್ ಮುಖಾಂತರ ಮಾಹಿತಿ ನೀಡಿದ್ದರೂ, ಸ್ಥಳಕ್ಕೆ ಬಾರದೆ ಸಿಬ್ಬಂದಿಗಳನ್ನು ಕಳಿಸಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಕಳೆದ ಬಾರಿ 5 ಆನೆ ಹಿಡಿಯಲು ಅನುಮತಿ ಸಿಕ್ಕಿತ್ತು. ಒಂದು ಆನೆ ಕಾರ್ಯಾಚರಣೆ ವೇಳೆ ಸಾವನ್ನಪ್ಪಿತ್ತು. ಇನ್ನೊಂದು ಕುಂಟು ಆನೆಯನ್ನು ಸೆರೆ ಹಿಡಿದಿದ್ದರು. ಆದರೆ ಉಳಿದ 3 ಆನೆಯನ್ನು ಹಿಡಿಯುವುದು ಬಾಕಿಯಿದೆ ತಕ್ಷಣವೇ ಅವುಗಳ ಸೆರೆಗೆ ಕಾರ್ಯಾಚರಣೆ ನಡೆಸುವಂತೆ ಆಗ್ರಹಿಸಿದರು.

ಕೊಕೇರಿ ಗ್ರಾಮಸ್ಥ ಎಸ್.ಎಸ್. ಸುಮಂತ್ ಮಾತನಾಡಿ, ಕಾಡಾನೆಯನ್ನು ಅರಣ್ಯ ಇಲಾಖೆ ಸಿಬ್ಬಂದಿಗಳು ಓಡಿಸಲು ತೋಟಕ್ಕೆ ತೆರಳಿದರೆ ಅವರನ್ನೆ ಬೆನ್ನಟ್ಟಿ ಓಡಿಸುತ್ತಿವೆ. ಕಳೆದ ವರ್ಷ ತೋಟ ಸರ್ವನಾಶವಾಗಿ 11 ಲಕ್ಷ ರೂ. ಪರಿಹಾರಕ್ಕೆ ಅರಣ್ಯ ಇಲಾಖೆಗೆ ಅರ್ಜಿ ಸಲ್ಲಿಸಲಾಗಿತ್ತು. ಈ ಪೈಕಿ 11 ಸಾವಿರ ರೂ. ಪರಿಹಾರ ನೀಡಿದ್ದಾರೆ ಎಂದು ಅಳಲು ತೋಡಿಕೊಂಡರು. ಮುಂದಿನ 10 ದಿನಗಳೊಳಗೆ ಆನೆಯನ್ನು ಸೆರೆ ಹಿಡಿದು ಬೇರೆಡೆ ಸ್ಥಳಾಂತರಿಸಬೇಕು. ತಪ್ಪಿದ್ದಲ್ಲಿ ಗ್ರಾಮಸ್ಥರು, ಸಂಘ ಸಂಸ್ಥೆಗಳು ಒಟ್ಟು ಸೇರಿ ವಿರಾಜಪೇಟೆ–ನಾಪೋಕ್ಲು ಮುಖ್ಯ ರಸ್ತೆ ಬಂದ್ ಮಾಡಿ ಉಗ್ರ ಪ್ರತಿಭಟನೆ ನಡೆಸುತ್ತೇವೆ ಎಂದು ಎಚ್ಚರಿಸಿದರು.

ಗ್ರಾಮಸ್ಥ ಹಾಗೂ ವಕೀಲ ಕೋಡಿಮಣಿಯಂಡ ಪೂವಯ್ಯ ಮಾತನಾಡಿ, ತಮ್ಮ ಮನೆಯ ಗೇಟ್ ಸಮೀಪ ಸ್ಥಳೀಯ ಸರಕಾರಿ ಉದ್ಯೋಗಿಯನ್ನು ಆನೆ ದಾಳಿ ಮಾಡಲು ಮುಂದಾಗಿದ್ದು, ಅವರು ಓಡಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಆನೆ ಹಗಲು ರಾತ್ರಿ ಎನ್ನದೆ ಗ್ರಾಮದಲ್ಲಿದ್ದರೆ ನಮ್ಮ ಕೆಲಸ ಕಾರ್ಯಗಳು ನಡೆಯುವುದು ಹೇಗೆ? ಪರಿಸ್ಥಿತಿ ಹೀಗೆ ಮುಂದುವರಿದರೆ ಗ್ರಾಮಸ್ಥರು ರೊಚ್ಚಿಗೇಳಲಿದ್ದಾರೆ ಎಂದು ಆಕ್ರೋಶ ಹೊರ ಹಾಕಿದರು.

ಗ್ರಾಮಸ್ಥರಾದ ನೆಲ್ಲಮಕ್ಕಡ ವಿವೇಕ್, ಮನೋಜ್, ರಮೇಶ್, ಆನೆ ಕಾರ್ಯಾಚರಣೆ ತಂಡದ ಡಿಆರ್‌ಎಫ್‌ಒ ಪ್ರಶಾಂತ್, ಗಾರ್ಡ್ ಅಣ್ಣಾಸ್ ಗುಡ್ಡೆ, ಕ್ಯಾಂಪ್ ಸಿಬ್ಬಂದಿಗಳು ಉಪಸ್ಥಿತರಿದ್ದರು.

ನಾಪೋಕ್ಲು: ಜಿಲ್ಲೆಯ ಗಡಿಭಾಗವಾದ ಪೆರಾಜೆ ಗ್ರಾಮ ವ್ಯಾಪ್ತಿಯಲ್ಲೂ ರೈತರು ಅರಣ್ಯ ಇಲಾಖೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಪೆರಾಜೆ, ಚೆಂಬು, ಕುಂಡಾಡು ಗ್ರಾಮ ವ್ಯಾಪ್ತಿಯಲ್ಲಿ ಸೋಮವಾರ ರಾತ್ರಿ ದಾಂಧಲೆ ನಡೆಸಿದ್ದು ತೆಂಗು, ಅಡಿಕೆ, ಬಾಳೆ ಗಿಡಗಳನ್ನು ಧ್ವಂಸಮಾಡಿವೆ. ತೋಟಗಳಲ್ಲಿ ಅಡ್ಡಾಡಿರುವ ಕಾಡಾನೆಗಳಿಂದ ಕೃಷಿ ಫಸಲಿಗೆ ಹಾನಿಯಾಗಿದೆ. ಮಂಗಳವಾರ ಕಾಡಾನೆ ಕಾರ್ಯಾಚರಣೆ ತಂಡ ಸ್ಥಳಕ್ಕೆ ತೆರಳಿದ್ದು ಕಾಡಾನೆಗಳನ್ನು ಅಟ್ಟುವ ಕಾರ್ಯ ನಡೆಸಿದರು.

ಕೊಡಗಿಗೆ ಕೇಂದ್ರ ಸಂಸದೀಯ ಸಮಿತಿ ಭೇಟಿ


ಕೇಂದ್ರ ಸಂಸದೀಯ ಸಮಿತಿ ಸದಸ್ಯರು ಬೈಲಕುಪ್ಪೆ ಸುವರ್ಣಮಂದಿರಕ್ಕೆ ಭೇಟಿ ನೀಡಿದರು.

ಮಡಿಕೇರಿ, ಜೂ.9–ಕೇಂದ್ರ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಗೆ ಒಳಪಡುವ ಕೇಂದ್ರೀಯ ಸಮಿತಿ ನಿನ್ನೆ ಮಡಿಕೇರಿಗೆ ಆಗಮಿಸಿ, ಸರಕಾರಿ ಸಂಸ್ಥೆಗಳು ಮತ್ತು ವಿವಿಧ ಬ್ಯಾಂಕಿಂಗ್ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಿಬ್ಬಂದಿಗಳ ಸ್ಥಿತಿಗತಿಗಳು ಮತ್ತು ಸರಕಾರದ ಸೌಲಭ್ಯಗಳ ಬಗ್ಗೆ ಅಧ್ಯಯನ ನಡೆಸಿತು.

ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಹಾಗೂ ವಿವಿಧ ಬ್ಯಾಂಕ್‌ಗಳ ಉನ್ನತ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡು ತಮ್ಮ ಸಿಬ್ಬಂದಿಗಳ ಕುರಿತು ಕೇಂದ್ರೀಯ ಸಮಿತಿಗೆ ಮಾಹಿತಿ ಒದಗಿಸಿದ್ದಾಗಿ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಶೇಖರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ನಗರದ ಹೊರ ವಲಯದ ರೆಸಾರ್ಟ್‌ನಲ್ಲಿ ಸಭೆ ನಡೆದಿದ್ದು, ಇದಕ್ಕೂ ಮುನ್ನ ಜೂ.8ರಂದು ಊಟಿಯಲ್ಲಿ ಸಭೆ ನಡೆಸಲಾಗಿದೆ. ಜೂ.10ರಂದು ಮಂಗಳೂರಿನಲ್ಲಿ ರಾಜ್ಯ ಮಟ್ಟದ ಅಧಿಕಾರಿಗಳನ್ನು ಒಳಗೊಂಡ ಸಭೆ ನಡೆಯಲಿದೆ ಎಂದು ಅವರು ಮಾಹಿತಿ ನೀಡಿದರು.

ಸಂಸದೀಯ ನಿಯೋಗದ ಸದಸ್ಯರು ನಿನ್ನೆ ಕೊಡಗಿನ ಬೈಲಕುಪ್ಪೆಯ ಸುವರ್ಣ ಮಂದಿರಕ್ಕೆ ಭೇಟಿ ನೀಡಿದ್ದರು. ಪಾರ್ಲಿಮೆಂಟ್ ಕಮಿಟಿಗೆ ಡಾ. ಫಾಗ್ಗನ್ ಸಿಂಗ್ ಕುಲಾಸ್ತೆ ಮುಖ್ಯಸ್ಥರಾಗಿದ್ದು, ಸದಸ್ಯರಾಗಿ ಸಂಸದರುಗಳಾದ ಡಾ. ವಿ.ಶಿವದಾಸನ್, ಹರೀಶ್ ಚಂದ್ರ ಮೀನ, ಅರುಣ್ ಕುಮಾರ್ ಸಾಗರ್, ಸುಮಿತ್ರ ಬಾಲಮಿಕ್, ದಗ್ಗುಮಲ್ಲ ಪ್ರಸಾದ ರಾವ್, ಗೋವಿಂದ ಎಂ. ಕಾರಜೋಳ, ಮಲ್ಲುರವಿ, ದೇವೇಂದ್ರ ಪ್ರತಾಪ್ ಸಿಂಗ್, ಡಾ.ಅಲೋಕ್ ಕುಮಾರ್ ಸುಮನ್, ಮಿಥಿಲೇಶ್ ಕುಮಾರ್, ಮಮತಾ ಠಾಕೂರ್, ಪ್ರಭು ಬಾಯಿ ನಾಗರಬಾಯಿ ವಾಸವ, ಜಗನ್ನಾಥ್ ಸರ್ಕಾರ್, ಎಡಿವಿ ಚಂದ್ರಶೇಖರ್ ಮೊದಲಾದವರಿದ್ದರು.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಮಂತರ್‌ಗೌಡ ಭೂಮಿ ಪೂಜೆ


ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಡಾ. ಮಂತರ್‌ಗೌಡ ಭೂಮಿಪೂಜೆ ನೆರವೇರಿಸಿದರು.

ಕುಶಾಲನಗರ, ಜೂ.9– ಜನತಾ ಕಾಲೋನಿಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಡಾ. ಮಂತರ್ ಗೌಡ ಅವರು ಭೂಮಿಪೂಜೆ ನೆರವೇರಿಸಿದರು.

29 ಲಕ್ಷ ವೆಚ್ಚದಲ್ಲಿ ಜನತಾ ಕಾಲೋನಿಯ ಗಣೇಶ ದೇವಸ್ಥಾನದಿಂದ 6ನೇ ಕ್ರಾಸ್ ತನಕ ಸ್ಲಾಬ್ ಅಳವಡಿಕೆ, 6ನೇ ಕ್ರಾಸ್ ನ ಸಿಸಿ ರಸ್ತೆ, ವಿನಾಯಕ ಮತ್ತು ಮಾರುತಿ ಬಡಾವಣೆಯಲ್ಲಿ ರಸ್ತೆ ಅಭಿವೃದ್ಧಿಗೆ ಕಾಮಗಾರಿಗೆ ಪೂಜೆ ನೆರವೇರಿಸಿ ಚಾಲನೆ ನೀಡಲಾಯಿತು. ಪುರಸಭೆ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ 10 ಕೋಟಿಗೂ ಅಧಿಕ ಅನುದಾನ ಒದಗಿಸಲಾಗಿದೆ. ಅತ್ಯಗತ್ಯ ಇರುವ ಕಾಮಗಾರಿಗಳನ್ನು ಆದ್ಯತೆ ಮೇರೆಗೆ ಕೈಗೊಳ್ಳಲಾಗುತ್ತಿದೆ ಎಂದು ಶಾಸಕ ಡಾ. ಮಂತರ್ ಗೌಡ ತಿಳಿಸಿದರು.

ಆನೆ ಮಾನವ ಸಂಘರ್ಷ ನಿಯಂತ್ರಣ ಸಂಬಂಧ ಎಲ್ಲಾ ರೀತಿಯ ಪರಿಣಾಮಕಾರಿ ಯೋಜನೆಗಳನ್ನು ಈಗಾಗಲೆ ಕಾರ್ಯರೂಪಕ್ಕೆ ತರಲಾಗಿದೆಯಾದರೂ ಕಾಡಾನೆಗಳು ಮತ್ತೊಂದು ಮಾರ್ಗದ ಮೂಲಕ ಹಾನಿ ಉಂಟು ಮಾಡುತ್ತಿರುವ ಕಾರಣ ಶಾಶ್ವತ ಪರಿಹಾರ ಸಾಧ್ಯವಾಗುತ್ತಿಲ್ಲ. ಅರಣ್ಯ ಇಲಾಖೆ ಅಧಿಕಾರಿಗಳು ಹೆಚ್ಚಿನ ರೀತಿಯಲ್ಲಿ ಕಾರ್ಯೋನ್ಮುಖರಾಗುವ ಮೂಲಕ ಸಂಭಾವ್ಯ ಜೀವ ಹಾನಿ ತಡೆಗಟ್ಟಲು ಪ್ರಯತ್ನಿಸಬೇಕಿದೆ ಎಂದರು.

ಸಚಿವ ಸ್ಥಾನ ಯಾರಿಗೆ ದೊರೆತರೂ ಸಂತೋಷ



ಕೊಡಗಿಗೆ ಸಚಿವ ಸ್ಥಾನದ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, ಸಚಿವರಾಗುವ ಆಸೆ ಎಲ್ಲರಿಗೂ ಇರುತ್ತದೆ. ಕೊಡಗಿನ ಸಮಗ್ರ ಅಭಿವೃದ್ಧಿಗೆ ಸಚಿವ ಸ್ಥಾನದ ಅಗತ್ಯವಿದೆ. ಸಂಪುಟಕ್ಕೆ ಅಗತ್ಯವಿರುವ ಲೆಕ್ಕಾಚಾರದ ಪ್ರಕಾರ ಎಲ್ಲವೂ ನಡೆಯಲಿದೆ. ಈಗಾಗಲೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಜಲಸಂಪನ್ಮೂಲ ಸಚಿವರಾಗಿದ್ದ ಸಂದರ್ಭ ಕ್ಷೇತ್ರಕ್ಕೆ 200 ಕೋಟಿಗಳಷ್ಟು ಅನುದಾನ ಒದಗಿಸಿದ್ದಾರೆ. ಅವರ ಸಹ ಕಾರ ನಮಗೆ ಸದಾ ಇದೆ. ಇನ್ನು ಮುಂದೆಯೂ ನಮಗೆ ಅಗತ್ಯವಿರುವ ಅನುದಾನ ಒದಗಿಸಲಿದ್ದಾರೆ ಎಂಬ ವಿಶ್ವಾಸವಿದೆ ಎಂದು ತಿಳಿಸಿದರು.

ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ವಿ.ಪಿ.ಶಶಿಧರ್ ಮಾತನಾಡಿ, ಮುಳ್ಳುಸೋಗೆ ಗ್ರಾಪಂ ಕುಶಾಲನಗರ ಪುರಸಭೆಗೆ ವಿಲೀನಗೊಂಡ ಬಳಿಕ ಅಭಿವೃದ್ಧಿ ಕುಂಠಿತವಾಗಿದೆ ಎಂಬ ಆರೋಪಕ್ಕೆ ವಿರುದ್ಧವಾಗಿ ಗೊಂದಿ ಬಸವನಹಳ್ಳಿ ಮತ್ತು ಮುಳ್ಳುಸೋಗೆ ವ್ಯಾಪ್ತಿಯಲ್ಲಿ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಕ್ಕೆ ತರಲಾಗುತ್ತಿದೆ ಎಂದರು.

ಕುಡಾ ಅಧ್ಯಕ್ಷ ಪ್ರಮೋದ್ ಮುತ್ತಪ್ಪ, ಜೋಸೆಫ್ ವಿಕ್ಟರ್‌ಸೋನ್ಸ್, ಮಂಜುನಾಥ್ ಗುಂಡುರಾವ್, ವಿ.ಜೆ.ನವೀನ್ ಗೌಡ, ವಿ.ಎಸ್. ಆನಂದಕುಮಾರ್, ಮಣಿ, ಪ್ರಮುಖರಾದ ರಂಜನ್, ಆದಂ, ಗಯಾಜ್, ಆನಂದ್ ಸೇರಿದಂತೆ ಬಡಾವಣೆ ನಿವಾಸಿಗಳು ಪಾಲ್ಗೊಂಡಿದ್ದರು.

ಬೈಕ್‌ಗೆ ಕಾರು ಡಿಕ್ಕಿ: ಸವಾರ ಸಾವು



ನಾಪೋಕ್ಲು, ಜೂ.9–ಚಲಿಸುತ್ತಿದ್ದ ಬೈಕ್‌ಗೆ ಕಾರೊಂದು ಡಿಕ್ಕಿ ಆದ ಪರಿಣಾಮ ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟ ಘಟನೆ ಸಮೀಪದ ಚೋನಕೆರೆ ಎಂಬಲ್ಲಿ ಮಂಗಳವಾರ ನಡೆದಿದೆ.

ನೆಲಜಿ ಕಡೆಯಿಂದ ನಾಪೋಕ್ಲುವಿನತ್ತ ತೆರಳುತ್ತಿದ್ದ ಚೋನಕೆರೆ ನಿವಾಸಿ ಚೀಯಕ ಪೂವಂಡ ಬೋಪಣ್ಣ (ಬೋಪಣಿ77)ಚಲಾಯಿಸುತ್ತಿದ್ದ ಬೈಕ್(ಕೆಎ 12, ಡಬ್ಲ್ಯೂ 6593)ಗೆ ಎಮ್ಮೆಮಾಡುವಿನಿಂದ ನಾಪೋಕ್ಲು ವಿನತ್ತ ತೆರಳುತ್ತಿದ್ದ ಆಲ್ಟೊ ಕಾರು (ಕೆಎ 03, ಎಂಎಚ್ 6442) ಹಿಂಬದಿಯಿಂದ ಡಿಕ್ಕಿಯಾಗಿದೆ. ಅಪಘಾತದ ಪರಿಣಾಮ ಬೈಕಿನಿಂದ ಬಿದ್ದ ಸವಾರ ಬೋಪಣ್ಣ ಸ್ಥಳದಲ್ಲಿ ಮೃತಪಟ್ಟಿದ್ದಾರೆ.

ಅಪಘಾತವಾದ ಕೂಡಲೇ ಚಾಲಕ ನೌಷದ್ ಕಾರನ್ನು ಬಿಟ್ಟು ಪರಾರಿಯಾಗಿದ್ದು, ಪೊಲೀಸರು ಆತನ ಶೋಧನೆಯಲ್ಲಿ ತೊಡಗಿದ್ದಾರೆ. ಘಟನಾ ಸ್ಥಳಕ್ಕೆ ಗ್ರಾಮಾಂತರ ವೃತ್ತ ನಿರೀಕ್ಷಕ ಎಂ. ಉಮೇಶ್, ಠಾಣಾಧಿಕಾರಿ ರಾಘವೇಂದ್ರ ಮತ್ತು ಸಿಬ್ಬಂದಿ ಭೇಟಿ ನೀಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಮಡಿಕೇರಿಗೆ ಕಳುಹಿಸಲಾಗಿದೆ. ಮೃತರು. ಪತ್ನಿ ಮೀನಾ ಹಾಗೂ ಪುತ್ರ ನಿರನ್ ಅವರನ್ನು ಅಗಲಿದ್ದಾರೆ.

ಬಿಜೆಪಿ ಮಂಡಲ ಕಚೇರಿ ಉದ್ಘಾಟನೆ



ಮಡಿಕೇರಿ ನಗರದ ಭಾರತೀಯ ಜನತಾ ಪಾರ್ಟಿ ಮಂಡಲ ಕಚೇರಿಯನ್ನು ಸಂಸದ ಯದುವೀರ್ ಒಡೆಯರ್ ಉದ್ಘಾಟಿಸಿದರು. ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ಮಾಚಿ ಮಂಡ ಸುವಿನ್ ಗಣಪತಿ, ಎಂಎಲ್ಸಿ ಮಂಡೇಪಂಡ ಸುಜಾ ಕುಶಾಲಪ್ಪ, ಮಾಜಿ ಶಾಸಕ ಕೆ.ಜಿ ಬೋಪಯ್ಯ ಸೇರಿದಂತೆ ಇನ್ನಿತರರಿದ್ದರು.

ವಿದ್ಯಾರ್ಥಿಗಳು ಏಕಾಗ್ರತೆಯಿಂದ ಗುರಿಯತ್ತ ಸಾಗಿ


ಎಂಜಿ ನಾಗದೇವ ಅವರನ್ನು ಎಪಿಎಂಸಿ ಮಾಜಿ ಅಧ್ಯಕ್ಷ ಬಿ.ಕೆ. ರವಿಕುಮಾರ್ ಸನ್ಮಾನಿಸಿದರು.

ಚಾಮರಾಜನಗರ, ಜೂ.9–ವಿದ್ಯಾರ್ಥಿದೆಸೆಯಲ್ಲಿ ಏಕಾಗ್ರತೆ ಬೆಳೆಸಿಕೊಂಡು ಗುರಿಯತ್ತ ಸಾಗಿದರೆ ಏನನ್ನಾದರೂ ಸಾಧಿಸಬಹುದು ಎಂದು ಎಪಿಎಂಸಿ ಮಾಜಿ ಅಧ್ಯಕ್ಷ ಬಿ.ಕೆ. ರವಿಕುಮಾರ್ ಅಭಿಪ್ರಾಯಪಟ್ಟರು

ಜೆಇಇ ಮೇನ್ ಪರೀಕ್ಷೆಯಲ್ಲಿ ದೇಶಕ್ಕೆ ಪ್ರಥಮ ಸ್ಥಾನ ಪಡೆದ ಎಂಜಿ ನಾಗದೇವ ಅವರನ್ನು ತಾಲೂಕಿನ ಮಲೆಯೂರು ಗ್ರಾಮದ ಅವರ ಸ್ವಗೃಹದಲ್ಲಿ ಸನ್ಮಾನಿಸಿ ಮಾತನಾಡಿದ ಅವರು, ಯುವಕರು ಪರಿಶ್ರಮ ಪಟ್ಟು ಗುರಿಯೆಡೆಗೆ ಸಾಗಲು ಛಲ ಹೊಂದಿದ್ದರೆ ಸಾಧಕರಾಗಬಹುದು ಎಂದರು.

ಶಿಕ್ಷಣ ಇಂದು ಸ್ಪರ್ಧಾತ್ಮಕವಾಗಿದ್ದು, ಉದ್ಯೋಗ ಕೇಂದ್ರೀಕೃತವಾಗುತ್ತಿದೆ ಹೀಗಾಗಿ ಪರಿಶ್ರಮವೇ ವಿದ್ಯಾರ್ಥಿ ಯಶಸ್ಸಿನ ಗುಟ್ಟಾಗಿದೆ ಈ ನಿಟ್ಟಿನಲ್ಲಿ ತಾಲೂಕಿನ ಹೆಮ್ಮೆಯ ಪುತ್ರ ನಾಗದೇವ ಜೆಇಇ ಪರೀಕ್ಷೆಯಲ್ಲಿ ದೇಶಕ್ಕೆ ಪ್ರಥಮ ಸ್ಥಾನ ಪಡೆದಿದ್ದು ತಾಲೂಕು ಜಿಲ್ಲೆ ಹಾಗೂ ರಾಜ್ಯಕ್ಕೆ ಹೆಸರು ತಂದಿದ್ದಾರೆ ಇವರ ಭವಿಷ್ಯ ಉಜ್ವಲವಾಗಲಿ ಎಂದು ಹಾರೈಸಿದರು. ಮುಂದಿನ ದಿನಗಳಲ್ಲಿ ತರಬೇತಿ ಕೇಂದ್ರ ತೆರೆದು ಗ್ರಾಮೀಣ ವಿದ್ಯಾರ್ಥಿಗಳ ಭವಿಷ್ಯಕ್ಕೆ ಮಾರ್ಗದರ್ಶನ ನೀಡುವಂತೆ ಸಲಹೆ ನೀಡಿದರು

ಸನ್ಮಾನ ಸ್ವೀಕರಿಸಿ ಮಾತನಾಡಿದ ನಾಗದೇವ ಬಾಲ್ಯದಿಂದಲೂ ನನಗೆ ಏನನ್ನಾದರೂ ಸಾಧಿಸಬೇಕೆಂಬ ಛಲ ಇತ್ತು ಇದಕ್ಕೆ ಪೂರಕವಾಗಿ ನನ್ನ ತಂದೆ ತಾಯಿ ಗುರುಗಳು ಮಾರ್ಗದರ್ಶನ ನೀಡಿದರು ಅದು ಇಂದು ಸಾರ್ಥಕವಾಗಿದೆ ಎಂದರು. ಮುಂದೆ ದೇಶದ ಪ್ರಸಿದ್ಧ ಐಐಟಿಯಲ್ಲಿ ಶಿಕ್ಷಣ ಮುಂದುವರೆಸಿ ಒಳ್ಳೆಯ ಜ್ಞಾನ ಸಂಪಾದಿಸಿ ಉದ್ಯೋಗದ ಜೊತೆ ಸಮಾಜಕ್ಕೆ ಏನನ್ನಾದರೂ ಕೊಡುಗೆ ನೀಡುವ ಉದ್ದೇಶ ಹೊಂದಿದ್ದೇನೆ ಎಂದರು.

ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯಲ್ಲಿ ರುವ ಇವರು, ಮಲೆಯೂರು ಗ್ರಾಮದ ಗುರು ಮತ್ತು ನೇತ್ರಾವತಿಯವರ ಸುಪುತ್ರ. ಜೆಇಇ ಪರೀಕ್ಷೆಯಲ್ಲಿ ದೇಶಕ್ಕೆ ಮೊದಲ ರ್‍ಯಾಂಕ್ ಪಡೆದಿರುವ ಈತ ತನ್ನ ಶಿಕ್ಷಣವನ್ನು ಮೈಸೂರು ಹಾಗೂ ಕಾರ್ಕಳದ ಕ್ರಿಯೇಟಿವ್ ಕಾಲೇಜಿನಲ್ಲಿ ಶಿಕ್ಷಣ ಪಡೆದಿದ್ದು ಇತ್ತೀಚೆಗೆ ನಡೆದ ಸಿಇಟಿ ಪರೀಕ್ಷೆಯಲ್ಲೂ 28ನೇ ರ್‍ಯಾಂಕ್ ಪಡೆದಿದ್ದಾನೆ

ನಗರದ ಶ್ರೀ ಸಿದ್ದಮಲ್ಲೇಶ್ವರ ಸೌಹಾರ್ದ ಸಹಕಾರ ಸಂಘದ ನಿರ್ದೇಶಕ ಚಂದಕವಾಡಿ ನಂದೀಶ್ ನಾಗದೇವ ಅವರ ತಂದೆ ತಾಯಿ ಸೇರಿದಂತೆ ಇತರರು ಹಾಜರಿದ್ದರು.

ಬೆಂಗಳೂರಿನ ಪ್ರತಿಭಟನೆಯಲ್ಲಿ ಬಲಗೈ ಸಮಾಜದ ಮುಖಂಡರು ಭಾಗವಹಿಸಬೇಡಿ


ಶೇಖರ್ ಬುದ್ದ

ಕೊಳ್ಳೇಗಾಲ, ಜೂ.9 (ನಾಗೇಂದ್ರ)–ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಸಚಿವ ಮಹದೇವಪ್ಪರಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡುವಂತೆ ಆಗ್ರಹಿಸಿ ದಲಿತ ಸಂಘಟನೆಗಳ ಪ್ರತಿಭಟನೆಗೆ ಬಲಗೈ ಸಮಾಜದ ದಲಿತ ಮುಖಂಡರು ಪಾಲ್ಗೊಳ್ಳಬಾರದು ಎಂದು ಪ್ರಗತಿಪರ ಸಂಘಟನೆಗಳ ಸಂಚಾಲಕ ಶೇಖರ್ ಬುದ್ದ ಹೇಳಿದ್ದಾರೆ.

ಮಹದೇವಪ್ಪರಿಂದ ಇಡೀ ಬಲಗೈ ಸಮಾಜಕ್ಕೆ ಒಳಮೀಸಲಾತಿ ವಿಚಾರದಲ್ಲಿ ಅನ್ಯಾಯವಾಗಿದ್ದು, ಕಾಂಗ್ರೆಸ್ ಹೈಕಮಾಂಡ್ ಅವರನ್ನು ಮಂತ್ರಿ ಸ್ಥಾನದಿಂದ ಹೊರಗಿಟ್ಟಿರುವುದು ಸರಿಯಾಗಿದೆ. ಜೂ.11ರ ಪ್ರತಿಭಟನೆಗೆ ಯಾರೂ ಸಹ ಬೆಂಬಲ ವ್ಯಕ್ತಪಡಿಸಿ ತೆರಳಬಾರದು ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಒಳ ಮೀಸಲಾತಿ ಸಂಬಂಧ ಪ್ರಕರಣದಲ್ಲಿ ಬಲಗೈ ಸಮಾಜಕ್ಕೆ ಮರಣ ಶಾಸನ ಬರೆದವರಲ್ಲಿ ಮಹದೇವಪ್ಪ ಅವರೇ ಪ್ರಮುಖರು. ಅಂತಹವರನ್ನು ರಾಜ್ಯ ಹೈಕಮಾಂಡ್ ದೂರವಿಟ್ಟು ಮಂತ್ರಿ ಸ್ಥಾನ ನೀಡದಿರುವುದು ನಿಜಕ್ಕೂ ಹೆಮ್ಮೆಯ ವಿಚಾರ. ಸ್ಥಾನಮಾನ ಕೊಡುವ ವಿಚಾರದಲ್ಲಿ ಹಿರಿಯ ದಲಿತ ನಾಯಕರಿಗೆ ನೀಡಿ, ಆದರೆ ದಲಿತರ ವಿಚಾರದಲ್ಲಿ ಮೌನ ಮುರಿಯದೆ ಒಳಮೀಸಲಾತಿ ವಿಚಾರದಲ್ಲಿ ದಲಿತರ ಪರ ಧ್ವನಿಯಾಗದ ಇವರಿಗೆ ಯಾವುದೇ ಕಾರಣಕ್ಕೂ ಮಂತ್ರಿ ಸ್ಥಾನವನ್ನಾಗಲಿ, ಉಪ ಮುಖ್ಯಮಂತ್ರಿ ಸ್ಥಾನವನ್ನಾಗಲಿ ನೀಡಕೂಡದು. ಇವರ ಈ ಉದ್ದಟತನಕ್ಕೆ ಮನ್ನಣೆ ಹಾಕಬಾರದು ಎಂದರು

ದಲಿತ ಮುಖ್ಯಮಂತ್ರಿ ವಿಚಾರದಲ್ಲಿ ಎಂದಿಗೂ ಚಕಾರವೆತ್ತಿಲ್ಲ, ಸಿದ್ದರಾಮಯ್ಯ ರಾಜೀನಾಮೆ ನೀಡಿದ ಬಳಿಕವಾದರೂ ಗಟ್ಟಿ ಧ್ವನಿ ತೆಗೆದು ಮಾತನಾಡಲಿಲ್ಲ, ಅದೇ ರೀತಿಜ್ಞಾನ ಪ್ರಕಾಶ ಸ್ವಾಮಿಜಿ ಅವರು ಸಹಾ ದಲಿತ ಸಿಎಂ ವಿಚಾರದಲ್ಲಿ ಮಾತನಾಡಿಲ್ಲ, ಸಿದ್ದರಾಮಯ್ಯ ರಾಜೀನಾಮೆ ನಂತರ ದಲಿತರನ್ನು ಮುಖ್ಯಮಂತ್ರಿ ಮಾಡಿ ಎಂಬ ಹೇಳಿಕೆ ನೀಡದೆ ಸುಮ್ಮನಿದ್ದು, ಪ್ರತಿಭಟನೆಗೆ ಪಾಲ್ಗೊಳ್ಳುವುದು ಸರಿಯಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಆಲೂರು ತಂಡಕ್ಕೆ ಬಸವೇಶ್ವರ ಕಪ್


ಬಸವೇಶ್ವರ ಕಪ್ ಪಂದ್ಯಾವಳಿಯಲ್ಲಿ ಆಲೂರು ತಂಡ ಪ್ರಥಮ ಬಹುಮಾನ ಪಡೆದುಕೊಂಡಿತು.

ಚಾಮರಾಜನಗರ, ಜೂ.9–ಬಸವ ಬಳಗದ ವತಿಯಿಂದ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಬಸವೇಶ್ವರ ಕಪ್–ಸೀಸನ್–1 ಟೆನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ತಾಲೂಕಿನ ಆಲೂರು ತಂಡವು ಪ್ರಥಮ ಬಹುಮಾನ ಪಡೆದುಕೊಂಡಿತು.

ಸುಮಾರು 14 ತಂಡಗಳು ಭಾಗವಹಿಸಿದ್ದ ಪಂದ್ಯದಲ್ಲಿ ಆಲೂರು ತಂಡ ಹಾಗೂ ನಂಜನಗೂಡು ಇಲೆವೆನ್ ಫೈಟರ್ಸ್ ತಂಡಗಳು ಫೈನಲ್ ಪ್ರವೇಶಿಸಿದ್ದವು, ಫೈನಲ್‌ನಲ್ಲಿ ಆಲೂರು ತಂಡವು ನಂಜನಗೂಡು ಇಲೆವೆನ್ ಫೈಟರ್ಸ್ ತಂಡವನ್ನು ಸೋಲಿಸಿ ಪ್ರಥಮ ಬಹುಮಾನ ಕಪ್ ಜೊತೆಗೆ 1,11,011, ರೂ. ನಗದು ಬಹು ಮಾನವನ್ನು ಪಡೆದುಕೊಂಡಿತು.

ನಂಜನಗೂಡು ಇಲೆವೆನ್ ಫೈಟರ್ಸ್ ತಂಡವು ದ್ವಿತೀಯ ಸ್ಥಾನ ಪಡೆದು ಕಪ್ ಜೊತೆ 55,555 ರೂ. ನಗದು ಬಹುಮಾನವನ್ನು ತನ್ನದಾಗಿಸಿಕೊಂಡಿತು.

ಬಸವ ಬಳಗದ ಶಂಕರ್, ಅಶ್ವಿನ್, ರುದ್ರಸ್ವಾಮಿ, ಶಶಾಂಕ್, ಸುಪ್ರೀತ್ ಪಂದ್ಯಾವಳಿಯನ್ನು ಆಯೋಜಿಸಿದ್ದರೆ, ಪ್ರಥಮ ಬಹುಮಾನವನ್ನು ಉದ್ಯಮಿ ಕಟ್ನವಾಡಿ ಕೆ.ಎಂ.ಮಂಜುನಾಥ್, ದ್ವಿತೀಯ ಬಹುಮಾನವನ್ನು ಕಲ್ಪತರು ಶಿವು ನೀಡಿದ್ದರು.

ಉದ್ಯಮಿ ಕಟ್ನವಾಡಿ ಮಂಜುನಾಥ್, ಕಲ್ಪತರು ಶಿವು, ದಯಾನಿಧಿ, ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾದ ಜಿಲ್ಲಾಧ್ಯಕ್ಷ ಮೂಡ್ಲುಪುರ ನಂದೀಶ್, ಜಿಲ್ಲಾ ಬಿಜೆಪಿ ಪ್ರದಾನ ಕಾರ್ಯದರ್ಶಿ ವೃಷಭೇಂದ್ರಪ್ಪ, ಬಿಸಲವಾಡಿ ಉಮೇಶ್, ಹೊಸೂರು ಶಮೀತ್, ಆಲೂರು ಬಾಬಣ್ಣ, ಮಲ್ಲೇಶ್ ಇತರರು ಇದ್ದರು.

ಗ್ರಾಮಸಂಪರ್ಕ ರಸ್ತೆಗಳ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ


ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಗುದ್ದಲಿಪೂಜೆ ನೆರವೇರಿಸಿದರು.

ಚಾಮರಾಜನಗರ, ಜೂ.9–ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಅನುದಾನ 5 ಕೋಟಿ ರೂ.ವೆಚ್ಚದಲ್ಲಿ ತಾಲೂಕಿನ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಗುದ್ದಲಿಪೂಜೆ ನೆರವೇರಿಸಿದರು.

ಒಂದು ಗ್ರಾಮದಿಂದ ಮತ್ತೊಂದು ರಸ್ತೆಗೆ ತೆರಳಲು ಉತ್ತಮ ರಸ್ತೆಗಳ ಅಗತ್ಯತೆ ಇದೆ. ಆ ನಿಟ್ಟಿನಲ್ಲಿ ಇಂದು ತಾಲೂಕಿನ ಮರಿಯಾಲ ಗ್ರಾಮದ ಮುಖ್ಯ ರಸ್ತೆಗೆ 2ಕೋಟಿ, ಯಾನಗಹಳ್ಳಿ, ನರಸಮಂಗಲ ಗ್ರಾಮಗಳ ಸಂಪರ್ಕ ರಸ್ತೆ ಅಭಿವೃದ್ಧಿಗೆ ತಲಾ 1.50 ಕೋಟಿಯಂತೆ 3 ಕೋಟಿ ಸೇರಿ, ಒಟ್ಟು 5 ಕೋಟಿ ರೂ.ವೆಚ್ಚದಲ್ಲಿ ಮೂರು ಗ್ರಾಮಗಳ ರಸ್ತೆ ಕಾಮಗಾರಿಗಳಿಗೆ ಗುದ್ದಲಿಪೂಜೆ ನೆರವೇರಿಸಲಾಗಿದೆ ಎಂದರು.

ಮರಿಯಾಲ ಗ್ರಾಮದ ಮುರುಘ ರಾಜೇಂದ್ರ ಮಠದ ಇಮ್ಮಡಿ ಮುರುಘ ರಾಜೇಂದ್ರಸ್ವಾಮಿ, ಚುಡಾ ಅಧ್ಯಕ್ಷ ಮಹಮದ್ ಅಸ್ಗರ್, ಪಂಚ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ತಾಲೂಕು ಸದಸ್ಯ ಮರಿಯಾಲದಹುಂಡಿ ಕುಮಾರ್, ತಾಪಂ ಕೆಡಿಪಿ ಸದಸ್ಯ ಶ್ರೀನಿವಾಸ್, ಮಹದೇಶ್ವರ ಬೆಟ್ಟ ಪ್ರಾಧಿಕಾರದ ಸದಸ್ಯ ಮರಿಸ್ವಾಮಿ, ಎಪಿಎಂಸಿ ಮಾಜಿ ಸದಸ್ಯ ದಳಪತಿ ವೀರತಪ್ಪ, ಗುರುಪ್ರಸಾದ್, ಚನ್ನಬಸಪ್ಪ, ಚಂದ್ರು, ಗೌಡಿಕೆ ಕುಮಾರ್, ರಾಮೇಗೌಡ, ಮಲ್ಲೇಶ್, ರಾಜೇಶ್, ಕೆಲ್ಲಂಬಳ್ಳಿ ಸೋಮೇಶ್ವರ್, ಎಲ್,ಸಿ.ನಾಗರಾಜು, ಯಾನಗಹಳ್ಳಿ ಶಂಭಪ್ಪ, ಚನ್ನಬಸಪ್ಪ, ಎಲ್.ಲಿಂಗರಾಜು, ರಂಗಸ್ವಾಮಿ, ಮಹೇಂದ್ರ ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

ಅವಧಿ ಮೀರಿದ 1.88 ಲಕ್ಷ ರೂ. ಮದ್ಯ ನಾಶ



ಅವಧಿ ಮೀರಿದ ಮದ್ಯವನ್ನು ಅಬಕಾರಿ ಇಲಾಖೆ ಅಧಿಕಾರಿಗಳು ನಾಶಪಡಿಸಿದರು.

ಚಾಮರಾಜನಗರ, ಜೂ. 9–ಮಾನವ ಸೇವನೆಗೆ ಯೋಗ್ಯವಲ್ಲದ ಹಾಗೂ ಅವಧಿ ಮೀರಿರುವ ಸುಮಾರು 1.88 ಲಕ್ಷ ಮೌಲ್ಯದ ಮದ್ಯವನ್ನು ಅಬಕಾರಿ ಇಲಾಖೆ ಅಧಿಕಾರಿಗಳ ಸಮ್ಮುಖದಲ್ಲಿ ನಾಶಪಡಿಸಲಾಯಿತು.

ನಗರದ ಹೊರವಲಯದ ಬದನಗುಪ್ಪೆ ಕೆಲ್ಲಂಬಳ್ಳಿ ಕೆಐಎಡಿಬಿ ಕೈಗಾರಿಕಾ ಪ್ರದೇಶದಲ್ಲಿರುವ ರಾಜ್ಯ ಪಾನೀಯ ನಿಗಮದ ಆವರಣದಲ್ಲಿ ಈ ಕಾರ್ಯಾಚರಣೆ ನಡೆಯಿತು. ಅಬಕಾರಿ ಅಧೀಕ್ಷಕ ಕೆ.ಟಿ. ವಿಜಯಕುಮಾರ್, ಅಬಕಾರಿ ನಿರೀಕ್ಷಕ ಕೆ. ತನ್ನೀರ್ ಹಾಗೂ ಮಳಿಗೆ ವ್ಯವಸ್ಥಾಪಕ ಜಿ.ಮಹದೇವಸ್ವಾಮಿ ಅವರ ಉಪಸ್ಥಿತಿಯಲ್ಲಿ ಮದ್ಯವನ್ನು ನೆಲಕ್ಕೆ ಸುರಿದು ವಿಲೇವಾರಿ ಮಾಡಲಾಯಿತು.

ಅಬಕಾರಿ ನಿಗಮದ ಸಹಾಯಕ ವ್ಯವಸ್ಥಾಪಕ ದಿನೇಶ್, ಗ್ರಾಮ ಆಡಳಿತಾಧಿಕಾರಿಗಳಾದ ಜಯರಾಮು, ಎಂ. ಮಹೇಶ್ ಕುಮಾರ್, ರಾಜೇಶ್ ನಾಯಕ್ ಸೇರಿದಂತೆ ಇತರ ಅಧಿಕಾರಿಗಳು ಹಾಜರಿದ್ದರು.

ಗುಂಡ್ಲುಪೇಟೆ ಪಟ್ಟಣಕ್ಕೆ ಸಂಚಾರಿ ಠಾಣೆ ಮಂಜೂರು


ಶಾಸಕ ಗಣೇಶ್ ಪ್ರಸಾದ್ ಪೊಲೀಸ್ ಅಧಿಕಾರಿಗಳ ಜೊತೆ ಸಮಾಲೋಚನೆ ನಡೆಸಿದರು.

ಗುಂಡ್ಲುಪೇಟೆ ಜೂ.9(ಸೋಮ್.ಜಿ)–ಸರ್ಕಾರ ಪಟ್ಟಣಕ್ಕೆ ಸಂಚಾರಿ ಪೊಲೀಸ್ ಠಾಣೆ ಮಂಜೂರು ಮಾಡಿದ್ದು, ಇದನ್ನು ಆರಂಭಿಸುವ ಸಂಬಂಧ ಶಾಸಕ ಎಚ್.ಎಂ. ಗಣೇಶ್ ಪ್ರಸಾದ್ ಪೊಲೀಸ್ ಅಧಿಕಾರಿಗಳ ಜತೆ ಸ್ಥಳ ಪರಿಶೀಲಿಸಿದರು.

ಪಟ್ಟಣದಲ್ಲಿ ದಿನೇ ದಿನೇ ವಾಹನ ಸಂಚಾರ ಹೆಚ್ಚಳವಾಗುತ್ತಿದ್ದು, ಸುಗಮ ಸಂಚಾರಕ್ಕೆ ಅವಕಾಶವಾಗುವಂತೆ ಟ್ರಾಫಿಕ್ ಪೊಲೀಸ್ ಸ್ಟೇಷನ್‌ಅನ್ನು ತೆರೆಯುವ ಉದ್ದೇಶವಾಗಿದೆ ಎಂದು ಸುದ್ದಿಗಾರರಿಗೆ ತಿಳಿಸಿದರು.

ಡಿವೈಎಸ್‌ಪಿ ಸ್ನೇಹಾರಾಜ್ ಮಾತನಾಡಿ, ಈಗಾಗಲೇ ಕಾರ್ಯ ನಿರ್ವಹಿಸುತ್ತಿರುವ ಪಟ್ಟಣದ ಪೊಲೀಸ್ ಠಾಣೆ ಆವರಣದಲ್ಲಿಯೇ ಪ್ರತ್ಯೇಕ ಕಟ್ಟಡವಿದ್ದು, ಅಗತ್ಯ ಪರಿಕರಗಳನ್ನು ಅಳವಡಿಸಲು ಸಾಕಷ್ಟು ಸ್ಥಳಾವಕಾಶವಿದೆ. ಆದರೆ ಸದ್ಯ ಪಟ್ಟಣದ ಪೊಲೀಸ್ ಠಾಣೆಗೆ ಅತಿ ಹೆಚ್ಚಿನ ದೂರುಗಳು ಬರುತ್ತಿವೆ. ಇದರಿಂದ ಠಾಣೆಯ ಆವರಣ ಸದಾಕಾಲ ಗಿಜಿಗುಡುತ್ತಿದೆ. ಅಲ್ಲದೆ ಪಟ್ಟಣದ ಮಾರ್ಗವಾಗಿ 2 ರಾಷ್ಟ್ರೀಯ ಹೆದ್ದಾರಿಗಳು ಹಾದುಹೋಗಿರುವುದರಿಂದ ಅಪಘಾತಗಳ ಸಂಖ್ಯೆಯೂ ಹೆಚ್ಚಾಗುತ್ತಿದೆ. ಜತೆಗೆ ನಿಯಮಬಾಹಿರವಾಗಿ ಸಂಚರಿಸುವ ಟಿಪ್ಪರುಗಳನ್ನು ವಶಕ್ಕೆ ಪಡೆದರೆ ಒಳಗೆ ನಿಲ್ಲಿಸಲು ಸ್ಥಳಾವಕಾಶವಿಲ್ಲದೆ ರಸ್ತೆ ಬದಿಯಲ್ಲಿಯೇ ನಿಲ್ಲಿಸಬೇಕಾಗುತ್ತದೆ. ಇಂಥ ಸಂದರ್ಭದಲ್ಲಿ ಟ್ರಾಫಿಕ್ ಠಾಣೆಯನ್ನು ತೆರೆದರೆ ಮತ್ತಷ್ಟು ವಾಹನಗಳನ್ನು ನಿಲ್ಲಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಅದಕ್ಕೆ ಪ್ರತ್ಯೇಕ ಸ್ಥಳ ಗುರ್ತಿಸಿ ಅಲ್ಲಿ ನೂತನ ಕಟ್ಟಡ ನಿರ್ಮಿಸಿ ಟ್ರಾಫಿಕ್ ಠಾಣೆ ಆರಂಭಿಸಿದರೆ ಯಾವುದೇ ಸಮಸ್ಯೆಯಾಗುವುದಿಲ್ಲ ಎಂದು ತಿಳಿಸಿದರು

ಚಿರತೆ ದಾಳಿಗೆ ಹಸು ಬಲಿ



ಚಾಮರಾಜನಗರ: ಚಿರತೆ ದಾಳಿಯಿಂದ ಹಸುವೊಂದು ಸಾವನ್ನಪ್ಪಿರುವ ಘಟನೆ ತಾಲೂಕಿನ ಪಣ್ಯದಹುಂಡಿಯಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಚರಣ್ ಎಂಬವರಿಗೆ ಸೇರಿದ ಹಸುವನ್ನು ತೋಟದಲ್ಲಿ ಕಟ್ಟಿ ಹಾಕಲಾಗಿತ್ತು. ಈ ವೇಳೆ ಚಿರತೆ ದಾಳಿ ನಡೆಸಿ ಹಸುವನ್ನು ಕೊಂದಿದೆ. ಈ ವೇಳೆ ಅಕ್ಕಪಕ್ಕದವರು ಕಿರುಚಿಕೊಂಡಾಗ ಚಿರತೆ ಸ್ಥಳದಿಂದ ಪರಾರಿಯಾಗಿದೆ. ವಿಷಯ ತಿಳಿದು ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಈ ಭಾಗದಲ್ಲಿ ಕಳೆದ ವರ್ಷವೂ ಇದೇ ರೀತಿಯ ಚಿರತೆ ದಾಳಿ ಸಂಭವಿಸಿ ಹಸುವೊಂದು ಮೃತಪಟ್ಟಿತ್ತು. ಮೃತ ಹಸುವಿನ ಮಾಲೀಕರಿಗೆ ಸರ್ಕಾರದಿಂದ ಸೂಕ್ತ ಪರಿಹಾರ ನೀಡಬೇಕು. ಚಿರತೆ ಸೆರೆಗೆ ಅರಣ್ಯ ಇಲಾಖೆ ತುರ್ತು ಕ್ರಮ ಕೈಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ಗ್ರಾಮಸ್ಥರು ಎಚ್ಚರಿಕೆ ನೀಡಿದ್ದಾರೆ.

ಆಯುಷ್ಮಾನ್ ಭಾರತ್ ಫಲಾನುಭವಿಗಳಿಂದ ಹಣ ವಸೂಲಿ ಮಾಡಿದರೆ ಕಠಿಣ ಕ್ರಮ

ಮಂಗಳೂರು: ಖಾಸಗಿ ಆಸ್ಪತ್ರೆಗಳು ಆಯುಷ್ಮಾನ್ ಭಾರತ್ ಯೋಜನೆಯ ಫಲಾನುಭವಿಗಳಿಗೆ ಸಂಪೂರ್ಣ ನಗದುರಹಿತ ಚಿಕಿತ್ಸೆ ನೀಡದೆ ಹಣ ಪಾವತಿಸುವಂತೆ ಒತ್ತಾಯಿಸು ತ್ತಿರುವ ಬಗ್ಗೆ ಬಂದಿರುವ ದೂರುಗಳ ಕುರಿತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು ಟಿ ಖಾದರ್ ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ.



ಅರ್ಹ ರೋಗಿಗಳಿಂದ ಖಾಸಗಿ ಆಸ್ಪತ್ರೆಗಳು ಹಣ ಪಾವತಿಸುವಂತೆ ಒತ್ತಾಯಿಸಿದರೆ, ಸಂಬಂಧಿತ ಆರೋಗ್ಯ ಮಿತ್ರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಎಚ್ಚರಿಕೆ ನೀಡಿದರು. ಆಯುಷ್ಮಾನ್ ಭಾರತ್ ಯೋಜನೆಯಡಿ ವಿಶೇಷ ವಾರ್ಡ್‌ಗಳನ್ನು ಆಯ್ಕೆ ಮಾಡುವ ರೋಗಿಗಳಿಗೂ ಸೌಲಭ್ಯವನ್ನು ವಿಸ್ತರಿಸುವ ಕುರಿತು ಸರ್ಕಾರ ಚಿಂತನೆ ನಡೆಸು ತ್ತಿದೆ. ಈ ವ್ಯವಸ್ಥೆಯಲ್ಲಿ ರೋಗಿಗಳು ವಿಶೇಷ ವಾರ್ಡ್‌ಗೆ ಸಂಬಂಧಿಸಿದ ಹೆಚ್ಚುವರಿ ಶುಲ್ಕವನ್ನು ಮಾತ್ರ ಪಾವತಿಸಬೇ ಕಾಗುತ್ತದೆ ಎಂದು ಖಾದರ್ ಹೇಳಿದರು. ವಿಮಾ ಕ್ಲೈಮ್‌ಗಳ ಅನುಮೋದನೆಯಲ್ಲಿ ಅನಗತ್ಯ ವಿಳಂಬ ಮಾಡದಂತೆ ವೈದ್ಯರು ಹಾಗೂ ಆಸ್ಪತ್ರೆಗಳ ಆಡಳಿತ ಮಂಡಳಿಗಳಿಗೆ ಎಚ್ಚರಿಕೆ ನೀಡಿದರು. ಇಂತಹ ವಿಳಂಬವನ್ನು ಸರ್ಕಾರ ಸಹಿಸುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ಇದಕ್ಕೂ ಮೊದಲು, ಹಿರಿಯ ಆರೋಗ್ಯ ಅಧಿಕಾರಿಗಳು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವೈದ್ಯರು ಸಮಯಪಾಲನೆ ಮಾಡ ಬೇಕು ಹಾಗೂ ರೋಗಿಗಳನ್ನು ಮಾನವೀಯತೆ ಮತ್ತು ಸೌಜನ್ಯದಿಂದ ನೋಡಿಕೊಳ್ಳಬೇಕು ಎಂದು ಸಚಿವರು ಸೂಚಿಸಿದರು.

ಜಿಲ್ಲಾ ಆರೋಗ್ಯಾಧಿಕಾರಿ ಕಚೇರಿಯಿಂದಲೇ ಸಿಸಿಟಿವಿ ಸಂಪರ್ಕದ ಮೂಲಕ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಾರ್ಯವೈಖರಿ ಯನ್ನು ಮೇಲ್ವಿಚಾರಣೆ ಮಾಡುವ ಕೇಂದ್ರೀಕೃತ ವ್ಯವಸ್ಥೆ ರೂಪಿಸುವ ಸಾಧ್ಯತೆಯನ್ನು ಪರಿಶೀಲಿಸುವಂತೆ ಅವರು ಜಿಲ್ಲಾ ಆರೋಗ್ಯಾಧಿಕಾರಿಗೆ ನಿರ್ದೇಶನ ನೀಡಿದರು.

ಸಭೆಯಲ್ಲಿ ಅಧಿಕಾರಿಗಳು ಹಲವಾರು ಕಾರ್ಯಾ ಚರಣಾ ಸವಾಲುಗಳನ್ನು ಸಚಿವರ ಗಮನಕ್ಕೆ ತಂದರು. ಆಂಬುಲೆನ್ಸ್‌ಗಳ ಕೊರತೆ, ಚಾಲಕರ ಕೊರತೆ ಹಾಗೂ ನಿವೃತ್ತಿಯ ಬಳಿಕ ಖಾಲಿ ಉಳಿದಿರುವ ಆಶಾ ಕಾರ್ಯಕರ್ತೆಯರ ಹುದ್ದೆಗಳ ಸಮಸ್ಯೆಗಳನ್ನು ವಿವರಿಸಿದರು. ಅಲ್ಲದೆ, ತೀವ್ರ ಅಸ್ವಸ್ಥರು ಮತ್ತು ಐಸಿಯು ರೋಗಿಗಳು ಕಡ್ಡಾಯ ಮುಖ–ದೃಢೀಕರಣ ಪ್ರಕ್ರಿಯೆಯಿಂದಾಗಿ ಆಯುಷ್ಮಾನ್ ಭಾರತ್ ಯೋಜನೆಯ ಸೌಲಭ್ಯ ಪಡೆಯಲು ತೊಂದರೆ ಅನುಭವಿಸು ತ್ತಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಗ್ರಾಮೀಣ ಪಿಎಚ್‌ಸಿಗಳ ವೈದ್ಯರ ವೇತನ ಹೆಚ್ಚಳ, ಸೇವಾ ಭದ್ರತೆ ಕುರಿತು ಪರಿಶೀಲನೆ: ಗ್ರಾಮೀಣ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರ ಕೊರತೆಯನ್ನು ನಿವಾರಿಸುವ ಉದ್ದೇಶದಿಂದ, ಗಿರಿಜನ, ಗುಡ್ಡಗಾಡು ಹಾಗೂ ದುರ್ಗಮ ಪ್ರದೇಶಗಳಲ್ಲಿ ಗುತ್ತಿಗೆ ಆಧಾರದಲ್ಲಿ ಸೇವೆ ಸಲ್ಲಿಸುತ್ತಿರುವ ವೈದ್ಯರ ವೇತನ ಹೆಚ್ಚಿಸುವ ಬೇಡಿಕೆಯನ್ನು ಸರ್ಕಾರ ಪರಿಗಣಿಸಲಿದೆ ಎಂದು ಯು.ಟಿ ಖಾದರ್ ಹೇಳಿದರು. ಇದಲ್ಲದೆ, ನಿರಂತರ ಮೂರು ವರ್ಷಗಳ ಸೇವೆಯ ನಂತರ ಅವರ ಸೇವೆಯನ್ನು ಕಾಯಂ ಮಾಡುವ ಕುರಿತು ಕೂಡ ಸರ್ಕಾರ ಪರಿಶೀಲನೆ ನಡೆಸಲಿದೆ ಎಂದು ಸಚಿವರು ಭರವಸೆ ನೀಡಿದರು.

ಮೈಸೂರು ಪಾಲಿಕೆ ವಲಯ ಕಚೇರಿ 2ರಲ್ಲಿ ಲೋಕಾಯುಕ್ತ ಪೊಲೀಸರಿಂದ ಪರಿಶೀಲನೆ

ಮೈಸೂರು,ಜೂ.9(ಪಿಎಂ)– ಆಸ್ತಿಗಳ ಇ–ಖಾತಾ ಹಾಗೂ ವಿವಿಧ ರೀತಿಯ ಪರವಾನಗಿ ವಿಲೇವಾರಿ ಮಾಡುವ ಸಂಬಂಧ ಕಾರ್ಯವೈಖರಿ ಬಗ್ಗೆ ಮೈಸೂರು ಮಹಾನಗರಪಾಲಿಕೆಯ ವಲಯ ಕಚೇರಿ 2ರಲ್ಲಿ ಲೋಕಾಯುಕ್ತ ಪೊಲೀಸರು ಮಂಗಳವಾರ ಪರಿಶೀಲನೆ ನಡೆಸಿದರು.

ಜಯನಗರದಲ್ಲಿರುವ ವಲಯ ಕಚೇರಿ 2ರಲ್ಲಿ ಸಂಬಂಧಿಸಿದ ಕಡತಗಳನ್ನು ಪರಿ ಶೀಲಿಸಿ ಅಧಿಕಾರಿ ಹಾಗೂ ಸಿಬ್ಬಂದಿ ಯಿಂದ ಹಲವು ಮಾಹಿತಿ ಕಲೆ ಹಾಕಲಾ ಯಿತು. ಆಸ್ತಿಗಳಿಗೆ ಇ–ಖಾತಾ ಮಾಡಿ ಕೊಡುವಲ್ಲಿ ವಿನಾಕಾರಣ ವಿಳಂಬ ಹಾಗೂ ವಿವಿಧ ರೀತಿಯ ಪರವಾನಗಿ ವಿಲೇವಾರಿ ಮಾಡದೇ ಬಾಕಿ ಉಳಿಸಿ ಕೊಂಡಿರುವ ದೂರುಗಳ ಹಿನ್ನೆಲೆಯಲ್ಲಿ ಹಲವು ತಿಂಗಳ ಹಿಂದೆ ಲೋಕಾಯುಕ್ತ ಪೊಲೀಸರು ಈ ವಲಯ ಕಚೇರಿ ಮೇಲೆ ದಾಳಿ ನಡೆಸಿದ್ದರು.

ಅಂತೆಯೇ ಇಂದು ಸಂಬಂಧಿಸಿದ ಕಡತಗಳನ್ನು ಅವಲೋಕಿಸಿ ಕೆಲಸ ಕಾರ್ಯಗಳು ಸಮರ್ಪಕವಾಗಿ ನಡೆ ಯುತ್ತಿದೆಯೇ ಎಂದು ಪರಿಶೀಲಿಸ ಲಾಯಿತು. ಲೋಕಾಯುಕ್ತ ಡಿವೈಎಸ್‌ಪಿ ಹೆಚ್.ಎಂ.ಶೈಲೇಂದ್ರ ಮತ್ತು ತಂಡ ದಿಂದ ಪರಿಶೀಲನೆ ನಡೆಯಿತು.



ಮೈಸೂರಿನ ಜಯನಗರದಲ್ಲಿರುವ ಮಹಾನಗರ ಪಾಲಿಕೆ ವಲಯ ಕಚೇರಿ 2ರಲ್ಲಿ ಲೋಕಾಯುಕ್ತ ಪೊಲೀಸರು ಮಂಗಳವಾರ ಪರಿಶೀಲನೆ ನಡೆಸಿದರು.

ಈ ಸಂಬಂಧ 'ಮೈಸೂರು ಮಿತ್ರ' ನೊಂದಿಗೆ ಮಾತನಾಡಿದ ಲೋಕಾಯುಕ್ತ ಎಸ್‌ಪಿ ಟಿ.ಜೆ.ಉದೇಶ್, ಇದು ದಾಳಿ ಯಲ್ಲ. ಇ ಸ್ವತ್ತು ಸಮರ್ಪಕವಾಗಿ ಮಾಡ ದಿರುವುದು ಹಾಗೂ ವಿವಿಧ ರೀತಿಯ ಪರವಾನಗಿಗಳನ್ನು ನೀಡದೇ ಬಾಕಿ ಉಳಿಸಿಕೊಂಡಿರುವ ಬಗ್ಗೆ ದೂರುಗಳು ಕೇಳಿ ಬಂದಿದ್ದ ಹಿನ್ನೆಲೆಯಲ್ಲಿ ಏಳೆಂಟು ತಿಂಗಳ ಹಿಂದೆ ಈ ಕಚೇರಿ ಮೇಲೆ ದಾಳಿ ನಡೆಸಿದ್ದೆವು. ಅದರ ಮುಂದು ವರೆದ ಭಾಗವಾಗಿ ಇಂದು ಕೆಲಸ ಕಾರ್ಯಗಳು ಪಾರದರ್ಶಕವಾಗಿ ನಡೆಯು ತ್ತಿವೆಯೇ ಎಂದು ಪರಿಶೀಲನಾ ಕಾರ್ಯ ನಡೆಸಿದ್ದೇವೆ ಎಂದು ತಿಳಿಸಿದರು.

ದೂರುಗಳ ಹಿನ್ನೆಲೆಯಲ್ಲಿ ಹಿಂದೆ ಸ್ವಯಂಪ್ರೇರಿತವಾಗಿ ದಾಳಿ ನಡೆಸಿದ್ದೆವು. ಯಾವುದೇ ಪ್ರತ್ಯೇಕ ದೂರು ಬಂದಿರ ಲಿಲ್ಲ. ಆಗ ಬಾಕಿ ಉಳಿಸಿಕೊಂಡಿದ್ದನ್ನು ವಿಲೇವಾರಿ ಮಾಡಿದ್ದಾರೆಯೇ ಎಂಬ ಪರಿಶೀಲನೆ ಮಾಡುತ್ತಿದ್ದೇವೆ. ಈ ಬಗ್ಗೆ ವರದಿ ಸಿದ್ದಪಡಿಸಿ ಲೋಕಾಯುಕ್ತಕ್ಕೆ ಕಳು ಹಿಸಲಿದ್ದೇವೆ ಎಂದು ಹೇಳಿದರು.

ಆರೋಗ್ಯ ನಿರೀಕ್ಷಕರ ಸ್ತುತ್ಯರ್ಹ ಕಾರ್ಯ

20 ಸರ್ಕಾರಿ ಶಾಲೆಗಳಿಗೆ ಶಾಲಾ ಪರಿಕರಗಳ ವಿತರಣೆ



ಸರ್ಕಾರಿ ಪ್ರಾಥಮಿಕ ಶಾಲಾ ಮಕ್ಕಳಿಗೆ ಉಚಿತ ಪೆನ್ನು, ಪುಸ್ತಕ, ಪೆನ್ಸಿಲ್, ರಬ್ಬರ್, ಡ್ರಾಯಿಂಗ್ ಪುಸ್ತಕ ಜಾಮಿಟ್ರಿ ಬಾಕ್ಸ್ ಇತ್ಯಾದಿ ಪರಿಕರಗಳನ್ನು ಕಡಕೊಳ ಪಟ್ಟಣ ಪಂಚಾಯಿತಿ ಆರೋಗ್ಯ ನಿರೀಕ್ಷಕ ಮಂಜುನಾಥ್ ವಿತರಿಸಿದರು.

ಮೈಸೂರು: ಸರ್ಕಾರಿ ಶಾಲೆಗಳ ಬಲ ವರ್ಧನೆಗೆ ಸರ್ಕಾರಗಳು ಇನ್ನಿಲ್ಲದ ಪ್ರಯ ತ್ನಿಸುತ್ತಿರುವ ನಿಟ್ಟಿನಲ್ಲಿ ಆರೋಗ್ಯ ನಿರೀ ಕ್ಷಕರೊಬ್ಬರು ತಮ್ಮ ಅಳಿಲು ಸೇವೆ ಮೂಲಕ ಸರ್ಕಾರಿ ಶಾಲಾ ಮಕ್ಕಳ ಬೆನ್ನಿಗೆ ನಿಂತಿದ್ದಾರೆ.

ಕಡಕೊಳ ಪಟ್ಟಣ ಪಂಚಾಯಿತಿ ಆರೋಗ್ಯ ನಿರೀಕ್ಷಕ ಮಂಜುನಾಥ್ ಇಂತಹ ದೊಂದು ಅಳಿಲು ಸೇವೆಗೆ ಮುಂದಾಗಿದ್ದಾರೆ.

ಅಗ್ರಹಾರ ಮೂಲದ ನಿವಾಸಿ ಹಾಗೂ ಹಿಂದೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ಜಿಲ್ಲಾ ನಗರ ಯೋಜನಾ ಕಚೇರಿಯಲ್ಲಿ ತಾಂತ್ರಿಕ ಸಹಾಯಕರಾಗಿದ್ದವರು. ಮೂರು ವರ್ಷ ಗಳಿಂದ ಕಡಕೊಳ ಪಟ್ಟಣ ಪಂಚಾಯಿತಿ ಆರೋಗ್ಯ ನಿರೀಕ್ಷಕರಾಗಿ ಸೇವೆ ಸಲ್ಲಿಸು ತ್ತಿದ್ದಾರೆ. ಈಗ ಶಾಲೆ ಪ್ರಾರಂಭಗೊಂಡಿದ್ದು, 20 ಸರ್ಕಾರಿ ಪ್ರಾಥಮಿಕ ಶಾಲಾ ಮಕ್ಕಳಿಗೆ ಉಚಿತ ಪೆನ್ನು, ಪುಸ್ತಕ, ಪೆನ್ಸಿಲ್, ರಬ್ಬರ್, ಡ್ರಾಯಿಂಗ್ ಪುಸ್ತಕ ಜಾಮಿಟ್ರಿ ಬಾಕ್ಸ್ ಇತ್ಯಾದಿ ಪರಿಕರಗಳನ್ನು ನೀಡುತ್ತಿದ್ದಾರೆ.

ಈ ಕುರಿತು ಮಾತನಾಡಿದ ಮಂಜುನಾಥ್, ಸ್ಥಿತಿವಂತರು ಖಾಸಗಿ ಶಾಲೆಗಳತ್ತ ಮುಖ ಮಾಡುತ್ತಾರೆ. ಉಳಿದವರು ಸಾಮಾನ್ಯ ವಾಗಿ ಸರ್ಕಾರಿ ಶಾಲೆಗೆ ಬರುತ್ತಾರೆ. ಅಂತ ಹವರ ಸ್ಥಿತಿಯ ಅರಿವಿದೆ. ಅದೇ ಕಾರಣ ಕ್ಕಾಗಿ ಶಿಕ್ಷಣದ ಮೌಲ್ಯ ಹೆಚ್ಚಿಸಲು ಮಕ್ಕಳಿಗೆ ಈ ಅಳಿಲು ಸೇವೆಯನ್ನು ಮೂರು ವರ್ಷ ದಿಂದ ಮಾಡುತ್ತಿದ್ದೇನೆಂದು ಸಂತಸ ಹಂಚಿಕೊಂಡರು. ಈ ಮೂಲಕವಾದರೂ ಸರ್ಕಾರಿ ಶಾಲೆಗಳ ನೋಂದಣಿ ಸಂಖ್ಯೆ ಹೆಚ್ಚಿ ಮೌಲ್ಯಯುತ ಶಿಕ್ಷಣ ದೊರಕುವಂ ತಾಗಬೇಕು ಎಂಬ ಅಭಿಲಾಷೆ ವ್ಯಕ್ತ ಪಡಿಸಿದರು. ಕೃಷ್ಣಮೂರ್ತಿಪುರಂನಲ್ಲಿ ರುವ ಸರ್ಕಾರಿ ಶಾಲಾ ಮಕ್ಕಳಿಗೆ ಶಾಲಾ ಪರಿಕರಗಳನ್ನು ವಿತರಿಸುವ ಮೂಲಕ ತಮ್ಮ ಶೈಕ್ಷಣಿಕ ಸೇವಾ ಕಾರ್ಯಕ್ಕೆ ಚಾಲನೆ ನೀಡಿ ದರು. ಈ ವೇಳೆ ಶಾಲೆಯ ಮುಖ್ಯ ಶಿಕ್ಷಕಿ ಚಂಪಾ, ಸಮಾಜ ಸೇವಕ ಎಸ್. ಎನ್. ರಾಜೇಶ್ ಇನ್ನಿತರರು ಹಾಜರಿದ್ದರು.

ಇಂದೋರ್‌ನಲ್ಲಿ 5 ದಿನ ಬ್ರಿಕ್ಸ್ ಶೃಂಗಸಭೆ: ಜಾಗತಿಕ ಕೃಷಿ ವಲಯದ ಕುರಿತು ಚರ್ಚೆ



ಭಾರತದ ಅತ್ಯಂತ ಸ್ವಚ್ಛ ನಗರ ಹಾಗೂ ಮಧ್ಯಪ್ರದೇಶದ ಆರ್ಥಿಕ ರಾಜಧಾನಿ ಎಂದೇ ಹೆಸರಾಗಿರುವ ಇಂದೋರ್‌ನಲ್ಲಿ ಈ ಸಭೆ ನಡೆಯುತ್ತಿರುವುದು ವಿಶೇಷವಾಗಿದೆ. ಇದೇ ಸಂದರ್ಭದಲ್ಲಿ ಮಧ್ಯ ಪ್ರದೇಶ ಸರ್ಕಾರವು ಪ್ರಸಕ್ತ 2026ನೇ ವರ್ಷವನ್ನು ರೈತರ ಕಲ್ಯಾಣ ವರ್ಷ ಎಂದು ಘೋಷಿಸಿರು ವುದು ಈ ಶೃಂಗ ಸಭೆಯ ಮಹತ್ವವನ್ನು ಮತ್ತಷ್ಟು ಹೆಚ್ಚಿಸಿದೆ.

ಇಂದೋರ್: ಬ್ರಿಕ್ಸ್ ಸದಸ್ಯ ರಾಷ್ಟ್ರಗಳ ಐದು ದಿನಗಳ ಸಭೆಯು ಮಂಗಳವಾರ ಮಧ್ಯಪ್ರದೇಶದ ಇಂದೋರ್‌ನಲ್ಲಿ ಆರಂಭವಾಗಿದೆ. ಈ ಸಭೆಯಲ್ಲಿ ಕೃಷಿ ವಲಯುದಲ್ಲಿ ಆಹಾರ ಭದ್ರತೆ, ಹವಾಮಾನ ಸ್ನೇಹಿ ಸ್ಮಾರ್ಟ್ ಕೃಷಿ, ಜಾಗತಿಕ ಕೃಷಿ ವ್ಯಾಪಾರ ಮತ್ತು ರೈತರ ಕಲ್ಯಾಣ ಸೇರಿದಂತೆ ವಿವಿಧ ಪ್ರಮುಖ ವಿಷಯಗಳ ಕುರಿತು ಚರ್ಚೆ ನಡೆಯ ಲಿದೆ. ಭಾರತದ ಬ್ರಿಕ್ಸ್ ಅಧ್ಯಕ್ಷತೆಯಲ್ಲಿ ನಡೆಯುತ್ತಿರುವ ಈ ಸಮ್ಮೇಳನದ ಭಾಗ ವಾಗಿ, ಸದಸ್ಯ ರಾಷ್ಟ್ರಗಳ ಉನ್ನತ ಅಧಿ ಕಾರಿಗಳನ್ನೊಳಗೊಂಡ ಕೃಷಿ ಕಾರ್ಯ ನಿರತ ಗುಂಪು ಜೂನ್ 11ರವರೆಗೆ ಸುದೀರ್ಘ ಸಮಾಲೋಚನೆ ನಡೆಸಲಿದೆ. ಈ ಸಭೆಯ ನಂತರ, ಜೂನ್ 12 ಮತ್ತು 13ರಂದು ಬ್ರಿಕ್ಸ್ ರಾಷ್ಟ್ರಗಳ ಕೃಷಿ ಸಚಿವರ ಮಹತ್ವದ ಸಭೆ ನಡೆಯಲಿದೆ.

ಭಾರತದ ಕೃಷಿ ಮತ್ತು ರೈತ ಕಲ್ಯಾಣ ಇಲಾಖೆಯ ಕಾರ್ಯದರ್ಶಿ ಅತಿಶ್ ಚಂದ್ರ ಅವರು ಸಭೆಯ ಉದ್ಘಾಟನಾ ಅಧಿವೇಶನದ ನೇತೃತ್ವ ವಹಿಸಿದ್ದರು.

ಬ್ರಿಕ್ಸ್ ಎಂಬುದು ವಿಶ್ವದ ಪ್ರಮುಖ 11 ಉದಯೋನ್ಮುಖ ಆರ್ಥಿಕತೆಗಳ ಒಕ್ಕೂಟವಾಗಿದ್ದು, ಇದರಲ್ಲಿ ಬ್ರೆಜಿಲ್, ರಷ್ಯಾ, ಭಾರತ, ಚೀನಾ, ದಕ್ಷಿಣ ಆಫ್ರಿಕಾ, ಈಜಿಪ್ಟ್, ಇಥಿಯೋಪಿಯಾ, ಇರಾನ್, ಸೌದಿ ಅರೇಬಿಯಾ, ಯುನೈಟೆಡ್ ಅರಬ್ ಎಮಿರೇಟ್ಸ್ ಮತ್ತು ಇಂಡೋ ನೇಷ್ಯಾ ಸದಸ್ಯ ರಾಷ್ಟ್ರಗಳಾಗಿವೆ.

ಐದು ದಿನಗಳ ಕಾಲ ನಡೆಯಲಿರುವ ಈ ಸಮ್ಮೇಳನದಲ್ಲಿ ಆಹಾರ ಭದ್ರತೆ, ರೈತರ ಕಲ್ಯಾಣ, ಪೌಷ್ಟಿಕಾಂಶ, ಹವಾ ಮಾನ ಸ್ನೇಹಿ ಸ್ಮಾರ್ಟ್ ಕೃಷಿ, ಅಂತರ ರಾಷ್ಟ್ರೀಯ ಕೃಷಿ ವ್ಯಾಪಾರಕ್ಕೆ ಉತ್ತೇಜನ, ಪೂರೈಕೆ ಸರಪಳಿ ಬಲಪಡಿಸುವುದು, ಡಿಜಿಟಲ್ ಕೃಷಿ, ಜ್ಞಾನ ವಿನಿಮಯ ಮತ್ತು ಕೃಷಿ ಸಂಶೋಧನೆಗಳ ಬಗ್ಗೆ ಅಧಿ ಕಾರಿಗಳು ಚರ್ಚಿಸಲಿದ್ದಾರೆ.

ಇದರೊಂದಿಗೆ ಕೃಷಿ ವಲಯದಲ್ಲಿ ಕೃತಕ ಬುದ್ಧಿಮತ್ತೆ ಮತ್ತು ರೊಬೊಟಿಕ್ಸ್ ತಂತ್ರ ಜ್ಞಾನದ ಬಳಕೆ ಕುರಿತು ವಿಸ್ತೃತ ವಾಗಿ ಚರ್ಚಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಾಲ್ವಡಿ ಅವರು ಆದರ್ಶ ಪ್ರಜಾಪ್ರಭುತ್ವವಾದಿ ಅರಸ

ಯುವರಾಜ ಕಾಲೇಜಿನಲ್ಲಿ ನಡೆದ ಜಯಂತ್ಯೋತ್ಸವದಲ್ಲಿ ಗಣ್ಯರ ಬಣ್ಣನೆ



ಯುವರಾಜ ಕಾಲೇಜಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಆಚರಿಸಲಾಯಿತು.

ಮೈಸೂರು, ಜೂ. 4– ಮೈಸೂರಿನ ಯುವರಾಜ ಕಾಲೇಜಿನಲ್ಲಿ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜನ್ಮ ದಿನಾಚರಣೆ ಆಯೋಜಿಸಲಾಗಿತ್ತು.

ಕಾಲೇಜಿನ ಪ್ರಾಧ್ಯಾಪಕ ಹಾಗೂ ಆಡಳಿತಾಧಿಕಾರಿ ಪ್ರೊ.ಹೆಚ್.ಎಸ್. ಜಯಂತ್ ಮಾತನಾಡಿ, ರಾಜ ಪರಂಪರೆ ಯಲ್ಲೂ ಪ್ರಜಾಪ್ರಭುತ್ವ ಮಾದರಿ ಆಡಳಿತ ನಡೆಸಿ ಮೈಸೂರು ಸಂಸ್ಥಾನದ ಸರ್ವಾಂ ಗೀಣ ಅಭಿವೃದ್ಧಿಗೆ ಅಪಾರವಾಗಿ ಶ್ರಮಿಸಿದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಸಾಂಸ್ಕೃತಿಕ ರಾಮರಾಜ್ಯವನ್ನಾಗಿ ರೂಪಿಸಿ ಮಾದರಿಯಾದವರು ಎಂದು ಬಣ್ಣಿಸಿದರು.

ಕಾಲೇಜಿನ ಪ್ರಭಾರ ಪ್ರಾಂಶುಪಾಲ ಪ್ರೊ.ಕೆ.ಅಜಯಕುಮಾರ್ ಮಾತನಾಡಿ, ಮೈಸೂರು ಸಂಸ್ಥಾನದಲ್ಲಿ ಸರ್ವರಿಗೂ ಅಕ್ಷರ ಮತ್ತು ಅನ್ನಕ್ಕೆ ದಾರಿ ಮಾಡಿಕೊಟ್ಟ ಮಹಾನ್ ಮಾನವತಾವಾದಿ ಹಾಗೂ ಸಾಮಾಜಿಕ ನ್ಯಾಯದ ಮಹಾನ್ ಶಿಲ್ಪಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕೊಡುಗೆ ಅಪೂರ್ವವಾದುದು ಎಂದರು.

ಕಾರ್ಯಕ್ರಮದಲ್ಲಿ ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ.ಸಿ.ಡಿ.ಪರಶುರಾಮ, ಪ್ರಾಧ್ಯಾಪಕರಾದ ಪ್ರೊ.ಜಿ.ಕೃಷ್ಣಮೂರ್ತಿ, ಪ್ರೊ.ಎಸ್.ಸುರೇಶ್, ಪ್ರೊ.ಶೇಖರನಾಯಕ, ಪ್ರೊ.ಜಿ.ಶ್ರೀನಿವಾಸ್, ಡಾ.ಎಂ.ಕೆ.ಗಿರೀಶ್ ಚಂದ್ರ, ಡಾ.ಪಿ.ಕೆ.ಮಹೇಶ್ವರ, ಡಾ.ಅನಿಲ್ ಕುಮಾರ್, ಅಧೀಕ್ಷಕರಾದ ಜೆ.ಹೇಮಂತ್, ಯೋಗೇಶ್ ಮತ್ತಿತರರು ಉಪಸ್ಥಿತರಿದ್ದರು. ಕಾರ್ಯಕ್ರಮಕ್ಕೂ ಮುನ್ನ ಗಿಡಗಳನ್ನು ನೆಟ್ಟು ನೀರೆರೆಯಲಾಯಿತು. ವಿದ್ಯಾರ್ಥಿನಿ ಸೌಜನ್ಯ ಕಾರ್ಯಕ್ರಮ ನಿರೂಪಿಸಿದರು.

ವಸತಿನಿಲಯ ಪ್ರವೇಶಾತಿಗೆ ಅರ್ಜಿ ಆಹ್ವಾನ

ಮೈಸೂರು,ಜೂ.9–ಮೈಸೂರಿನ ದಟ್ಟಗಳ್ಳಿಯಲ್ಲಿ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಹಯೋಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ದಿವ್ಯಜ್ಯೋತಿ ಚಾರಿ ಟಬಲ್ ಟ್ರಸ್ಟ್ ವತಿಯಿಂದ 2026–27ನೇ ಸಾಲಿನ ವಸತಿ ನಿಲಯ ಪ್ರವೇಶಕ್ಕೆ ವಿಶೇಷಚೇತನ ಉದ್ಯೋಗಸ್ಥ ಮಹಿಳೆ ಯರು, ಮೆಟ್ರಿಕ್ ಶಿಕ್ಷಣ ನಂತರದ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿ ಯರಿಂದ ಅರ್ಜಿ ಆಹ್ವಾನಿಸಿದೆ. ಹೆಚ್ಚಿನ ಮಾಹಿತಿಗೆ ದೂ: 9742126919, 8618549091 ಸಂಪರ್ಕಿಸಬಹುದು.

ಶ್ರೀವಿವೇಕ ಬಾಲೋದ್ಯಾನ ಶಾಲೆಯಲ್ಲಿ ಪರಿಸರ ದಿನಾಚರಣೆ



ಶ್ರೀ ವಿವೇಕ ಬಾಲೋದ್ಯಾನ ಶಾಲೆಯಲ್ಲಿ ಪರಿಸರ ಸಂರಕ್ಷಣೆ ಶಪಥ ಮಾಡಿದರು.

ಮೈಸೂರು, ಜೂ.9– ಮೈಸೂರಿನ ಜಯನಗರದಲ್ಲಿರುವ ಶ್ರೀ ವಿವೇಕ ಬಾಲೋದ್ಯಾನ ಶಾಲೆಯಲ್ಲಿ ವಿಶ್ವಪರಿಸರ ದಿನಾಚರಣೆಯನ್ನು ಆಚರಿಸಲಾಯಿತು.

ಕಾರ್ಯಕ್ರಮದ ಅಂಗವಾಗಿ ವಿದ್ಯಾರ್ಥಿ ಗಳಿಗೆ ಚಿತ್ರ ಬಿಡಿಸುವ ಹಾಗೂ ಬಣ್ಣ ಹಚ್ಚುವ ಸ್ಪರ್ಧೆ, ಸ್ಲೋಗನ್ ರೈಟಿಂಗ್, ಪೋಸ್ಟರ್ ಮೇಕಿಂಗ್, ಸ್ಪರ್ಧೆಗಳನ್ನು ಏರ್ಪ ಡಿಸಲಾಗಿತ್ತು. ವೇದಿಕೆ ಮೇಲೆ ಪರಿಸರದ ಗೀತೆ ಹಾಗೂ ಪರಿಸರ ಸಂರಕ್ಷಣೆ ಕುರಿತ ಕಿರುನಾಟಕ ಮತ್ತು ಭಾಷಣ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋ ಜಿಸಲಾಗಿತ್ತು. ಮಕ್ಕಳೆಲ್ಲರೂ ಹಸಿರು ಬಣ್ಣದ ಉಡುಗೆ ತೊಡುಗೆಗಳನ್ನು ತೊಟ್ಟು ಸಂಭ್ರಮದಲ್ಲಿ ಭಾಗವಹಿಸಿದ್ದರು. ಇದಕ್ಕೂ ಮುನ್ನ ವಿದ್ಯಾರ್ಥಿಗಳೆಲ್ಲರೂ ಪರಿಸರ ಸಂರಕ್ಷಣೆಯ ಘೋಷಣೆಗಳನ್ನು ಬರೆದ ಫಲಕಗಳನ್ನು ಹಿಡಿದು ಜಯನಗರದ ಕೆಲವು ಭಾಗಗಳಲ್ಲಿ ಜಾಥಾ ನಡೆಸಿದರು.

ಶಾಲೆಯ ಆಡಳಿತ ಮಂಡಳಿ ಕಾರ್ಯ ದರ್ಶಿ ಎಂ.ಎಸ್.ನಾಗೇಶ್ ಕಾರ್ಯಕ್ರಮ ಕುರಿತು ಮಾತನಾಡಿ, ಪರಿಸರ ನಾಶ ವಾದರೆ ಇಡೀ ಮಾನವ ಕುಲವೇ ನಾಶ ವಾದಂತೆ. ಹಾಗಾಗಿ ನಾವೆಲ್ಲರೂ ಪರಿಸರ ಸಂರಕ್ಷಣೆ ಮಾಡುವ ಮೂಲಕ ನಮ್ಮ ಮುಂದಿನ ತಲೆಮಾರಿನವರಿಗೆ ಉತ್ತಮ ಪರಿಸರ ಉಳಿಸಬೇಕಾಗಿದೆ. ಈ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ಪ್ರತಿ ವರ್ಷ ನಮ್ಮ ಶಾಲೆಯಲ್ಲಿ ಈ ಕಾರ್ಯಕ್ರಮ ವನ್ನು ಆಚರಿಸಿಕೊಂಡು ಬಂದಿದ್ದೇವೆ ಎಂದರು.

ಈ ವೇಳೆ ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯ ಆಡಳಿತಾಧಿಕಾರಿ ಭವಾನಿ ನಾಗೇಶ್, ಪ್ರಾಂಶುಪಾಲೆ ಸುಮ, ಶಿಕ್ಷಣ ಸಂಯೋಜಕ ವಿಶ್ವಾಸ್ ಪ್ರೇಮ್‌ಕುಮಾರ್, ಮಲ್ಲಿಕಾ ಡಿ.ರಾವ್ ಉಪಸ್ಥಿತರಿದ್ದರು.

ಮಂಡ್ಯ ಜಿಲ್ಲಾ ಪ.ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘದ ನೂತನ ಪದಾಧಿಕಾರಿಗಳಿಗೆ ಅಭಿನಂದನೆ...




ಮಂಡ್ಯ ಜಿಲ್ಲಾ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘದ 2026–2031ನೇ ಸಾಲಿನ ನೂತನ ಪದಾಧಿಕಾರಿಗಳನ್ನು ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಅಭಿನಂದಿಸಿದರು. ಸಂಘದ ಅಧ್ಯಕ್ಷ ಆರ್.ಎಂ.ಚೆನ್ನಕೃಷ್ಣಯ್ಯ, ಉಪಾಧ್ಯಕ್ಷೆ ಬಿ.ಎಸ್.ಲತಾ, ಪ್ರಧಾನ ಕಾರ್ಯದರ್ಶಿ ಚಂದ್ರ ಲಿಂಗ, ಕಾರ್ಯಾಧ್ಯಕ್ಷ ಡಿ.ಪಿ.ವೆಂಕಟೇಗೌಡ, ಕಾರ್ಯದರ್ಶಿ ಟಿ.ವಿ.ಶಿವಕುಮಾರ್, ಜಂಟಿ ಕಾರ್ಯದರ್ಶಿ ಬಿ.ಎಸ್.ರವೀಲ, ಖಜಾಂಚಿ ಕೆ.ಶ್ರೀನಿವಾಸ ಇನ್ನಿತರ ಪದಾಧಿಕಾರಿಗಳು, ಉಪನ್ಯಾಸಕರು ಚಿತ್ರದಲ್ಲಿದ್ದಾರೆ.

ಪಿಹೆಚ್.ಡಿ ಪದವಿ

ಮೈಸೂರು: ಡಾ. ಬಿ.ಟಿ.ಸಂಪತ್ ಕುಮಾರ್ ಅವರ ಮಾರ್ಗದರ್ಶನದಲ್ಲಿ ಸುಲಕ್ಷಣ.ಹೆಚ್.ವಿ ಅವರು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಷಯದಲ್ಲಿ ಸಂಶೋ ಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ತುಮಕೂರು ವಿಶ್ವವಿದ್ಯಾ ನಿಲಯ ಪಿಹೆಚ್.ಡಿ ಪದವಿಗೆ ಅಂಗೀಕರಿ ಸಿದೆ. ಇವರು ಪ್ರಸ್ತುತ ಮೈಸೂರಿನ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಗ್ರಂಥಪಾಲಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.



ಸಚಿವ ಮುನಿಯಪ್ಪಗೆ ಅಭಿನಂದನೆ...



ಆಹಾರ ಖಾತೆ ನೂತನ ಸಚಿವ ಕೆ.ಹೆಚ್.ಮುನಿಯಪ್ಪ ಅವರನ್ನು ಬೆಂಗಳೂರು ನಿವಾಸದಲ್ಲಿ ಭೇಟಿ ಮಾಡಿದ ಪರಿಶಿಷ್ಟ ಜಾತಿ ವಿಭಾಗದ ಸದಸ್ಯ ರಾದ ಕನಕಮೂರ್ತಿ ಹಡಜನ, ಮಹ ದೇವಮ್ಮ, ಜಯಲಕ್ಷ್ಮಿ ಅಭಿನಂದಿಸಿದರು.

ಜೂ.12ರಿಂದ ಸಹಸ್ರ ಕಲಶ ಪೂಜೆ

ಮೈಸೂರು,ಜೂ.9–ಮೈಸೂರಿನ ಚಾಮುಂಡಿಬೆಟ್ಟದ ಪಾದದ ಬಳಿಯ ಅಯ್ಯಪ್ಪಸ್ವಾಮಿ ಮತ್ತು ಗುರುವಾಯೂರಪ್ಪನ್ ದೇವಸ್ಥಾನದಲ್ಲಿ ಜೂ.12ರಿಂದ 19ರವರೆಗೆ ಸಹಸ್ರ ಕಲಶ ಪೂಜಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಅಂದು ದೇವಸ್ಥಾನದಲ್ಲಿ ಶ್ರೀ ಅಯ್ಯಪ್ಪಸ್ವಾಮಿ ಮತ್ತು ಗುರುವಾಯೂರಪ್ಪನ್‌ಗೆ ಕಲಶ ಪೂಜೆ, ಹೋಮ, ಅಭಿಷೇಕ, ಅಲಂಕಾರ, ಭಗವತಿ ಸೇವೆ ಪೂಜೆಗಳು ಗುರುವಾಯೂರ್ ತಂತ್ರಿಗಳಾದ ಬ್ರಹ್ಮಶ್ರೀ ಡಾ.ಚೆನ್ನಾಸ್ ದಿನೇಶನ್ ನಂಬೂದರಿ ಪಾಡ್ ತಂಡದವರ ನೇತೃತ್ವದಲ್ಲಿ ನಡೆಯಲಿವೆ ಎಂದು ದೇವಸ್ಥಾನದ ಪೂಜಾ ಸಮಿತಿಯ ಕಾರ್ಯದರ್ಶಿ, ಆರ್.ಹರಿದಾಸ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈಜು ತರಬೇತುದಾರ ಹರ್ಷ ನಿಧನ



ಮೈಸೂರು,ಜೂ.9–ಮೈಸೂರಿನ ಜೆ.ಪಿ.ನಗರದಲ್ಲಿರುವ ಜಿಎಸ್‌ಎನ್‌ಲ್ಲಿ ಈಜು ತರಬೇತುದಾರರಾಗಿ ಕಾರ್ಯನಿರ್ವಹಿಸುತ್ತಿದ್ದ ಹರ್ಷ (28) ಭಾನುವಾರ ನಿಧನರಾದರು. ತಿ.ನರಸೀಪುರ ತಾಲೂಕಿನ ತಲಕಾಡಿನ ಅಂಬೇಡ್ಕರ್ ಕಾಲೋನಿಯ ವಾಸಿ ಮಾದೇವ ಮತ್ತು ಗೌರಮ್ಮ ಅವರ ಪುತ್ರ ಹರ್ಷ ಅವರಿಗೆ ಇಬ್ಬರು ಸಹೋದರರು ಅವರ ಅಂತ್ಯಕ್ರಿಯೆ ಹುಟ್ಟೂರು ತಲಕಾಡಿನಲ್ಲಿ ಸೋಮವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪರಿಸರ ಸಂರಕ್ಷಣೆ ನಿಟ್ಟಿನಲ್ಲಿ ಗಂಭೀರ ಚಿಂತನೆ ಅವಶ್ಯ

- ಬಾಗಲಕೋಟೆ ತೋಟಗಾರಿಕೆ ವಿವಿ ಕುಲಪತಿ ಡಾ.ವಿಷ್ಣುವರ್ಧನ್ ಕಿವಿಮಾತು
- ಈಗಂತೂ ಹೆಚ್ಚಾಗಿ ನೀರು, ಗಾಳಿಯೂ ಮಲೀನವಾಗುತ್ತಿದೆ; ವಿಷಾದ

ಮೈಸೂರು, ಜೂ.9(ಎಂಕೆ)– ನಮ್ಮ ಪೂರ್ವಿಕರು ನಮಗೆ ಕೊಟ್ಟಂತೆ ಮುಂದಿನ ಪೀಳಿಗೆಗೆ ನಾವು ಪರಿಸರವನ್ನು ಕಾಪಾಡಿ, ಉಳಿಸಿ ಕೊಡಬೇಕಿದೆ ಎಂದು ಬಾಗಲ ಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯ ಕುಲಪತಿ ಡಾ.ವಿಷ್ಣುವರ್ಧನ ಎಚ್ಚರಿಸಿದರು.

ಮೈಸೂರಿನ ಯಲಚನಹಳ್ಳಿಯಲ್ಲಿರುವ ತೋಟಗಾರಿಕೆ ಮಹಾವಿದ್ಯಾಲಯದಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಅರಣ್ಯ ಇಲಾಖೆ, ಕೃಷಿ ತಂತ್ರಜ್ಞರ ಸಂಸ್ಥೆ ಮತ್ತು ಐಟಿಸಿ ಲಿಮಿಟೆಡ್ ಸಹಯೋಗದಲ್ಲಿ ವಿಶ್ವ ಪರಿಸರ ದಿನಾ ಚರಣೆ ಅಂಗವಾಗಿ ಮಂಗಳವಾರ ಆಯೋ ಜಿಸಿದ್ದ 'ಸಸ್ಯಾಗ್ರಹ–ಹಸಿರು ಅರಿವು' ಬೃಹತ್ ಸಸಿ ನೆಡುವ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕೈಗಾರೀಕರಣ, ನಗರೀಕರಣ ಮತ್ತಿತರ ಕಾರಣಗಳಿಂದಾಗಿ ನೀರು, ಗಾಳಿ, ಪರಿಸರ ಮಾಲಿನ್ಯವಾಗುತ್ತಿದೆ. ಪರಿಸರ ಉಳಿಸುವ ನಿಟ್ಟಿನಲ್ಲಿ ಪ್ರತಿಯೊಬ್ಬರು ಗಂಭೀರ ಚಿಂತನೆ ನಡೆಸಬೇಕು ಎಂದರು.



ಮೈಸೂರಿನ ಯಲಚನಹಳ್ಳಿಯಲ್ಲಿರುವ ತೋಟಗಾರಿಕೆ ಮಹಾವಿದ್ಯಾಲಯದಲ್ಲಿ 'ಸಸ್ಯಾಗ್ರಹ–ಹಸಿರು ಅರಿವು' ಬೃಹತ್ ಸಸಿ ನೆಡುವ ಅಭಿಯಾನಕ್ಕೆ ಮಂಗಳವಾರ ಚಾಲನೆ ನೀಡಲಾಯಿತು. ಬಾಗಲಕೋಟೆ ತೋಟಗಾರಿಕೆ ವಿವಿ ಕುಲಪತಿ ಡಾ.ವಿಷ್ಣುವರ್ಧನ, ಶಂಕರೇಗೌಡ, ಡಾ.ಚಂದ್ರಶೇಖರ ಹಂಚಿನಮನಿ ಇನ್ನಿತರರು ಉಪಸ್ಥಿತರಿದ್ದರು.

ದುರಾಸೆಯಿಂದ ಯಥೇಚ್ಛವಾಗಿ ರಸಗೊಬ್ಬರ, ಕ್ರಿಮಿ ಹಾಗೂ ಕೀಟ ನಾಶಕಗಳನ್ನು ಬಳಸಿ, ಮಣ್ಣಿನ ಫಲ ವತ್ತತೆಯನ್ನು ಹಾಳು ಮಾಡಿದ್ದೇವೆ. ಹಾಗಾಗಿ ಮಣ್ಣಿನ ಫಲವತ್ತತೆ ಅಥವಾ ಆರೋಗ್ಯ ಕಾಪಾಡುವ ಮೂಲಕ ಪರಿಸರ ಉಳಿಸುವ ಕಡೆಗೆ ಚಿಂತನೆ ಮಾಡು ವುದು ಅನಿವಾರ್ಯ ಮತ್ತು ಅಗತ್ಯತೆಯಾಗಿದೆ ಎಂದು ಕಿವಿಮಾತು ಹೇಳಿದರು.

ಮೈಸೂರು ವೃತ್ತ ಅರಣ್ಯ ವಿಭಾಗದ ಉಪಅರಣ್ಯ ಸಂರಕ್ಷಣಾಧಿಕಾರಿ ಶಂಕರೇ ಗೌಡ ಮಾತನಾಡಿ, ನಮ್ಮೆಲ್ಲರ ಮೇಲೂ ಪ್ರಕೃತಿಯ ಋಣ ಇದೆ. ಅದನ್ನು ತೀರಿ ಸುವ ಕೆಲಸವನ್ನು ಮನೆಯಿಂದಲೇ ಆರಂ ಭಿಸಬೇಕು. ಕೇವಲ ಗಿಡ ನೆಡುವುದಲ್ಲ. ಅದನ್ನು ಪೋಷಿಸಬೇಕು ಎಂದರೆ, ಪ್ಲಾಸ್ಟಿಕ್ ಬಳಕೆ ಮಾಡಬಾರದು. ನೀರನ್ನು ಮಿತವಾಗಿ ಬಳಸಬೇಕು. ಎಲ್ಲರೂ ಗಿಡ ನೆಟ್ಟು ಮರ ವಾಗಿ ಬೆಳೆಸಬೇಕು ಎಂದು ಕರೆ ನೀಡಿದರು.

ಅಭಿಯಾನದ ಅಧ್ಯಕ್ಷತೆ ವಹಿಸಿದ್ದ ತೋಟಗಾರಿಕೆ ಮಹಾವಿದ್ಯಾಲಯದ ಡೀನ್ ಡಾ.ಚಂದ್ರಶೇಖರ ಹಂಚಿನಮನಿ ಮಾತನಾಡಿ, ಪ್ರತಿಯೊಬ್ಬರ ಮೇಲೂ ಪರಿಸರ ಉಳಿಸುವ ಗುರುತರ ಜವಾ ಬ್ದಾರಿ ಇದೆ. ಮಣ್ಣನ್ನು ಕಾಪಾಡುವುದರ ಜೊತೆಗೆ ಇಳುವರಿ ಹಾಗೂ ಆಹಾರದ ಗುಣಮಟ್ಟವನ್ನೂ ಕಾಪಾಡಬೇಕು ಎಂದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪರಿಸರ ಅಧಿಕಾರಿ ವಿ.ಸುನಿಲ್, ಜಯಲಕ್ಷ್ಮಿ, ಎಸಿಎಫ್ ಪ್ರಫುಲ್ ಶೆಟ್ಟಿ, ಕೃಷಿ ಇಲಾಖೆ ನಿವೃತ್ತ ಹೆಚ್ಚುವರಿ ನಿರ್ದೇಶಕ ಡಾ.ವಿಷ ಕಂಠ, ಐಟಿಸಿ ಕಂಪನಿ ಹಿರಿಯ ವ್ಯವಸ್ಥಾಪಕ ಕೆ.ಅಶೋಕ್‌ಕುಮಾರ್, ಯೋಜನಾ ಸಂಯೋಜಕ ಡಿ.ಎಸ್.ನಂಜುಂಡ ಸ್ವಾಮಿ, ಸಹ ಪ್ರಾಧ್ಯಾಪಕರಾದ ಡಾ.ಜಿ. ಮಂಜು ನಾಥ, ಡಾ.ಕೆ.ಎಂ.ಶಿವಕುಮಾರ್, ಡಾ.ತನ್ವೀರ್ ಅಹ್ಮದ್, ಡಾ.ಆರ್.ಸಿದ್ದಪ್ಪ ಡಾ.ಹೆಚ್.ಎನ್. ರಾಜೀವ್, ಮನೋಜ್, ಸುಧೀರ್‌ಕುಮಾರ್, ತೇಜಸ್ವಿನಿ, ಭೂಮಿಕಾ ಮತ್ತಿತರರಿದ್ದರು.

ಸೋಮನಹಳ್ಳಿ, ಮರದೂರು ಕೆರೆಗಳಿಗೆ ನೀರು ತುಂಬಿಸುವ ಕಾಮಗಾರಿ ಸೇರಿದಂತೆ

5.45 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಚಾಲನೆ

ಕೆರೆಗಳು ಗ್ರಾಮೀಣ ಜನರ ಬದುಕಿನ ಜೀವನಾಡಿಗಳು: ಶಾಸಕ ಜಿ.ಡಿ.ಹರೀಶ್‌ಗೌಡ

ಹುಣಸೂರು, ಜೂ.9– ತಾಲೂಕಿನ ಸೋಮನಹಳ್ಳಿ ಹಾಗೂ ಮರದೂರು ಭಾಗದ ಕೆರೆಗಳಿಗೆ ನೀರು ತುಂಬಿಸುವ 3 ಕೋಟಿ ರೂ. ವೆಚ್ಚದ 2.5 ಕಿ.ಮೀ ಉದ್ದದ ಪೈಪ್‌ಲೈನ್ ಕಾಮಗಾರಿ ಸೇರಿದಂತೆ 5.45 ಕೋಟಿ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಜಿ.ಡಿ.ಹರೀಶ್‌ಗೌಡ ಚಾಲನೆ ನೀಡಿದರು.

ತಾಲೂಕಿನ ಬನ್ನಿಕುಪ್ಪೆಯಲ್ಲಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಕೆರೆಗಳು ತುಂಬಿದರೆ ರೈತರ ಬದುಕು ಹಸನಾಗುತ್ತದೆ. ಅಲ್ಲದೇ ಸುತ್ತಮುತ್ತಲ ಹಳ್ಳಿಗಳಲ್ಲಿ ಅಂತರ್ಜಲದ ಮಟ್ಟ ಹೆಚ್ಚಾಗುತ್ತದೆ. ಕೆರೆಗಳಿಗೆ ನೀರು ತುಂಬಿಸುವ ಕಾರ್ಯ ಆರಂಭವಾಗಿರುವುದರಿಂದ ಗ್ರಾಮಸ್ಥರಲ್ಲಿ ಸಂತಸ ಮನೆ ಮಾಡಿದೆ. ಹಲವು ವರ್ಷಗಳ ನಿರೀಕ್ಷೆ ಸಾಕಾರಗೊಳ್ಳುತ್ತಿರುವುದರಿಂದ ಈ ಭಾಗದ ರೈತರು, ಗ್ರಾಮಸ್ಥರಿಗೆ ಅನುಕೂಲವಾಗಲಿದೆ. ಕೆರೆಗಳು ಕೇವಲ ನೀರಿನ ಸಂಗ್ರಹಣಾ ತಾಣಗಳಲ್ಲ. ಗ್ರಾಮೀಣ ಜನರ ಬದುಕಿನ ಜೀವನಾಡಿಗಳಾಗಿವೆ. ಅಂತಹ ಜೀವನಾಡಿಗಳಿಗೆ ಮತ್ತೆ ನೀರು ಹರಿಸುವ ಪ್ರಯತ್ನಕ್ಕೆ ಚಾಲನೆ ದೊರೆತಿರುವುದು. ಸೋಮನಹಳ್ಳಿ ಮತ್ತು ಮರ ದೂರು ಭಾಗದ ಜನರಿಗೆ ಹೊಸ ಭರವಸೆಯ ಬೆಳಕಾಗಿ ಪರಿಣಮಿಸಿದೆ ಎಂದರು.



ಕೆರೆಗಳಿಗೆ ನೀರು ತುಂಬಿಸುವ ಕಾಮಗಾರಿಗೆ ಶಾಸಕ ಜಿ.ಡಿ.ಹರೀಶ್‌ಗೌಡ ಚಾಲನೆ ನೀಡಿದರು.

ಕ್ಷೇತ್ರದ ಅಭಿವೃದ್ಧಿ ಮಾಡುವುದಷ್ಟೇ ನನಗೆ ಮುಖ್ಯವಾಗಿದ್ದು, ಇದರಲ್ಲಿ ರಾಜಕೀಯ ಮಾಡುವ ಯಾವ ಅಗತ್ಯವೂ ನನಗಿಲ್ಲ ಮತ್ತು ಅದನ್ನು ಮಾಡುವುದೂ ಇಲ್ಲ. ಹಲವು ವರ್ಷಗಳಿಂದ ಕ್ಷೇತ್ರದಲ್ಲಿ ಸಾಕಷ್ಟು ಕೆಲಸಗಳು ಆಗಬೇಕಿದೆ ಎಂದರು.

ವಿವಿಧ ಕಾಮಗಾರಿಗಳಿಗೆ ಚಾಲನೆ: ತಾಲೂಕಿನ ವಿವಿಧೆಡೆ ಹಲವು ಕಾಮಗಾರಿಗಳಿಗೆ ಶಾಸಕ ಜಿ.ಡಿ.ಹರೀಶ್ ಗೌಡರು ಚಾಲನೆ ನೀಡಿದರು. ಪ್ರಮುಖವಾಗಿ ಬನ್ನಿಕುಪ್ಪೆ ಅಂಗನವಾಡಿ ಕೇಂದ್ರ, ದೊಡ್ಡೇ ಗೌಡನ ಕೊಪ್ಪಲಿನ ಮುಖ್ಯರಸ್ತೆ ಚರಂಡಿ ನಿರ್ಮಾಣಕ್ಕೆ 25 ಲಕ್ಷ ಹಾಗೂ ಅಂಗನವಾಡಿ ಕೇಂದ್ರಕ್ಕೆ 15 ಲಕ್ಷ ರೂ., ಮರಳಯ್ಯನಕೊಪ್ಪಲಿನ ಸಿಸಿ ರಸ್ತೆಗೆ 30 ಲಕ್ಷ, ಮಾದಳ್ಳಿ ಸಿಸಿ ರಸ್ತೆಗೆ 25 ಲಕ್ಷ, ಮೂಡಲ ಕೊಪ್ಪಲು ಸಿಸಿ ರಸ್ತೆಗೆ 30 ಲಕ್ಷ ಹಾಗೂ 1 ಕೋಟಿ ವೆಚ್ಚದ ಒಕ್ಕಲಿಗರ ಸಮುದಾಯ ಭವನ ಅಭಿವೃದ್ಧಿ ಕಾಮಗಾರಿಗೆ ಶಾಸಕರು ಭೂಮಿ ಪೂಜೆ ನೆರವೇರಿಸಿದರು.

> “ಗ್ಯಾರಂಟಿ ಯೋಜನೆಗಳಿಂದ ರಾಜ್ಯದಲ್ಲಿ ಅನುದಾನದ ಕೊರತೆ ಉಂಟಾಗಿದ್ದು, 224 ಶಾಸಕರಿಗೂ ಅನುದಾನ ಬಾರದಂತಾಗಿದೆ. ಕಾಂಗ್ರೆಸ್‌ನಿಂದ ಐದಾರು ಬಾರಿ ಗೆದ್ದಿರುವ ಶಾಸಕರು ಕೂಡ ಅನುದಾನ ಬಿಡುಗಡೆ ಆಗದ ಬಗ್ಗೆ ಬೇಸರ ವ್ಯಕ್ತಪಡಿಸಿದ್ದಾರೆ. ಆದರೆ ಇದೀಗ ಹೊಸ ಸರ್ಕಾರ ರಚನೆಯಾಗಿದ್ದು, ಮುಖ್ಯಮಂತ್ರಿಗಳು ಸೇರಿದಂತೆ ಎಲ್ಲಾ ಸಚಿವರನ್ನು ಮತ್ತೊಮ್ಮೆ ಭೇಟಿಯಾಗಿ ಕ್ಷೇತ್ರದ ಅಭಿವೃದ್ಧಿಗಾಗಿ ಅನುದಾನ ನೀಡುವಂತೆ ಮನವಿ ಮಾಡುತ್ತೇನೆ. – ಜಿ.ಡಿ.ಹರೀಶ್‌ಗೌಡ, ಶಾಸಕ.

ಈ ವೇಳೆ ಎಇಇ ರೇಣುಕಾಸ್ವಾಮಿ, ಪಿಡಿಒ ಮಹದೇವಸ್ವಾಮಿ, ಮುಖಂಡರಾದ ಕೆಂಗಯ್ಯ, ಶಿವಕುಮಾರ್, ಗೋವಿಂದೇಗೌಡ, ದಿನೇಶ್, ಗವಿನಾಯಕ, ರಾಜೇಶ್, ಲಿಂಗೇಗೌಡ ಇತರರು ಹಾಜರಿದ್ದರು.

2ನೇ ದಿನಕ್ಕೆ ಕಾಲಿಟ್ಟ ರೈತರ ಅನಿರ್ದಿಷ್ಟಾವಧಿ ಪ್ರತಿಭಟನೆ



ರೈತ ಸಂಘದ ಕಾರ್ಯಕರ್ತರು ಪ್ರತಿಭಟನೆ ನಡೆಸುತ್ತಿರುವುದು.


ನಂಜನಗೂಡು, ಜೂ.9– ತಾಲೂಕಿನ ಹಳ್ಳಿಗಳಿಗೆ ಸಮಗ್ರ ನೀರಾವರಿ ಸೌಲಭ್ಯ ಹಾಗೂ ತಾಲೂಕು ಕಚೇರಿಯಲ್ಲಿ ಭ್ರಷ್ಟಾಚಾರ ತಪ್ಪಿಸುವಂತೆ ಆಗ್ರಹಿಸಿ ರೈತ ಸಂಘದ ಕಾರ್ಯಕರ್ತರು ನಡೆಸುತ್ತಿರುವ ಅನಿರ್ದಿಷ್ಟಾವಧಿ ಪ್ರತಿಭಟನೆ 2ನೇ ದಿನಕ್ಕೆ ಕಾಲಿಟ್ಟಿದೆ.

ಸೋಮವಾರ ರಾತ್ರಿ ತಾಲೂಕು ಕಚೇರಿ ಆವರಣದಲ್ಲಿ ಮಲಗಿದ್ದ ಪ್ರತಿಭಟನಾಕಾರರು ಮಂಗಳವಾರ ಬೆಳಗ್ಗೆ ಪೊರಕೆಯೊಂದಿಗೆ ಆಗಮಿಸಿ ತಾಲೂಕು ಕಚೇರಿ ಪ್ರವೇಶ ದ್ವಾರದಲ್ಲಿ ಪ್ರತಿಭಟನೆ ಮುಂದುವರಿಸಿದರು.

ರೈತ ಸಂಘದ ರಾಜ್ಯ ಕಾರ್ಯಾಧ್ಯಕ್ಷ ಟಿ.ಆರ್.ವಿದ್ಯಾಸಾಗರ್ ಮಾತನಾಡಿ, ತಾಲೂಕು ಕಚೇರಿಯಲ್ಲಿ ರೈತರ ಜೇಬಿನಲ್ಲಿ ಹಣ ಇಲ್ಲ ಎಂದರೆ ಯಾವ ಕೆಲಸವೂ ನಡೆಯುವುದಿಲ್ಲ. ಆದ್ದರಿಂದ ಜಿಲ್ಲಾಧಿಕಾರಿಗಳು ಸ್ಥಳಕ್ಕೆ ಆಗಮಿಸಿ ರೈತ ವಿರೋಧಿ ತಹಸೀಲ್ದಾರ್ ಸ್ಮಿತಾ ರಾಮು ಅವರನ್ನು ವರ್ಗಾವಣೆ ಮಾಡಬೇಕು. ತಾಲೂಕಿನ ಹಿಮ್ಮಾವು ಗ್ರಾಮದ ಸರ್ಕಾರಿ ಸರ್ವೇ ನಂ. 424ರಲ್ಲಿ ಉಳಿಮೆ ಮಾಡುತ್ತಿದ್ದ ರೈತರಿಗೆ ಧನಾತ್ಮಕ ಪರಿಹಾರ ವಿತರಿಸುವಂತೆ ಅರ್ಜಿ ಸಲ್ಲಿಸಿರುವ ರೈತರಿಗೆ ಧನಾತ್ಮಕ ಪರಿಹಾರ ಘೋಷಣೆ ಮಾಡುವವರೆಗೂ ಪ್ರತಿಭಟನೆ ಕೈ ಬಿಡುವುದಿಲ್ಲ. ಒಂದು ವೇಳೆ ರೈತರು ನಡೆಸುತ್ತಿರುವ ಅನಿರ್ದಿ ಷ್ಟಾವಧಿ ಪ್ರತಿಭಟನೆಯನ್ನು ಲಘುವಾಗಿ ಪರಿಗಣಿಸಿದರೆ ಮುಂಬರುವ ದಿನಗಳಲ್ಲಿ ತಕ್ಕ ಶಾಸ್ತಿ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಎರಡನೇ ದಿನವೂ ರೈತರು ಸ್ಥಳದಲ್ಲೇ ಅಡುಗೆ ಮಾಡಿ ಊಟ ಮಾಡಿದರು. ಪ್ರತಿಭಟನೆಯಲ್ಲಿ ರೈತ ಸಂಘದ ಜಿಲ್ಲಾಧ್ಯಕ್ಷ ಸತೀಶ್, ರಾಜ್ಯ ಉಪಾಧ್ಯಕ್ಷ ಇಮ್ಮಾವು ರಘು, ತಾಲೂಕು ಅಧ್ಯಕ್ಷ ಸೂರಳ್ಳಿ ಮಹದೇವ ನಾಯಕ, ರತ್ನಮ್ಮ, ತಿಮ್ಮನಾಯಕ, ವರದರಾಜು ಇತರರಿದ್ದರು.

ಸರಗೂರಲ್ಲಿ ಹ್ಯಾಂಡಲ್ ಎಕ್ಸ್‌ರೇ ಅಭಿಯಾನ



ಅಭಿಯಾನವನ್ನು ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್ ಉದ್ಘಾಟಿಸಿದರು.

ಸರಗೂರು, ಜೂ.9– ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಕ್ಷಯ ರೋಗ ನಿಯಂತ್ರಣ ಕಾರ್ಯಕ್ರಮದಡಿ ಆಯೋಜಿಸಿದ್ದ 100 ದಿನಗಳ ಹ್ಯಾಂಡಲ್ ಎಕ್ಸ್‌ರೇ ಅಭಿಯಾನವನ್ನು ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, 100 ದಿನಗಳ ಹ್ಯಾಂಡಲ್ ಎಕ್ಸ್‌ರೇ ಅಭಿಯಾನದಡಿ ಇಂದು ಸರಗೂರು ಸಮುದಾಯ ಆರೋಗ್ಯ ಕೇಂದ್ರದಲ್ಲಿ ಉಚಿತವಾಗಿ ಹ್ಯಾಂಡಲ್ ಎಕ್ಸ್‌ರೇ ಮಾಡುತ್ತಿದ್ದೇವೆ. ಈ ಕಾರ್ಯಕ್ರಮ ಉದ್ದೇಶ ಬೇಗ ಕ್ಷಯ ರೋಗ ಪತ್ತೆ ಹಚ್ಚಿ ಚಿಕಿತ್ಸೆ ನೀಡುವುದಾಗಿದೆ. ಪ್ರಸ್ತುತ ಕ್ಷಯ ರೋಗಕ್ಕೆ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳ ಸಂಪರ್ಕದಲ್ಲಿರುವ ವ್ಯಕ್ತಿಗಳಿಗೆ, ಅಪಾಯಕಾರಿ ಪ್ರದೇಶದಲ್ಲಿರುವ ಜನರಿಗೆ ಉಚಿತವಾಗಿ ಎಕ್ಸ್‌ರೇ ಮಾಡುತ್ತಿದ್ದೇವೆ. ಪಟ್ಟಣ ಸೇರಿದಂತೆ ಗ್ರಾಮೀಣ ಜನತೆ ಈ ಕಾರ್ಯಕ್ರಮವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಮಕ್ಕಳ ತಜ್ಞೆ ಡಾ.ಜಯಮಾಲಾ, ಕ್ಷ–ಕಿರಣ ತಂತ್ರಜ್ಞ ಮಹದೇವಸ್ವಾಮಿ, ಲಾವಣ್ಯ, ಕ್ಷಯರೋಗ ಮೇಲ್ವಿಚಾರಕ ನಾಗರಾಜು, ಉಮೇಶ್, ರವಿರಾಜ್, ಶರಣಪ್ಪ, ವಿಜಯ ರಾಘವ, ಸಮುದಾಯ ಆರೋಗ್ಯ ಕೇಂದ್ರದ ಆರೋಗ್ಯ ನಿರೀಕ್ಷಣಾಧಿಕಾರಿ ಜಗದೀಶ್ ಸೇರಿದಂತೆ ಇನ್ನಿತರರಿದ್ದರು.

ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರ ಬದಲು

ದರ್ಶನ್, ಎ.ಆರ್.ಕೃಷ್ಣಮೂರ್ತಿ, ನರೇಂದ್ರಸ್ವಾಮಿಗೆ ಸಚಿವ ಸ್ಥಾನ ನೀಡಿ

ಜೆಡಿಎಸ್ ಮುಖಂಡ ಶಿವಕುಮಾರ್ ಬಡ್ಡು ಒತ್ತಾಯ

ತಿ.ನರಸೀಪುರ, ಜೂ.9– ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಈಗಾಗಲೇ 4 ಬಾರಿ ಸಚಿವ ಸ್ಥಾನ ನೀಡಲಾಗಿದ್ದು, ದಲಿತ ಸಮುದಾಯದ ದರ್ಶನ್ ಧ್ರುವನಾರಾಯಣ್, ಎ.ಆರ್. ಕೃಷ್ಣಮೂರ್ತಿ, ಪಿ.ಎಂ.ನರೇಂದ್ರಸ್ವಾಮಿ ಅವರಿಗೆ ಸಂಪುಟದಲ್ಲಿ ಸಚಿವ ಸ್ಥಾನ ನೀಡುವ ಮೂಲಕ ಹೊಸಬರಿಗೆ ಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಆದ್ಯತೆ ನೀಡ ಬೇಕು ಎಂದು ಜೆಡಿಎಸ್ ಮುಖಂಡ ಶಿವಕುಮಾರ್ ಬಡ್ಡು ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಲವು ದಲಿತಪರ ಸಂಘಟನೆಗಳು ಮಾಜಿ ಸಿಎಂ ಸಿದ್ದರಾಮಯ್ಯನವರು ಪುತ್ರ ವ್ಯಾಮೋಹದಿಂದಾಗಿ ಡಾ.ಯತೀಂದ್ರ ಅವರಿಗೆ ಸಚಿವ ಸ್ಥಾನ ಕೊಡಿಸಿದ್ದು, ಮಹದೇವಪ್ಪ ಅವರಿಗೆ ಸಚಿವ ಸ್ಥಾನ ತಪ್ಪಿಸಲಾಗಿದೆ ಎಂಬ ಆರೋಪವನ್ನು ಖಂಡಿಸಿದರು.

> “ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಸಚಿವ ಸ್ಥಾನ ದೊರೆಯದಿರುವ ವಿಚಾರ ಮುಂದಿಟ್ಟುಕೊಂಡು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ದಲಿತ ವಿರೋಧಿ ಎಂದು ಟೀಕಿಸುವುದು ಸರಿಯಲ್ಲ. ಸಿದ್ದರಾಮಯ್ಯ ಅವರು ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಸಚಿವ ಸ್ಥಾನ ಕಲ್ಪಿಸಿದ್ದರು. ರಾಜ್ಯದ ದಲಿತ ಸಮುದಾಯದ ನಾಯಕರಿಗೆ ಸೂಕ್ತ ಸ್ಥಾನಮಾನ ನೀಡುವಲ್ಲಿ ಸಿದ್ದರಾಮಯ್ಯ ಕೊಡುಗೆ ಅಪಾರ.– ಮೂಗೂರು ಎಂ.ಆರ್. ಶಿವಮೂರ್ತಿ, ಕುರುಬ ಸಮುದಾಯದ ಹಿರಿಯ ಮುಖಂಡ.

ಪುತ್ರ ವ್ಯಾಮೋಹ ಎಲ್ಲಾ ರಾಜಕೀಯ ಪಕ್ಷಗಳಲ್ಲೂ ಇದೆ. ಡಾ.ಹೆಚ್.ಸಿ.ಮಹದೇವಪ್ಪ ಅವರು ತಮ್ಮ ಪುತ್ರರನ್ನು ಸಂಸದರಾಗಿ ಮಾಡಿದಾಗ ಪುತ್ರ ವ್ಯಾಮೋಹ ಎನ್ನಲಿಲ್ಲ. ಆದರೆ ಡಾ.ಯತೀಂದ್ರ ಅವರಿಗೆ ಸಚಿವ ಸ್ಥಾನ ದೊರೆತರೆ ಮಾತ್ರ ಪುತ್ರ ವ್ಯಾಮೋಹ ಎಂದು ಟೀಕಿಸುವುದು ದ್ವಂದ್ವ ನಿಲುವಾಗಿದೆ ಎಂದರು.



ಸುದ್ದಿಗೋಷ್ಠಿಯಲ್ಲಿ ಜೆಡಿಎಸ್ ಮುಖಂಡ ಶಿವಕುಮಾರ್ ಬಡ್ಡು ಮಾತನಾಡಿದರು.

ದಲಿತಪರ ಸಂಘಟನೆಗಳ ಹೆಸರಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕೆಲ ಗುಂಪುಗಳು ಮಹದೇವಪ್ಪ ಅವರಿಗೆ ಸಚಿವ ಸ್ಥಾನ ನೀಡುವ ಬೇಡಿಕೆಗೆ ಮಾತ್ರ ಸೀಮಿತಗೊಂಡಿವೆ. ಆದರೆ ಪ.ಜಾತಿ ಮತ್ತು ಪ.ಪಂಗಡಗಳ ಕಲ್ಯಾಣಕ್ಕಾಗಿ ಮೀಸಲಾಗಿರುವ ಎಸ್‌ಸಿಪಿ–ಟಿಎಸ್‌ಪಿ ಅನುದಾನ ದುರುಪಯೋಗದಂತಹ ಗಂಭೀರ ವಿಷಯಗಳು ಎದುರಾದಾಗ ಈ ಸಂಘಟನೆಗಳು ಮೌನ ವಹಿಸಿದ್ದೇಕೆ ಎಂಬ ಪ್ರಶ್ನೆ ಉದ್ಭವಿಸುತ್ತದೆ ಎಂದರು.

ಸಮುದಾಯಕ್ಕೆ ಮೀಸಲಾದ ಅನುದಾನಗಳ ಸಮರ್ಪಕ ಬಳಕೆ, ಶಿಕ್ಷಣ, ಉದ್ಯೋಗ ಮತ್ತು ಸಾಮಾಜಿಕ ನ್ಯಾಯದ ವಿಚಾರಗಳಲ್ಲಿಯೂ ಸಂಘಟನೆಗಳು ಧ್ವನಿ ಎತ್ತಬೇಕು ಎಂದು ಆಗ್ರಹಿಸಿದರು.

ಕುರುಬ ಸಮುದಾಯದ ಹಿರಿಯ ಮುಖಂಡ ಮೂಗೂರು ಎಂ.ಆರ್.ಶಿವಮೂರ್ತಿ ಮಾತನಾಡಿ, ಇದುವರೆಗೆ ರಾಜ್ಯದ ಯಾವುದೇ ಕಾಂಗ್ರೆಸ್ ಸರ್ಕಾರ ದಲಿತ ನಾಯಕರಿಗೆ ಲೋಕೋಪಯೋಗಿ (ಪಿಡಬ್ಲ್ಯುಡಿ) ಇಲಾಖೆಯಂತಹ ಪ್ರಮುಖ ಖಾತೆ ನೀಡಿರಲಿಲ್ಲ. ಆದರೆ ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ಮಹದೇವಪ್ಪ ಅವರಿಗೆ ಆ ಜವಾಬ್ದಾರಿ ದೊರೆತಿದ್ದು, ಇದು ಅವರ ಮೇಲಿನ ವಿಶ್ವಾಸ ಮತ್ತು ಗೌರವದ ಪ್ರತೀಕವಾಗಿದೆ ಎಂದರು.

ಸಚಿವ ಸಂಪುಟದಲ್ಲಿ ಎಲ್ಲರಿಗೂ ಅವಕಾಶ ನೀಡಲು ಸಾಧ್ಯವಿಲ್ಲ. ರಾಜಕೀಯ ಪರಿಸ್ಥಿತಿ, ಪ್ರಾದೇಶಿಕ ಹಾಗೂ ಸಾಮಾಜಿಕ ಸಮತೋಲನ ಸೇರಿದಂತೆ ಹಲವು ಅಂಶಗಳನ್ನು ಪರಿಗಣಿಸಿ ಸಚಿವರ ಆಯ್ಕೆ ನಡೆಯುತ್ತದೆ. ಆದ್ದರಿಂದ ಸಚಿವ ಸ್ಥಾನ ದೊರೆಯದಿರುವುದನ್ನೇ ಆಧಾರವನ್ನಾಗಿ ಮಾಡಿಕೊಂಡು ಸಿದ್ದರಾಮಯ್ಯ ಅವರನ್ನು ದಲಿತ ವಿರೋಧಿ ಎಂದು ಕರೆಯುವುದು ಸರಿಯಲ್ಲ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ದೊಡ್ಡಪುರ ರಾಜೇಶ್ ನಾಡಗೌಡ್ರು, ಕಾಳಬಸವನಹುಂಡಿ ಕುಮಾರ್, ಕೆಬ್ಬೇಹುಂಡಿ ಚಿಕ್ಕಮಾದು, ಎಂ.ಬಸವರಾಜು, ಗುರುರಾಜು, ಚಿಕ್ಕ ಮಾದೇಗೌಡ ಇತರರಿದ್ದರು.

ಹೊನ್ನಾಪುರದಲ್ಲಿ ರೈತರಿಗೆ ಶುಂಠಿ ಬೇಸಾಯ ತರಬೇತಿ

ಬೆಟ್ಟದಪುರ, ಜೂ.9– ಪಿರಿಯಾಪಟ್ಟಣ ತಾಲೂಕಿನ ಹೊನ್ನಾಪುರ ಗ್ರಾಮದಲ್ಲಿ ಭೂ ತಾಯಿ ರೈತ ಉತ್ಪಾದಕ ಕಂಪನಿ ನಿಯಮಿತ ಹಾಗೂ ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ ಮೈಸೂರು ವಿಭಾಗೀಯ ಸಹಯೋಗದಲ್ಲಿ ರೈತರಿಗೆ ಶುಂಠಿ ಬೇಸಾಯ ತರಬೇತಿ ಹಮ್ಮಿಕೊಳ್ಳಲಾಗಿತ್ತು.

ಸುತ್ತೂರು ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಡಾ.ಜಿ.ಎಂ.ವಿನಯ್ ಮಾತನಾಡಿ, ಶುಂಠಿ ಲಾಭದಾಯಕ ಬೆಳೆಯಾಗಿದ್ದು, ಮಲೆನಾಡು ಹಾಗೂ ಮೈಸೂರು, ಹಾಸನ ಭಾಗಗಳಲ್ಲಿ ಹೆಚ್ಚು ರೈತರು ಶುಂಠಿ ಬೆಳೆಯುತ್ತಾರೆ. ಮಸಾಲ ಪದಾರ್ಥಗಳಿಗೆ ಹಾಗೂ ದೇಶ ವಿದೇಶಗಳಿಗೆ ಶುಂಠಿ ರಫ್ತು ಮಾಡಲಾಗುತ್ತಿದೆ. ಶುಂಠಿ ಬೆಳೆಯಲು ಉತ್ತಮ ಮಳೆ, ಬೆಚ್ಚಗಿನ ವಾತಾವರಣ, ಕೆಂಪು ಮಿಶ್ರಿತ ಮಣ್ಣು ಸೂಕ್ತವಾಗಿದೆ. ರೋಗ ನಿರೋಧಕ ಬೀಜಗಳನ್ನು ಬಳಸುವುದರಿಂದ ಉತ್ತಮ ಇಳುವರಿ ಪಡೆಯಬಹುದು ಎಂದು ಮಾಹಿತಿ ನೀಡಿದರು.



ರೈತರಿಗೆ ಶುಂಠಿ ಬೇಸಾಯ ತರಬೇತಿ ಹಮ್ಮಿಕೊಳ್ಳಲಾಗಿತ್ತು.

ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ ಮೈಸೂರು ವಿಭಾಗೀಯ ಕಚೇರಿ ಪ್ರಧಾನ ವ್ಯವಸ್ಥಾಪಕಿ ಎಸ್.ವಿ.ಭಾಗ್ಯಲಕ್ಷ್ಮಿ ಮಾತನಾಡಿ, ರೈತರು ಕೃಷಿ ಚಟುವಟಿಕೆ ವೇಳೆ ಅಪಘಾತ ಸಂಭವ ಹಾಗೂ ಅಂಗವಿಕಲತೆ ಉಂಟಾದರೆ ಅಂತಹ ಕುಟುಂಬಗಳಿಗೆ ಆರ್ಥಿಕ ಸಹಾಯ ನೀಡುವ ಮೂಲಕ ಸಾಮಾಜಿಕ ಭದ್ರತೆ ಒದಗಿಸಲು ರೈತ ಸಂಜೀವಿನಿ ಅಪಘಾತ ವಿಮಾ ಯೋಜನೆ ಸಹಕಾರಿ. ರಾಜ್ಯದ ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ನಿತ್ಯ ನಡೆಯುವ ವ್ಯಾಪಾರ ವಹಿವಾಟು ದರವನ್ನು ಆನ್‌ಲೈನ್ ಮೂಲಕಮೊಬೈಲ್‌ನಲ್ಲಿ ವೀಕ್ಷಿಸಬಹುದು ಎಂದರು.

ಭೂ ತಾಯಿ ರೈತ ಉತ್ಪಾದಕ ಕಂಪನಿ ಅಧ್ಯಕ್ಷ ಶಿವಕುಮಾರ್ ಮಾತನಾಡಿ, ನಮ್ಮ ಕಂಪನಿಯಿಂದ ರೈತರ ಕೃಷಿ ಚಟುವಟಿಕೆಗಳಿಗೆ ಕೃಷಿ ಸಲಕರಣೆಗಳು ಹಾಗೂ ರಸಗೊಬ್ಬರ ಮಾರಾಟ ಮಾಡುತ್ತಿದ್ದು, ರೈತರು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಈ ವೇಳೆ ರಾಜ್ಯ ಕೃಷಿ ಮಾರಾಟ ಮಂಡಳಿ ಮೈಸೂರು ವಿಭಾಗದ ಸಹಾಯಕ ಪ್ರಧಾನ ವ್ಯವಸ್ಥಾಪಕಿ ಡಿ.ಎನ್. ಮಮತಾ, ವ್ಯವಸ್ಥಾಪಕ ಮಂಜುನಾಥ್.ಎಸ್, ಸುತ್ತೂರು ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಡಾ.ಪ್ರಸಾದ್.ವೈ.ಪಿ, ಭೂ ತಾಯಿ ರೈತ ಉತ್ಪಾದಕ ಕಂಪನಿ ಉಪಾಧ್ಯಕ್ಷ ಆಂಜನೇಯ ಹೆಚ್.ಹೆಚ್, ಸಿಇಓ ಕಾವ್ಯ, ನಿರ್ದೇಶಕರಾದ ಶಿವಣ್ಣ ಹೆಚ್.ಎಸ್, ನಾಗರಾಜ್.ಹೆಚ್.ಕೆ, ಮಂಜುನಾಥ್.ಹೆಚ್.ಕೆ, ಮುಖಂಡರಾದ ಮರೀಗೌಡ, ಹೆಚ್.ಜೆ ಹನುಮೇಗೌಡ, ಹುಚ್ಚಪ್ಪ, ಮನು, ಬಸಪ್ಪ, ಶಿವಣ್ಣ, ಕುಮಾರ್.ಹೆಚ್.ಕೆ, ಗಿರಿಯಪ್ಪ, ಪುಟ್ಟೇಗೌಡ, ಎನ್.ಮಂಜು ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

ಕ್ಷೇತ್ರದ ಅಭಿವೃದ್ಧಿಗೆ ಸಿಎಂಗೆ ಮನವಿ ಸಲ್ಲಿಸುವೆ



> “ಕ್ಷೇತ್ರದ ಜನತೆ ನನ್ನ ಮೇಲೆ ವಿಶ್ವಾಸವಿಟ್ಟು ಅತೀ ಹೆಚ್ಚು ಮತಗಳನ್ನು ನೀಡಿ 2ನೇ ಬಾರಿಗೆ ಶಾಸಕನಾಗಿ ಆಯ್ಕೆ ಮಾಡಿದ್ದಾರೆ. ಹೀಗಾಗಿ ನನ್ನ ಮೇಲೆ ಹೆಚ್ಚಿನ ಜವಾಬ್ದಾರಿ ಇದ್ದು, ಕ್ಷೇತ್ರದ ಅಭಿವೃದ್ಧಿಯೇ ನನ್ನ ಗುರಿ. ಹೀಗಾಗಿ ಮುಂದಿನ ದಿನಗಳಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ತಾಲೂಕಿಗೆ ಅದ್ದೂರಿಯಾಗಿ ಸ್ವಾಗತಿಸಿ, ಆಗಬೇಕಾದ ಅಭಿವೃದ್ಧಿ ಕಾರ್ಯಗಳಿಗೆ ಅನುದಾನ ನೀಡುವಂತೆ ಒತ್ತಾಯಿಸುತ್ತೇನೆ. – ಅನಿಲ್ ಚಿಕ್ಕಮಾದು, ಶಾಸಕ.

ಹೆಚ್.ಡಿ.ಕೋಟೆ, ಜೂ.9– ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿರುವ ಡಿ.ಕೆ.ಶಿವಕುಮಾರ್ ಅವರಿಗೆ ವೈಯಕ್ತಿಕವಾಗಿ ಹಾಗೂ ಕ್ಷೇತ್ರದ ಜನತೆ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.


ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹೆಚ್.ಡಿ.ಕೋಟೆ ಹಾಗೂ ಸರಗೂರು ತಾಲೂಕಿನಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳು ಆಗಬೇಕಿರುವುದರಿಂದ ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಮುಂದಿನ ದಿನಗಳಲ್ಲಿ ಮನವಿ ಸಲ್ಲಿಸಲಾಗುವುದು ಎಂದ ಅವರು ರಾಜ್ಯದಲ್ಲೇ ಮೊಟ್ಟ ಮೊದಲು ತುಂಬುವ ಕಬಿನಿ ಜಲಾಶಯಕ್ಕೆ ಬಾಗಿನ ನೀಡಲು ಮುಖ್ಯಮಂತ್ರಿ ಶಿವಕುಮಾರ್ ಅವರನ್ನು ಕರೆಸಲಾಗುವುದು. ಈ ವೇಳೆ ಜಲಾಶಯದ ಮುಂಭಾಗ ಬೃಂದಾವನ ನಿರ್ಮಾಣಕ್ಕೆ ಮನವಿ ಸಲ್ಲಿಸುತ್ತೇನೆ. ನನ್ನ ಮನವಿಗೆ ಅವರು ಒಪ್ಪಿಗೆ ಸೂಚಿಸುತ್ತಾರೆ ಎಂಬ ಭರವಸೆ ಇದೆ ಎಂದರು.

ಮಾಜಿ ಸಿಎಂ ಸಿದ್ದರಾಮಯ್ಯನವರು ತಮ್ಮ ಅಧಿಕಾರವಧಿಯಲ್ಲಿ ಹೆಚ್.ಡಿ.ಕೋಟೆ ಕ್ಷೇತ್ರಕ್ಕೆ ಸಾಕಷ್ಟು ಬಾರಿ ಆಗಮಿಸಿ ಸಾವಿರಾರು ಕೋಟಿ ಅನುದಾನ ನೀಡಿ ತಾಲೂಕು ಸಮಗ್ರ ಅಭಿವೃದ್ಧಿಗೆ ಮುಂದಾಗಿದ್ದರು. ಅದರಲ್ಲಿ ಪ್ರಮುಖವಾಗಿ ಮೈಸೂರು–ಮಾನಂದವಾಡಿ ರಸ್ತೆಗೆ ಕಳೆದ ಬಜೆಟ್‌ನಲ್ಲಿ ಡಿಪಿಆರ್ ತಯಾರಿಸಲಾಗಿದೆ ಎಂದ ಅವರು ನಿರುದ್ಯೋಗಿಗಳಿಗೆ ಉದ್ಯೋಗ ನೀಡಲು ಕಾರ್ಖಾನೆ ನಿರ್ಮಾಣ ಸೇರಿದಂತೆ ಹಲವು ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ಹೀಗಾಗಿ ಅವರನ್ನು ಕರೆದು ಅಭಿವೃದ್ಧಿ ಕಾರ್ಯಗಳಿಗೆ ಒತ್ತು ನೀಡಲಾಗುವುದು ಎಂದರು.

ಡಿ.ಕೆ.ಶಿವಕುಮಾರ್ ಅವರು ಈಗಾಗಲೇ ಕ್ಷೇತ್ರಕ್ಕೆ ಸಾಕಷ್ಟು ಬಾರಿ ಭೇಟಿ ನೀಡಿದ್ದು, ನನ್ನ ಮೇಲೆ ಪ್ರೀತಿ, ವಿಶ್ವಾಸ ಇಟ್ಟುಕೊಂಡಿದ್ದಾರೆ. ಹೀಗಾಗಿ ಮುಂದಿನ ದಿನಗಳಲ್ಲಿ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ನೀಡುವ ಮೂಲಕ ನನ್ನ ಬೆನ್ನೆಲುಬಾಗಿ ನಿಲ್ಲಲ್ಲಿದ್ದಾರೆ ಎಂದರು.

ಸೂರಜ್ ಹೆಗ್ಡೆ ನಿಧನಕ್ಕೆ ಸಂತಾಪ

ಹುಣಸೂರು, ಜೂ.9– ಮಾಜಿ ಮುಖ್ಯಮಂತ್ರಿ ದಿ.ಡಿ.ದೇವರಾಜ ಅರಸು ಅವರ ಮೊಮ್ಮಗ ಸೂರಜ್ ಹೆಗ್ಡೆ ನಿಧನಕ್ಕೆ ಸತ್ಯ ಎಂಎಎಸ್ ಫೌಂಡೇಶನ್ ಅಧ್ಯಕ್ಷ ಸತ್ಯಪ್ಪ ಸಂತಾಪ ಸೂಚಿಸಿದ್ದಾರೆ. ಸೂರಜ್ ಹೆಗ್ಡೆ ಅವರು ಬಾಲ್ಯ ಹಾಗೂ ವಿದ್ಯಾರ್ಥಿ ಜೀವನದಿಂದಲೇ ಪಕ್ಷ ಸಂಘಟನೆ ರಾಜಕೀಯ ಜೀವನದಲ್ಲಿಯೂ ಸಕ್ರಿಯರಾಗಿದ್ದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ರಾಜ್ಯ ಉಪಾಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದರು. ಆದರೆ ಅವರು ನಮ್ಮನ್ನು ಅಗಲಿದ್ದು, ಅವರ ಆತ್ಮಕ್ಕೆ ಚಿರಶಾಂತಿ ನೀಡಿ ಅವರ ಕುಟುಂಬಸ್ಥರಿಗೆ ದುಃಖ ಭರಿಸುವ ಶಕ್ತಿ ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ ಎಂದರು.



ಡಾ.ಹೆಚ್.ಸಿ.ಮಹದೇವಪ್ಪಗೆ ಸಚಿವ ಸ್ಥಾನ ನೀಡುವಂತೆ ಒತ್ತಾಯಿಸಿ

ನಾಳೆ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ

‘ಕೈ’ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ಮೈಮುಲ್ ಮಾಜಿ ಅಧ್ಯಕ್ಷ ಚೆಲುವರಾಜು ಮನವಿ

ತಿ.ನರಸೀಪುರ, ಜೂ.9– ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಸಂಪುಟದಲ್ಲಿ ಸಚಿವ ಸ್ಥಾನ ನೀಡುವಂತೆ ಒತ್ತಾಯಿಸಿ ಜೂ.11ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದ್ದು, ಹೆಚ್ಚಿನ ಸಂಖ್ಯೆ ಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಮುಖಂಡರು ಆಗಮಿಸಿ ಯಶಸ್ವಿಗೊಳಿಸಬೇಕು ಎಂದು ಮೈಮುಲ್ ಮಾಜಿ ಅಧ್ಯಕ್ಷ ಚೆಲುವರಾಜು ಮನವಿ ಮಾಡಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಕಾರ್ಯಕರ್ತರು ಹಾಗೂ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಡಾ.ಹೆಚ್.ಸಿ.ಮಹದೇವಪ್ಪ ಅವರು ಹಲವು ದಶಕಗಳಿಂದ ಕಾಂಗ್ರೆಸ್ ಪಕ್ಷ ಸಂಘಟನೆ, ಬಲವರ್ಧನೆ ಹಾಗೂ ದಲಿತ ಸಮುದಾಯದ ಹಿತಾಸಕ್ತಿಗಾಗಿ ನಿರಂತರವಾಗಿ ಶ್ರಮಿಸಿದ್ದಾರೆ. ಶಾಸಕ ಹಾಗೂ ಸಚಿವರಾಗಿ ಕಾರ್ಯ ನಿರ್ವಹಿಸಿದ ಅವಧಿಯಲ್ಲಿ ಜನಪರ ಯೋಜನೆಗಳನ್ನು ಜಾರಿಗೆ ತರುವ ಮೂಲಕ ಸಮಾಜದ ವಿವಿಧ ವರ್ಗಗಳ ವಿಶ್ವಾಸ ಗಳಿಸಿದ್ದಾರೆ. ರಾಜಕಾರಣದಲ್ಲಿ ಅಪಾರ ಅನುಭವ ಹೊಂದಿರುವ ಮಹದೇವಪ್ಪ ಅವರಿಗೆ ಸಚಿವ ಸಂಪುಟದಲ್ಲಿ ಅವಕಾಶ ಕಲ್ಪಿಸುವುದು ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಅಗತ್ಯವಾಗಿದೆ. ದಲಿತ ಸಮುದಾಯದ ಆಶಯಗಳಿಗೆ ಸ್ಪಂದಿಸಿ ಅವರಿಗೆ ಸಚಿವ ಸ್ಥಾನ ನೀಡಬೇಕೆಂಬ ಒತ್ತಾಯ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ ಎಂದರು.



ಸಭೆಯಲ್ಲಿ ಮೈಮುಲ್ ಮಾಜಿ ಅಧ್ಯಕ್ಷ ಆರ್.ಚೆಲುವರಾಜು ಮಾತನಾಡಿದರು.

ತಾಪಂ ಮಾಜಿ ಅಧ್ಯಕ್ಷ ದೊಡ್ಡೇಬಾಗಿಲು ಮಲ್ಲಿಕಾರ್ಜುನಸ್ವಾಮಿ ಮಾತನಾಡಿ, ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ರಸ್ತೆ, ಶಿಕ್ಷಣ, ನೀರಾವರಿ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ವಿಶೇಷ ಗಮನ ಹರಿಸಿದ್ದು, ಜನರೊಂದಿಗೆ ನಿರಂತರ ಸಂಪರ್ಕ ಹೊಂದಿ ಸಮಸ್ಯೆಗಳಿಗೆ ಪರಿಹಾರ ಒದಗಿಸುವಲ್ಲಿ ಯಶಸ್ವಿಯಾಗಿದ್ದಾರೆ. ಅವರ ಆಡಳಿತ ಅನುಭವ ಮತ್ತು ದೂರದೃಷ್ಟಿಯಿಂದ ಅನೇಕ ಅಭಿವೃದ್ಧಿ ಯೋಜನೆಗಳು ಜಾರಿಯಾಗಿವೆ. ಹೀಗಾಗಿ ಅವರನ್ನು ಡಿಸಿಎಂ ಮಾಡಬೇಕಿತ್ತು. ಆದರೆ ಅವರನ್ನು ಸಂಪುಟದಿಂದ ಹೊರಗಿಡುವುದರಿಂದ ಈ ಭಾಗದ ಜನರ ನಿರೀಕ್ಷೆಗಳಿಗೆ ಧಕ್ಕೆಯಾಗಲಿದೆ. ಹೀಗಾಗಿ ಮಹದೇವಪ್ಪ ಅವರಿಗೆ ಸಚಿವ ಸ್ಥಾನ ದೊರೆತರೆ ಇನ್ನಷ್ಟು ಅಭಿವೃದ್ಧಿ ಯೋಜನೆಗಳು ವೇಗ ಪಡೆಯಲಿದ್ದು, ಸಾಮಾಜಿಕ ನ್ಯಾಯಕ್ಕೂ ಬಲ ಸಿಗಲಿದೆ ಎಂದರು.

ಪ್ರತಿಭಟನೆಯಲ್ಲಿ ಪಾಲ್ಗೊಳ್ಳುವ ಕಾರ್ಯಕರ್ತರಿಗೆ ಊಟ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವ ಕುರಿತು ಸಭೆಯಲ್ಲಿ ತೀರ್ಮಾನಿಸಲಾಯಿತು. ಯಾವುದೇ ತೊಂದರೆಯಾಗದಂತೆ ಸಂಘಟಕರು ಪೂರ್ವ ಸಿದ್ಧತೆ ಕೈಗೊಳ್ಳಬೇಕು ಎಂದು ಮುಖಂಡರು ಸೂಚಿಸಿದರು.

ಪ್ರತಿಭಟನೆಯಲ್ಲಿ ಭಾಗವಹಿಸುವ ಎಲ್ಲರೂ ಶಾಂತಿಯುತವಾಗಿ ಪ್ರತಿಭಟನೆ ನಡೆಸಿ ತಮ್ಮ ಬೇಡಿಕೆಯನ್ನು ಸರ್ಕಾರದ ಗಮನಕ್ಕೆ ತರಬೇಕು ಎಂದು ಕರೆ ನೀಡಲಾಯಿತು. ಜಿಪಂ ಮಾಜಿ ಅಧ್ಯಕ್ಷ ಎಸ್. ಎನ್.ಸಿದ್ಧಾರ್ಥ, ತಾಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ವೀರೇಂದ್ರ ಬನ್ನೂರು ಪುರಸಭಾ ಮಾಜಿ ಅಧ್ಯಕ್ಷ ಮುನಾವರ್ ಪಾಷಾ, ಪ್ರೊ.ಕುರುಬೂರು ಬಸವರಾಜು, ಪಾರು ಪತ್ತೇದಾರ್ ಎಂ.ಬಿ. ಸಾಗರ್, ಸಮೂಹ ದೇವಾಲಯ ಗಳ ಅಧ್ಯಕ್ಷ ಬೆಟ್ಟಳ್ಳಿ ನಾಗರಾಜ್, ಪುರಸಭಾ ಮಾಜಿ ಸದಸ್ಯ ಸಬಿಲ್ ಖಾನ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚನ್ನ ಕೇಶವ, ಯಾಚೇನಹಳ್ಳಿ ಅಶೋಕ್, ನಾಗೇಶ್ ಗೌಡ, ತಾಪಂ ಮಾಜಿ ಸದಸ್ಯರಾದ ಕುಕ್ಕೂರು ಗಣೇಶ್, ನರಸಿಂಹ ಮಾದನಾಯಕ, ಕೆಬ್ಬೆ ರಂಗಪ್ಪ, ರಾಮಲಿಂಗಯ್ಯ, ಕೊತ್ತೇಗಾಲ ಬಸವರಾಜು, ದೊಡ್ಡಪುರ ನಂಜಪ್ಪ, ತರಕಾರಿ ದಿಲೀಪ್, ಹರೀಶ, ಕಲಿಯೂರು ಶಿವಣ್ಣ, ಕೇತಹಳ್ಳಿ ಸಿದ್ದಶೆಟ್ಟಿ, ತಲಕಾಡು ಸುಂದರನಾಯಕ, ಬೆಟ್ಟಹಳ್ಳಿ ನಾಗರಾಜು, ಆಪ್ತ ಸಹಾಯಕ ಬಸವರಾಜು, ನವಾಜ್ ಖಾನ್ ಮತ್ತಿತರರಿದ್ದರು.

> “ರಾಜ್ಯದ ವಿವಿಧ ಭಾಗಗಳಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಹೊಸ ದಿಕ್ಕು ನೀಡಿರುವ ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಸಚಿವ ಸಂಪುಟದಲ್ಲಿ ಸ್ಥಾನ ನೀಡದಿದ್ದರೆ ಅಭಿವೃದ್ಧಿ ಕಾರ್ಯಗಳು ಕುಂಠಿತಗೊಳ್ಳುವ ಆತಂಕವಿದೆ. ಸಚಿವರಾಗಿದ್ದ ಅವಧಿಯಲ್ಲಿ ರಾಜ್ಯದ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಿದ್ದು, ವಿಶೇಷವಾಗಿ ತಮ್ಮ ಕ್ಷೇತ್ರ ಹಾಗೂ ಈ ಭಾಗದ ಜನರ ಸಮಸ್ಯೆಗಳಿಗೆ ಸ್ಪಂದಿಸಿ ನಿರೀಕ್ಷೆಗೂ ಮೀರಿದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದಾರೆ – ಸೋಸಲೆ ಪರಶಿವಮೂರ್ತಿ, ಪಿಎಸಿಎಸ್ ಮಾಜಿ ಅಧ್ಯಕ್ಷ.

ಡಾ.ಹೆಚ್.ಸಿ.ಮಹದೇವಪ್ಪಗೆ ಸಚಿವ ಸ್ಥಾನ ನೀಡಲು ಒತ್ತಾಯ



ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಸಚಿವ ಸ್ಥಾನ ನೀಡುವಂತೆ ಒತ್ತಾಯಿಸಿದರು.

ಮಲ್ಕುಂಡಿ, ಜೂ.9– ಅನುಭವಿ ಆಡಳಿತಗಾರ, ಅಭಿವೃದ್ಧಿ ಹರಿಕಾರ, ಸಚಿವರಾಗಿ ಅಪಾರ ಸೇವೆ ಸಲ್ಲಿಸಿರುವ ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಸಚಿವ ಸ್ಥಾನ ನೀಡುವಂತೆ ನಂಜನಗೂಡು ತಾಲೂಕಿನ ತರಗನಹಳ್ಳಿ ಗ್ರಾಮಸ್ಥರು ಒತ್ತಾಯಿಸಿದರು.

ಗ್ರಾಮದಲ್ಲಿ ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರ ಭಾವಚಿತ್ರ ಹಿಡಿದು ಸಚಿವ ಸ್ಥಾನ ನೀಡುವಂತೆ ಗ್ರಾಮಸ್ಥರು ಕಾಂಗ್ರೆಸ್ ಹೈಕಮಾಂಡ್ ಅನ್ನು ಒತ್ತಾಯಿಸಿದರು.

ಕಾಂಗ್ರೆಸ್ ಮುಖಂಡ ನಂಜುಂಡಸ್ವಾಮಿ ಮಾತನಾಡಿ, ಮೈಸೂರು, ಚಾಮರಾಜನಗರ, ಕೊಡಗು, ಮಂಡ್ಯ ಸೇರಿದಂತೆ ರಾಜ್ಯಾದ್ಯಂತ ಡಾ.ಹೆಚ್.ಸಿ.ಮಹದೇವಪ್ಪ ಅವರ ವರ್ಚಸ್ಸು ಹೆಚ್ಚಾಗಿದೆ. ತಮ್ಮ ಸುದೀರ್ಘ ರಾಜಕೀಯ ಜೀವನದಲ್ಲಿ ಯಾವುದೇ ಕಪ್ಪು ಚುಕ್ಕೆ ಇಲ್ಲದೇ ಆಡಳಿತ ನಡೆಸಿದ್ದಾರೆ. ದಲಿತ ಸಮುದಾಯದ ಪ್ರಭಾವಿ ನಾಯಕರಾಗಿರುವ ಮಹದೇವಪ್ಪನವರು ಬುದ್ಧ, ಬಸವ ಹಾಗೂ ಅಂಬೇಡ್ಕರ್ ಅವರ ಸಿದ್ಧಾಂತಗಳ ಬಲವಾದ ಪ್ರತಿಪಾದಕರಾಗಿದ್ದು, ಹಿಂದುಳಿದ ಹಾಗೂ ಶೋಷಿತ ವರ್ಗಗಳ ಜನರ ಧ್ವನಿಯಾಗಿದ್ದಾರೆ. ಕಾಂಗ್ರೆಸ್ ಪಕ್ಷದ ಪ್ರಮುಖ ನಾಯಕರಾಗಿ ಹಾಗೂ ಮಾಜಿ ಸಿಎಂ ಸಿದ್ದರಾಮಯ್ಯ ಅವರ ಆಪ್ತ ವಲಯದಲ್ಲಿ ಗುರ್ತಿಸಿಕೊಂಡಿರುವ ಅವರು ಜನಪರ ಕಾರ್ಯದಲ್ಲಿ ಮುಂಚೂಣಿಯಲ್ಲಿದ್ದಾರೆ. ಹೀಗಾಗಿ ಪಕ್ಷ ನಿಷ್ಠೆ ಹಾಗೂ ಪಕ್ಷ ಸಂಘಟನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಡಾ.ಹೆಚ್.ಸಿ.ಮಹದೇವಪ್ಪ ಅವರನ್ನು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ತಮ್ಮ ಸಂಪುಟಕ್ಕೆ ಸೇರಿಸಿಕೊಳ್ಳಬೇಕು ಎಂದು ಆಗ್ರಹಿಸಿದರು. ಈ ವೇಳೆ ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರು ಹಾಗೂ ಗ್ರಾಮಸ್ಥರು ಹಾಜರಿದ್ದರು.

ಎಂಡಿಎ ಪ್ರಭಾರ ಆಯುಕ್ತ ಕೆ.ಆರ್.ರಕ್ಷಿತ್ ಈಗ ನಗರಾಭಿವೃದ್ಧಿ ಸಚಿವ ಯತೀಂದ್ರ ಆಪ್ತ ಕಾರ್ಯದರ್ಶಿ

ಮೈಸೂರು, ಜೂ.9(ಬಿಎಲ್‌ಯು)– ನಿರೀಕ್ಷೆಯಂತೆ ಮೈಸೂರು ಅಭಿವೃದ್ಧಿ ಪ್ರಾಧಿಕಾರದ ವಿಶೇಷ ಭೂ ಸ್ವಾಧೀನ ಅಧಿಕಾರಿ ಹಾಗೂ ಪ್ರಭಾರ ಆಯುಕ್ತ ಕೆ.ಆರ್.ರಕ್ಷಿತ್ ಅವರನ್ನು ಮಾಜಿ ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರ ಪುತ್ರ ಹಾಗೂ ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಅವರ ಆಪ್ತ ಕಾರ್ಯದರ್ಶಿಯಾಗಿ ಸರ್ಕಾರ ನಿಯೋಜಿಸಿದೆ.

ಎಂಡಿಎ ಪ್ರಭಾರ ಆಯುಕ್ತ ರಕ್ಷಿತ್, ಡಾ.ಯತೀಂದ್ರ ಆಪ್ತ ಕಾರ್ಯದರ್ಶಿ ಯಾಗಲಿದ್ದಾರೆ ಎಂದು ಖಚಿತ ಮಾಹಿತಿ ಆಧರಿಸಿ ಮೈಸೂರು ಮಿತ್ರ ಜೂ. 5ರ ಸಂಚಿಕೆಯಲ್ಲಿ ವರದಿ ಪ್ರಕಟಿಸಿತ್ತು.

ಅದರಂತೆ ಇಂದು ರಕ್ಷಿತ್ ಅವರನ್ನು ಡಾ.ಯತೀಂದ್ರ ಅವರ ಆಪ್ತ ಕಾರ್ಯ ದರ್ಶಿಯಾಗಿ ನಿಯೋಜಿಸಿ ಸರ್ಕಾರ ಆದೇಶ ಹೊರಡಿಸಿದೆ. ಸಚಿವರ ಇಲಾಖೆಯ ಆಡಳಿತ ವ್ಯವಹಾರದಲ್ಲಿ ಆಪ್ತ ಕಾರ್ಯ ದರ್ಶಿ ಪ್ರಧಾನ ಪಾತ್ರಧಾರಿ. ವಿಧಾನ ಸೌಧದ ಸಚಿವರ ಕೊಠಡಿಗೆ ಹೊಂದಿ ಕೊಂಡಂತೆ ವ್ಯವಸ್ಥೆ ಮಾಡಿರುವ ಕಚೇರಿ ಯಲ್ಲಿ ಆಪ್ತ ಕಾರ್ಯದರ್ಶಿ ಕಾರ್ಯ ನಿರ್ವಹಿಸುತ್ತಾರೆ.

ಇಲಾಖೆಯ ಆಡಳಿತ ನಿರ್ವಹಣೆ ಯಲ್ಲಿ ಪ್ರಮುಖ ಪಾತ್ರ ವಹಿಸಿರುವ ಆಪ್ತ ಕಾರ್ಯದರ್ಶಿ ಆಯ್ಕೆಯಲ್ಲಿ ಸಚಿವರು ನಂಬಿಕಸ್ತರಿಗೆ ಆದ್ಯತೆ ನೀಡುತ್ತಾರೆ. ಪ್ರತಿ ಯೊಬ್ಬ ಸಚಿವರು ನಂಬಿಕಸ್ಥ ಅಧಿಕಾರಿ ಯನ್ನು ಕಾರ್ಯದರ್ಶಿ ಹುದ್ದೆಗೆ ಆಯ್ಕೆ ಮಾಡಿ ಕೊಳ್ಳುವುದು ಸರ್ವೇ ಸಾಮಾನ್ಯವಾಗಿದೆ.

ಈಗ ಯತೀಂದ್ರ ಕೂಡ ತಮ್ಮ ಆಪ್ತ ರಕ್ಷಿತ್ ಅವರನ್ನು ಆಪ್ತ ಕಾರ್ಯದರ್ಶಿಯಾಗಿ ಆಯ್ಕೆ ಮಾಡಿಕೊಂಡಿದ್ದಾರೆ. ಯತೀಂದ್ರ ಅವರ ಕೋರಿಕೆ ಮೇರೆಗೆ ಸರ್ಕಾರ ಈ ಆದೇಶ ಹೊರಡಿಸಿದೆ.

ದಿಟವಾಯ್ತು 'ಮೈಸೂರು ಮಿತ್ರ' ವರದಿ


ಡಾ.ಯತೀಂದ್ರ




ಕೆ.ಆರ್.ರಕ್ಷಿತ್

> ನನ್ನನ್ನು ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಅವರ ಆಪ್ತ ಕಾರ್ಯದರ್ಶಿಯಾಗಿ ಸರ್ಕಾರ ವರ್ಗಾವಣೆ ಮಾಡಿದೆ. ಗುರುವಾರ ಅಧಿಕಾರ ವಹಿಸಿಕೊಳ್ಳುತ್ತಿದ್ದೇನೆ.
> -ಕೆ.ಆರ್.ರಕ್ಷಿತ್, ಆಯುಕ್ತ, ಎಂಡಿಎ

ಪ್ರಭಾರ ಆಯುಕ್ತರಿಗೆ ಎಂಡಿಎ ಸಭೆ ಕರೆಯುವ, ಕಡತ ವಿಲೇವಾರಿ ಅಧಿಕಾರವಿದೆಯೇ?

ಮೈಸೂರು ಅಭಿವೃದ್ಧಿ ಪ್ರಾಧಿಕಾರದ ವಿಶೇಷ ಭೂಸ್ವಾಧೀನಾಧಿಕಾರಿಯಾಗಿದ್ದ ಕೆ.ಆರ್.ರಕ್ಷಿತ್, ಎಂಡಿಎ ಪ್ರಭಾರ ಆಯುಕ್ತರಾಗಿದ್ದರು. ಅವರಿಗೆ ಎಂಡಿಎ ಸಭೆ ಕರೆಯುವ, ಕಡತ ವಿಲೇವಾರಿ ಅಧಿಕಾರ ಇತ್ತೆ ಎಂಬ ಪ್ರಶ್ನೆ ಜನ ಸಾಮಾನ್ಯರನ್ನು ಕಾಡುತ್ತಿದೆ. ಪ್ರಭಾರ ಆಯುಕ್ತರಾದ ನಂತರ ರಕ್ಷಿತ್ ಅವರು ಎಂಡಿಎ ಸಭೆ ನಡೆಸಿದ್ದು, ಬಜೆಟ್ ಕೂಡ ಮಂಡಿಸಿದ್ದರು. ಜೊತೆಗೆ ಹಲವು ಮಹತ್ವದ ಆದೇಶಗಳಿಗೆ ಸಹಿ ಮಾಡಿದ್ದಾರೆ. ಮಂಜೂರಾತಿಯನ್ನೂ ನೀಡಿದ್ದಾರೆ. ಕೆಎಎಸ್ ಕಿರಿಯ ಶ್ರೇಣಿ ಅಧಿಕಾರಿಯಾಗಿರುವ ರಕ್ಷಿತ್ ಅವರು ಪ್ರಭಾರ ಆಯುಕ್ತರಾಗಿ ಈ ಎಲ್ಲಾ ಅಧಿಕಾರ ಚಲಾಯಿಸುವ ಕಾನೂನು ಬದ್ಧ ಅಧಿಕಾರ ಹೊಂದಿದ್ದರೆ ಎಂಬ ಪ್ರಶ್ನೆ ಎದುರಾಗಿದೆ. ಪ್ರಭಾರ ಅಧಿಕಾರ ತಾತ್ಕಾಲಿಕ ವಾಗಿರುತ್ತದೆ. ಹೀಗಿರುವಾಗ ರಕ್ಷಿತ್ ಅವರು ಪ್ರಭಾರ ಆಯುಕ್ತರಾಗಿ ಮಹತ್ವದ ನಿರ್ಧಾರ ಕೈಗೊಳ್ಳುವ ಅಧಿಕಾರ ಕಾನೂನಾತ್ಮಕವಾಗಿ ಅವರಿಗಿತ್ತೆ ಎಂಬ ಸರಣಿ ಪ್ರಶ್ನೆಗಳು ಜನ ಸಾಮಾನ್ಯರ ಮುಂದಿವೆ.ಈ ಮಧ್ಯೆ ಖಾಯಂ ಇಲ್ಲವೆ ಪ್ರಭಾರವಾದರೂ ಆಯುಕ್ತರಿಗೆ ಎಲ್ಲಾ ಅಧಿಕಾರವನ್ನು ಸರ್ಕಾರ ಕಲ್ಪಿಸಿದೆ ಎಂದು ಎಂಡಿಎ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿ ಲಕ್ಷ್ಮೀಕಾಂತರೆಡ್ಡಿ ಸ್ಪಷ್ಟಪಡಿಸಿದ್ದಾರೆ.

ವರ್ಗಾವಣೆಗೆ ಮುನ್ನ ಕಡತ ವಿಲೇವಾರಿ!

ಎಂಡಿಎ ಪ್ರಭಾರ ಆಯುಕ್ತ ರಕ್ಷಿತ್, ತಾವು ವರ್ಗಾವಣೆ ಸುಳಿವಿನ ಹಿನ್ನೆಲೆ ಯಲ್ಲಿ ತರಾತುರಿಯಲ್ಲಿ ಮಹತ್ವದ ಕಡತ ಗಳನ್ನು ವಿಲೇವಾರಿ ಮಾಡಿದರೆಂಬ ಗಂಭೀರ ಆರೋಪ ಕೇಳಿ ಬಂದಿದೆ.

ನಗರಾಭಿವೃದ್ಧಿ ಸಚಿವ ಡಾ. ಯತೀಂದ್ರ ಆಪ್ತ ಕಾರ್ಯದರ್ಶಿಯಾಗಿ ವರ್ಗಾವಣೆ ಆಗುವುದನ್ನು ಬಹುಶಃ ಅರಿತಿದ್ದ ರಕ್ಷಿತ್, ಜೂನ್ 5 ರಂದು ಎಂಡಿಎ ಸಭೆ ನಡೆಸಿದ್ದರು. ಸಭೆಯ ಹಿಂದಿನ ದಿನ ಅಂದರೆ ಜೂನ್ 4 ರಂದು ಸರಿರಾತ್ರಿ ವರೆಗೆ ಎಂಡಿಎಯಲ್ಲಿ ಅಧಿಕಾರಿಗಳು, ಸಿಬ್ಬಂದಿ ಕಾರ್ಯ ನಿರತರಾಗಿದ್ದರು. ಅವರಿಗೆ ಮಧ್ಯವರ್ತಿಗಳು ಸಾಥ್ ನೀಡಿದ್ದರು.

ಮುಡಾದಲ್ಲಿ ಭಾರೀ ಹಗರಣಗಳು ನಡೆದಿದ್ದವು. ಅದರಲ್ಲಿ ಮುಖ್ಯಮಂತ್ರಿ ಯಾಗಿದ್ದ ಸಿದ್ದರಾಮಯ್ಯ ಕುಟುಂಬ 14 ಬದಲಿ ನಿವೇಶನ ಪಡೆದ ಪ್ರಕರಣವೂ ಒಂದಾ ಗಿತ್ತು. ಈ ಸಂಬಂಧ ಇ.ಡಿ, ಲೋಕಾಯುಕ್ತ ಹಾಗೂ ದೇಸಾಯಿ ಆಯೋಗ ತನಿಖೆ ನಡೆಸಿದೆ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಬ್ಲಾಸ್ಟ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಹೈ ಜವಾನಿ ತೋ ಇಷ್ಕ್ ಹೋನಾ ಹೈ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಪೆದ್ದಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲೋ ನವೀನ (ಕ)	4 ಪ್ರದರ್ಶನಗಳು
ರಾಜಕಮಲ್	
ಕರುಪ್ಪು (ತ)	4 ಪ್ರದರ್ಶನಗಳು
ಸಂಗಂ	
ಮ್ಯಾಂಗೋ ಪಚ್ಚ (ಕ)	4 ಪ್ರದರ್ಶನಗಳು
ಲಿಡೋ	
ಕೆಡಿ(ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಲೋ ನವೀನ (ಕ)	4 ಪ್ರದರ್ಶನಗಳು

ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಸ್ಥಾನಕ್ಕೆ ಹಲವರು ತೀವ್ರ ಪೈಪೋಟಿ ಯತೀಂದ್ರ ಕೃಪಾಕಟಾಕ್ಷ, ಡಿ.ಕೆ.ಶಿವಕುಮಾರ್ ಶ್ರೀರಕ್ಷೆ ಇದ್ದವರಿಗೆ ಯೋಗ

ಹಾಲಿ ಪ್ರಭಾರ ಆಯುಕ್ತ ಕೆ.ಆರ್.ರಕ್ಷಿತ್ ಅವರು ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಅವರ ಆಪ್ತ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದು, ಈಗ ಎಂಡಿಎ ಆಯುಕ್ತ ಸ್ಥಾನಕ್ಕೆ ಅಧಿಕಾರಿಗಳಲ್ಲಿ ಭಾರೀ ಪೈಪೋಟಿ ನಡೆಯುತ್ತಿದೆ.

ಬಡಾವಣೆ ನಿರ್ಮಾಣ, ಖಾಸಗಿ ಬಡಾವಣೆಗೆ ಅನುಮೋದನೆ, ಅಭಿವೃದ್ಧಿ ಕಾರ್ಯಗಳು ಸೇರಿ ದಂತೆ ಸಾವಿರಾರು ಕೋಟಿ ರೂಪಾಯಿಗಳ ವಹಿವಾಟು ನಡೆಯುವ ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರ ಹುದ್ದೆಗೆ ಭಾರೀ ಲಾಭಿ ನಡೆಯುತ್ತಿದೆ.

ಮುಡಾ ಅಸ್ತಿತ್ವದಲ್ಲಿದ್ದಾಗ ಶಾಸಕರು ಪ್ರಾಧಿಕಾರದ ಸದಸ್ಯರಾಗಿರುತ್ತಿದ್ದರು. ಆ ವೇಳೆ ಸಾಮಾನ್ಯವಾಗಿ ಆಡಳಿತಾತ್ಮಕ ಕೆಲಸ ಕಾರ್ಯಗಳಲ್ಲಿ ಶಾಸಕರು ಹಸ್ತಕ್ಷೇಪ ಮಾಡುತ್ತಿದ್ದರು. ಶಾಸಕರ ಮಾತು ಕೇಳು ವಂತೆಯೂ ಇಲ್ಲ, ಪಾಲಿಸದೆ ಇರುವಂತೆಯೂ ಇಲ್ಲ ಎಂಬಂತೆ ಆಯುಕ್ತರು ಅತಂತ್ರ ಸ್ಥಿತಿಯಲ್ಲಿ ಕಾರ್ಯ ನಿರ್ಹಿಸುತ್ತಿದ್ದರು.

ಆದರೆ, ಈಗ ಎಂಡಿಎ ಅಸ್ತಿತ್ವಕ್ಕೆ ತಂದಿದ್ದು, ಇಲ್ಲಿ ಶಾಸಕರ ಸದಸ್ಯ ಸ್ಥಾನ ರದ್ದಾಗಿದೆ. ಪ್ರಾಧಿ ಕಾರದಲ್ಲಿ ಬಹುತೇಕ ಅಧಿಕಾರಿಗಳೇ ಸದಸ್ಯರಾಗಿರುತ್ತಾರೆ. ಶಾಸಕರಿಗೆ ಯಾವುದೇ ವಿಶೇಷ ಅಧಿಕಾರ ಇಲ್ಲ. ನಾಮ ನಿರ್ದೇಶನಗೊಂಡವರಷ್ಟೇ ಇಲ್ಲಿರಬಹುದು.

ಇದರಿಂದ ಯಾವುದೇ ಹಸ್ತಕ್ಷೇಪವಿಲ್ಲದೆ ಆಯುಕ್ತರು ಕೆಲಸ ಮಾಡಬಹುದು. ಹಾಗಾಗಿ ಆಡಳಿತ ಸ್ವಾತಂತ್ರ್ಯವಿದೆ ಎಂಬ ಕಾರಣಕ್ಕೆ ಎಂಡಿಎ ಆಯುಕ್ತ ಹುದ್ದೆ ಅಲಂಕರಿಸಲು ಅಧಿಕಾರಿಗಳಲ್ಲಿ ಭಾರೀ ಲಾಭಿ ಶುರುವಾಗಿದೆ. ಇಂತಹ ಪೈಪೋಟಿಯಲ್ಲಿ ಯಾರು ಆಯುಕ್ತರಾಗುತ್ತಾರೆ ಎಂಬ ಸಹಜ ಕುತೂಹಲವಿದೆ.

ಯತೀಂದ್ರ ಅವರ ಕೃಪಾಕಟಾಕ್ಷ ಇದ್ದವರು ಅಥವಾ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಅತ್ಯಾಪ್ತರಾಗಿರುವ ಅಧಿಕಾರಿ ಎಂಡಿಎ ಆಯುಕ್ತರಾಗಿ ನೇಮಕಗೊಳ್ಳುತ್ತಾರೆ. ಈ ಮೊದಲು ಐಎಎಸ್ ದರ್ಜೆಯ ಅಧಿಕಾರಿಗಳು ಪ್ರಾಧಿಕಾರದ ಆಯುಕ್ತರಾಗಿ ರುತ್ತಿದ್ದರು. ಆದರೆ ಐಎಎಸ್ ಆದವರು ಸಚಿವರು, ಶಾಸಕರು ಸೇರಿದಂತೆ ಜನಪ್ರತಿನಿಧಿಗಳಿಗೆ ಅಷ್ಟಾಗಿ ಮಣೆ ಹಾಕುತ್ತಿರಲಿಲ್ಲ. ಈ ಹಿನ್ನೆಲೆಯಲ್ಲಿ ಇತ್ತೀಚಿನ ಕೆಲವು ವರ್ಷಗಳಿಂದ ಐಎಎಸ್ ಬದಲು ಕೆಎಎಸ್ ಅಧಿಕಾರಿಗಳನ್ನು ಎಂಡಿಎ ಆಯುಕ್ತರಾಗಿ ಸರ್ಕಾರ ನೇಮಕ ಮಾಡುತ್ತಾ ಬಂದಿದೆ.

ಎಂಡಿಎ ಆಯುಕ್ತ ಹುದ್ದೆ ಆಯಕಟ್ಟಿನ ಸ್ಥಾನವಾದರೂ ಇತ್ತೀಚೆಗೆ ಭಾರೀ ಹಗರಣಗಳು ಆಯುಕ್ತರಾದವರಿಗೆ ಎಚ್ಚರಿಕೆ ಗಂಟೆಗಳಾಗಿವೆ. ಸಾವಿರಾರು ಕೋಟಿ ವ್ಯವಹಾರ ನಡೆಯುವ ಎಂಡಿಎ ಆಯುಕ್ತರಾದವರಿಗೆ ಈ ಅಧಿಕಾರ ಹೂವಿನ ಹಾಸಿಗೆ ಎನ್ನಬಹುದಾದರೂ, ಆಗಾಗ ಬಿಸಿ ಅನುಭವ ವಾಗುವುದುಂಟು. ಮುಡಾ ಹಗರಣದ ನಂತರ ಆಯುಕ್ತರಾದ ಒಬ್ಬರು ಎಷ್ಟೊತ್ತಿಗೆ ಈ ಸ್ಥಾನದಿಂದ ವರ್ಗಾವಣೆಗೊಳ್ಳುತ್ತೇನೊ ಎಂದು ದಿನಗಳನ್ನು ಎಣಿಸುತ್ತಿದ್ದರು. ಕೊನೆಗೂ ಒತ್ತಡ ಹೇರಿ ಬೆಂಗ ಳೂರಿಗೆ ವರ್ಗಾವಣೆಗೊಳ್ಳುವಲ್ಲಿ ಯಶಸ್ವಿಯಾದರು.

ಮೈಸೂರು ಬೇಸಿಗೆ ರೇಸ್

3ನೇ ದಿನ, ಬುಧವಾರ, 10–6–2026

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 1.30 ಗಂಟೆಗೆ

I. ಅರಕಲಗೂಡ್ ಪ್ಲೇಟ್–1100 ಮೀ. 3 ವರ್ಷದ (ಟರ್ಮ್ಸ್). ಮ.1.30ಕ್ಕೆ
1. ಸ್ಟ್ರಾಮ್ ರೈಡರ್ 2. ಪೈಲಟ್ ಆಫೀಸರ್

II. ಚೈತನ್ಯ ಚಕ್ರಂ ಪ್ಲೇಟ್ ಡಿII–1100 ಮೀ. ರೇಟೆಡ್ 00 ರಿಂದ 25. ಮ.2.00ಕ್ಕೆ
1 ಜೆಸ್ಟ್ ಬ್ಲೂಸ್ 2. ಮಧುವಾ ತಲೈವಿ

III. ಮಳವಳ್ಳಿ ಪ್ಲೇಟ್ ಡಿII–1400 ಮೀ. ರೇಟೆಡ್ 20 ರಿಂದ 45. ಮ.2.30ಕ್ಕೆ
1. ಐರನ್ ಕಿಂಗ್ 2. ವಾಲ್ಟರ್

IV. ಚೈತನ್ಯ ಚಕ್ರಂ ಪ್ಲೇಟ್ ಡಿI–1100 ಮೀ. ರೇಟೆಡ್ 00 ರಿಂದ 25. ಮ.3.00ಕ್ಕೆ
1. ವಿಂಡ್ ಬಾರ್ನ್ 2. ಮಿಸ್ಟರ್ ಕರ್ನಾಟಕ

V. ಮಳವಳ್ಳಿ ಪ್ಲೇಟ್ ಡಿI–1400 ಮೀ. ರೇಟೆಡ್ 20 ರಿಂದ 45. ಮ.3.30ಕ್ಕೆ
1. ಓ ಮಂಚಾಲಿ 2. ಅಮೇಜಿಂಗ್ ಅರೈಸ್

VI. ಅಂಬಾವಿಲಾಸ್ ಪ್ಯಾಲೆಸ್ ಟ್ರೋಫಿ 1200 ಮೀ. ರೇಟೆಡ್ 80 ಮತ್ತು ಮೇಲ್ವರ್ಗ. ಸಂ.4.00ಕ್ಕೆ
1. ಕ್ರೌನ್ ಡ್ರೈವ್ 2. ಗೋಲ್ಡ್ ಕೈಟ್

VII. ಬಿಡದಿ ಪ್ಲೇಟ್-1600 ಮೀ. ರೇಟೆಡ್ 20 ರಿಂದ 45. ಸಂ.4.30ಕ್ಕೆ
1. ಕೊಸೆಟೆ 2. ಗೋಲ್ಡನ್ ಸಬರೆ

VIII. ಕೊಳ್ಳೇಗಾಲ ಪ್ಲೇಟ್ 1400 ಮೀ. ರೇಟೆಡ್ 40 ರಿಂದ 65. ಸಂ.5.00ಕ್ಕೆ
1. ಕ್ಲಿಂಟ್ 2. ರೆಡ್ ಫಾಲ್ಕನ್

ದಿನದ ಅತ್ಯುತ್ತಮ	: ಕ್ರೌನ್ ಡ್ರೈವ್
ಡಬ್ಬಲ್	: ಸ್ಟ್ರಾಮ್ ರೈಡರ್, ಕ್ಲಿಂಟ್
ಜಾಕ್‌ಪಾಟ್	: 4, 5, 6, 7 ಮತ್ತು 8
ಮಿನಿ ಜಾಕ್‌ಪಾಟ್	: 5, 6, 7 ಮತ್ತು 8
I ಟ್ರಿಬಲ್	: 1, 2 ಮತ್ತು 3
II ಟ್ರಿಬಲ್	: 3, 4 ಮತ್ತು 5
III ಟ್ರಿಬಲ್	: 6, 7 ಮತ್ತು 8
ಎಕ್ಸ್‌ಆಕ್ಟ್	: 1 ರಿಂದ 8

ಟಿಪ್‌ಸ್ಟರ್ ಪಿಜಿಸಿ

ನೀರು ವ್ಯತ್ಯಯ

ಮೈಸೂರು, ಜೂ.9– ಮೈಸೂರು ನಗರಕ್ಕೆ ನೀರು ಸರಬರಾಜು ಮಾಡುವ ಮೇಳಾಪುರ ಮತ್ತು ರಮ್ಮನಹಳ್ಳಿ ಯಂತ್ರಾ ಗಾರಗಳಿಗೆ ವಿದ್ಯುತ್ ಸರಬರಾಜು ಮಾಡುವ ದೇವನೂರು ಸಬ್ ಸ್ಟೇಷನ್ ನಲ್ಲಿ ಕೆಪಿಟಿಸಿಎಲ್ ಇಲಾಖೆಯ ವತಿಯಿಂದ ಮೊದಲನೇ ತ್ರೈಮಾಸಿಕ ನಿರ್ವಹಣಾ ಕಾಮಗಾರಿಯನ್ನು ಕೈಗೆತ್ತಿಕೊಳ್ಳುತ್ತಿರುವುದರಿಂದ ಜೂನ್ 10ರಂದು ಬೆಳಗ್ಗೆ 10ರಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ಸರಬರಾಜು ನಿಲುಗಡೆ ಮಾಡಲಾಗುವ ಸಂಬಂಧ ಜೂನ್ 10 ಮತ್ತು ಜೂನ್ 11ರಂದು ನೀರು ಸರಬರಾಜಲ್ಲಿ ವ್ಯತ್ಯಯವಾಗಲಿದೆ.

ನೀರು ಸರಬರಾಜುವಿನಲ್ಲಿ ವ್ಯತ್ಯಯ ವುಂಟಾಗುವ ಪ್ರದೇಶಗಳು: ವಾರ್ಡ್ ನಂ. 9 ರಿಂದ 16, 28 ರಿಂದ 39, 52, 53 ಇದಕ್ಕೆ ಸಂಬಂಧಪಟ್ಟ ಪ್ರದೇಶ ಗಳಾದ ಕೆಸರೆ, ರಾಜೇಂದ್ರನಗರ, ಸುಭಾಷ್‌ನಗರ, ಎನ್.ಆರ್. ಮೊಹಲ್ಲಾ, ಗಾಂಧಿ ನಗರ, ಉದಯಗಿರಿ, ರಾಜೀವ್‌ನಗರ 1, 2 ಮತ್ತು 3ನೇ ಹಂತ, ಶಾಂತಿನಗರ, ಕಲ್ಯಾಣಗಿರಿ, ಡಾ। ರಾಜ್ ಕುಮಾರ್ ರಸ್ತೆಗೆ ಸೇರಿ ಕೊಂಡ ಪ್ರದೇಶಗಳು, ಯರಗನಹಳ್ಳಿ, ಸಿದ್ಧಾರ್ಥ ಬಡಾವಣೆ, ಆಲನಹಳ್ಳಿ, ನಂದಿನಿ ಬಡಾವಣೆ, ಗಿರಿದರ್ಶಿನಿ ಬಡಾ ವಣೆ, ಗೌಸಿಯಾನಗರ, ಕ್ಯಾತಮಾರನ ಹಳ್ಳಿ ಹಾಗೂ ಇನ್ನಿತರ ಪ್ರದೇಶಗಳಲ್ಲಿ ನೀರಿನ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ನೀರು ಸರಬ ರಾಜು ಮತ್ತು ಒಳಚರಂಡಿ ಪೂರ್ವ ವಿಭಾಗದ ಕಾರ್ಯಪಾಲಕ ಅಭಿಯಂತ ರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೆಲ್ಲಹಳ್ಳಿಯ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಪರಿಸರ ದಿನಾಚರಣೆ

ಮೈಸೂರು, ಜೂ.9– ಮನುಷ್ಯನ ಸ್ವಾರ್ಥದಿಂದ ಪರಿಸರದ ಮೇಲೆ ದೌರ್ಜನ್ಯ ನಡೆದಿದೆ. ಸಮತೋಲನ ವ್ಯವಸ್ಥೆ ಹದ ಗೆಟ್ಟಿದೆ. ತತ್ಪರಿಣಾಮವಾಗಿ ಹವಾಮಾನ ವೈಪರೀತ್ಯಗಳು ಸಂಭವಿಸುತ್ತಿವೆ. ಇದ ರಿಂದಾಗಿ ಒಂದೇ ದಿನದಲ್ಲಿ ಎಲ್ಲ ಋತು ಗಳು ಘಟಿಸುತ್ತಿವೆ. ಇದು ಜೀವ ಸಂಕುಲಕ್ಕೆ ತುಂಬ ಅಪಾಯಕಾರಿ ಎಂದು ಸಾಹಿತಿ ಮತ್ತು ಶಿಕ್ಷಕ ಟಿ. ಸತೀಶ್ ಜವರೇಗೌಡ ಆತಂಕ ವ್ಯಕ್ತಪಡಿಸಿದರು.

ತಾಲೂಕಿನ ಮೆಲ್ಲಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣ ದಲ್ಲಿ ಇಕೋ ಕ್ಲಬ್ ವತಿಯಿಂದ ನಡೆದ ವಿಶ್ವ ಪರಿಸರ ದಿನಾಚರಣೆಯಲ್ಲಿ ಮಾತ ನಾಡಿದ ಅವರು, ಪರಿಸರ ನಾಶದಿಂದ ಮನುಷ್ಯ ಮಾತ್ರವಲ್ಲದೆ, ಇಡೀ ಜೀವ ವ್ಯವಸ್ಥೆಯೇ ವಿನಾಶದ ಹಾದಿಯಲ್ಲಿದೆ. ದಿನೇ ದಿನೆ ನೆಮ್ಮದಿ ದೂರವಾಗುತ್ತಿದೆ ಎಂದು ನುಡಿದರು. ಅತಿಯಾದ ಪ್ಲಾಸ್ಟಿಕ್ ಬಳಕೆಯಿಂದ ಮಣ್ಣಿನ ಮಾಲಿನ್ಯ ಹೆಚ್ಚಿದೆ. ಮಳೆ ನೀರು ಭೂಮಿಯಲ್ಲಿ ಇಂಗುತ್ತಿಲ್ಲ. ಅಂತರ್ಜಲ ಮಟ್ಟ ಕ್ಷೀಣಿಸಿದೆ. ಯಾರೂ ಕೂಡ ನೀರಿನ ಮಿತಬಳಕೆಯ ಬಗ್ಗೆ ಗಮನ ವಹಿಸುತ್ತಿಲ್ಲ. ಮನುಷ್ಯ ತನ್ನ ತಪ್ಪನ್ನು ತಿದ್ದಿಕೊಳ್ಳದಿದ್ದರೆ, ಮುಂದೆ ಪ್ರಕೃತಿಯೇ ತನ್ನ ವಿಕೋಪಗಳ ಮೂಲಕ ತಕ್ಕ ಪಾಠ ಕಲಿಸಲಿದೆ ಎಂದು ಎಚ್ಚರಿಸಿದರು.

ವಿದ್ಯಾರ್ಥಿಗಳು ತಮ್ಮ ಶಾಲಾವರಣ, ಮನೆಯ ಸುತ್ತ ಮುತ್ತ, ಊರಿನ ರಸ್ತೆಯ ಬದಿಗಳಲ್ಲಿ ಗಿಡಗಳನ್ನು ನೆಟ್ಟು ಬೆಳೆಸಬೇಕು. ಅವುಗಳನ್ನು ದತ್ತು ಪಡೆದು ಪೋಷಿಸುವ ಮೂಲಕ ಪರಿಸರದ ರಕ್ಷಣೆಗೆ ಮುಂದಾ ಗಬೇಕು. ಆಗ ಮಾತ್ರ ಜೀವ ಜಗತ್ತು ನೆಮ್ಮದಿ ಯಿಂದ ಬದಕಲು ಸಾಧ್ಯ ಎಂದರು.


ಮೆಲ್ಲಹಳ್ಳಿ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ ಆಚರಿಸಲಾಯಿತು.

ಮುಖ್ಯ ಶಿಕ್ಷಕಿ ಪಿ.ಎನ್. ವೀಣಾ ಮಾತನಾಡಿ, ವಿದ್ಯಾರ್ಥಿಗಳು ಪರಿಸರವನ್ನು ಪ್ರೀತಿಸಬೇಕು. ಎಲ್ಲಾ ಕಡೆ ಗಿಡಗಳನ್ನು ನೆಟ್ಟು ಹಾರೈಕೆ ಮಾಡಬೇಕು. ಆಗ ಸುಂದರ ವಾದ ಪ್ರಕೃತಿ ನಗುತ್ತದೆ. ಉತ್ತಮ ವಾತಾ ವರಣ ನಿರ್ಮಾಣಗೊಳ್ಳುತ್ತದೆ. ಶಾಲೆಯ ಆವರಣದಲ್ಲಿ ಗಿಡಮರಗಳನ್ನು ಸಂರಕ್ಷಣೆ ಮಾಡಬೇಕು ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಶಿಕ್ಷಕರಾದ ಪಿ.ಎಲ್. ಭಾಗ್ಯ, ಕಲ್ಪನ, ಆರ್.ಹೆಚ್. ಶ್ರೀದೇವಿ, ಬಿ.ಎಂ. ಸರಸ್ವತಿ, ಸೌಜನ್ಯ, ಕೆ. ವಸಂತಲಕ್ಷ್ಮಿ, ಸುನೀಲ್ ಕುಮಾರ್, ರಂಗಸ್ವಾಮಿ, ಮಹಮ್ಮದ್ ಸುಹೇಲ್, ಕೀರ್ತಿ ಕುಮಾರ್ ಉಪಸ್ಥಿತರಿದ್ದರು. ಮಕ್ಕಳು ಮತ್ತು ಶಿಕ್ಷಕರು ಶಾಲಾವರಣ ದಲ್ಲಿ ಹೂ, ಹಣ್ಣು, ತರಕಾರಿ ಗಿಡಗಳನ್ನು ನೆಡುವ ಮೂಲಕ ವಿಶ್ವ ಪರಿಸರ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಸರ್ವೋಚ್ಚ ನ್ಯಾಯಾಲಯದಲ್ಲಿ ವಿಶೇಷ ಲೋಕ ಅದಾಲತ್

ಮೈಸೂರು, ಜೂ.9– ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ಸರ್ವೋಚ್ಚ ನ್ಯಾಯಾಲಯವು ವಿಶೇಷ ಲೋಕ ಅದಾಲತ್ ಅನ್ನು 21.08.2026 ರಿಂದ 23.08.2026ರವರೆಗೆ ನಡೆಸಲು ಉದ್ದೇಶಿಸಿದೆ. ಪಕ್ಷಕಾರರುಗಳಿಗೆ, ಎದುರುದಾರರ ಜೊತೆ ಪೂರ್ವಭಾವಿ ಲೋಕ್ ಅದಾಲತ್ ಅನ್ನು ನಡೆಸಲು ವೀಡಿಯೊ ಕಾನ್ಫರೆನ್ಸ್ ವ್ಯವಸ್ಥೆ ಮಾಡ ಲಾಗಿರುತ್ತದೆ. ಎಲ್ಲಾ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಗಳಲ್ಲಿ ವೀಡಿಯೊ ಕಾನ್ಫರೆನ್ಸ್ ಕೇಂದ್ರಗಳನ್ನು ಸ್ಥಾಪಿಸಲು ತೀರ್ಮಾನಿಸಲಾಗಿದೆ.

ಎಲ್ಲಾ ಪಕ್ಷಕಾರರು ವೀಡಿಯೊ ಕಾನ್ಫರೆನ್ಸ್ ಮೂಲಕ ಸರ್ವೋಚ್ಚ ನ್ಯಾಯಾಲಯವು ನಡೆಸುವ ಪೂರ್ವಭಾವಿ ಲೋಕ ಅದಾ ಲತ್‌ನಲ್ಲಿ ಭಾಗವಹಿಸಲು ಅನುಕೂಲ ಮಾಡಲಾಗಿರುತ್ತದೆ. ಈ ವಿಶೇಷ ಲೋಕ ಅದಾಲತ್‌ನಲ್ಲಿ ರಾಜೀ ಸಂಧಾನಕ್ಕೆ ಗುರುತಿಸಲಾದ ಪ್ರಕರಣಗಳ ಪಟ್ಟಿಯನ್ನು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ವರದಿ ಯಾಗಿರುತ್ತದೆ. ಇದರಿಂದ ಸದರಿ ಪ್ರಕರಣಗಳಲ್ಲಿನ ಎಲ್ಲಾ ಪಕ್ಷಕಾರರು ಗಳು ತಮ್ಮ ವಾಸಸ್ಥಳಗಳ ವ್ಯಾಪ್ತಿಯಲ್ಲಿ ಬರುವ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಗಳಲ್ಲಿ ತೆರೆಯಲಾಗಿರುವ ವೀಡಿಯೊ ಕಾನ್ಫರೆನ್ಸ್ ಕೇಂದ್ರಗಳಿಗೆ ಭೇಟಿ ಕೊಟ್ಟು 21.08.2026 ರಿಂದ 23.08.2026ರವರೆಗೆ ನಡೆಯುವ ವಿಶೇಷ ಲೋಕ ಅದಾಲತ್‌ನಲ್ಲಿ ತಮ್ಮ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಬ ಹುದಾಗಿದೆ. ಈ ಕುರಿತು ಗೂಗಲ್ ಫಾರ್ಮ್ ಲಭ್ಯವಿದ್ದು, ಜುಲೈ 31ರ ಒಳಗಾಗಿ https://forms.gle/woYFFEph7pgiTQ7u7 ಗೂಗಲ್ ಫಾರ್ಮ್‌ನ ಮೂಲಕ ಸಂಬಂಧ ಪಟ್ಟ ವಕೀಲರು ಅಥವಾ ಪಕ್ಷಗಾರರು ಭರ್ತಿ ಮಾಡಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ WWW. kslsa.kar.nic.in ವೆಬ್‌ಸೈಟ್ ಅನ್ನು ಸಂಪರ್ಕಿಸಬಹುದಾಗಿದೆ ಹಾಗೂ ಆಯಾ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಗಳು ಮತ್ತು ತಾಲೂಕು ಕಾನೂನು ಸೇವಾ ಸಮಿತಿಗಳ ಸದಸ್ಯ ಕಾರ್ಯದರ್ಶಿಯ ವರನ್ನು ಮತ್ತು NALSA ಸಹಾಯವಾಣಿ ಸಂಖ್ಯೆ: 15100 ನ್ನು ಸಂಪರ್ಕಿಸಬಹು ದೆಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿ ಕಾರದ ಸದಸ್ಯ ಕಾರ್ಯದರ್ಶಿಗಳಾದ ಅಮರ್ ನಾಥ್.ಕೆ.ಕೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಾಲಾ ಮಕ್ಕಳಿಗೆ ಉಚಿತ ನೋಟ್ ಪುಸ್ತಕ ವಿತರಣೆ

ಮೈಸೂರು, ಜೂ.9– ಬಾಲ್ಯ ಫೌಂಡೇಶನ್ ಸಂಸ್ಥೆಯ ಸಹಯೋಗದೊಂದಿಗೆ ಮೈಸೂರಿನ ನೋಟ್ ಪುಸ್ತಕಗಳಲ್ಲಿ ಬಳಕೆಯಾಗದ ಹಾಳೆಗಳನ್ನು ಸಂಗ್ರಹಿಸಿ ಹಾಗೂ ಪುನರ್ ಬಳಕೆಗಾಗಿ ಬೈಂಡಿಂಗ್ ಮಾಡಿಸಿ ಆರ್ಥಿಕವಾಗಿ ಸದೃಢವಿಲ್ಲದ ಶಾಲಾ ಮಕ್ಕಳಿಗೆ ವಿತರಿಸುವ ಕಾರ್ಯಕ್ರಮವನ್ನು ಜೂನ್ 10 ರಂದು ಬೆಳಿಗ್ಗೆ 11.30 ಗಂಟೆಗೆ ಮೈಸೂರು ನಗರ ಕೇಂದ್ರ ಗ್ರಂಥಾಲಯ ಪೀಪಲ್ಸ್ ಪಾರ್ಕ್ ಗ್ರಂಥಾಲಯದಲ್ಲಿ ಹಮ್ಮಿಕೊಳ್ಳಲಾಗಿದೆ.

ಮೈಸೂರು ಮಹಾನಗರ ಪಾಲಿಕೆಯ ಪ್ರಾದೇಶಿಕ ಆಯುಕ್ತರು ಮತ್ತು ಆಡಳಿತಾಧಿಕಾರಿಗಳು ಹಾಗೂ ನಗರಗ್ರಂಥಾಲಯ ಪ್ರಾಧಿಕಾರದ ಅಧ್ಯಕ್ಷ ನಿತೀಶ್ ಪಾಟೀಲ್ ಅವರು ಕಾರ್ಯಕ್ರಮ ಉದ್ಘಾಟಿಸಿ ಶಾಲಾ ಮಕ್ಕಳಿಗೆ ನೋಟ್ ಪುಸ್ತಕಗಳ ವಿತರಣೆ ಮಾಡಲಿದ್ದಾರೆ.

ಪತ್ರಕರ್ತ ರಮೇಶ್‌ಉತ್ತಪ್ಪ ಅವರು ನೋಟ್ ಪುಸ್ತಕಗಳ ಮರುಬಳಕೆ ಅಭಿಯಾನದಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸಿದ ಸಿಬ್ಬಂದಿಗಳಿಗೆ ಅಭಿನಂದನೆ ಹೇಳಲಿದ್ದಾರೆ. ವಿಶೇಷ ಆಹ್ವಾನಿತರ ಭಾಷಣವನ್ನು ಮಾಡಲಿದ್ದಾರೆ. ಮಹಾರಾಜ ಕಾಲೇಜಿನ ಪ್ರಾಂಶು ಪಾಲರು ಹಾಗೂ ನಗರಗ್ರಂಥಾಲಯ ಪ್ರಾಧಿಕಾರದ ಉಪಾಧ್ಯಕ್ಷ ಡಾ. ವಿ.ಷಣ್ಮುಗಂ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಡಿ. ಉದಯ್‌ಕುಮಾರ್, ವಾಣಿಜ್ಯತೆರಿಗೆ ಇಲಾಖೆಯ ನಿವೃತ್ತ ಉಪ ಆಯುಕ್ತರು ಹಾಗೂ ನಗರ ಗ್ರಂಥಾಲಯ ಪ್ರಾಧಿಕಾರದ ಸದಸ್ಯರಾದ ರಮೇಶ್ ನರಸಯ್ಯ, ದಕ್ಷಿಣ ವಲಯದ ಕ್ಷೇತ್ರ ಶಿಕ್ಷಣ ಅಧಿಕಾರಿಗಳಾದ ಕೃಷ್ಣ, ದಕ್ಷಿಣ ವಲಯದ ಕ್ಷೇತ್ರ ಶಿಕ್ಷಣ ಅಧಿಕಾರಿಗಳಾದ ರೇವಣ್ಣ ಹಾಗೂ ಬಾಲ್ಯ ಫೌಂಡೇಶನ್ ಸಂಸ್ಥಾಪಕರಾದ ಅನಿಲ್ ಕೆ.ಎಸ್. ಭಾಗವಹಿಸಲಿದ್ದಾರೆ.

ವಿದ್ಯುತ್ ವ್ಯತ್ಯಯ

ಮೈಸೂರು, ಜೂ.9– ವಿ.ವಿ ಮೊಹಲ್ಲಾ ವಿಭಾಗ ವ್ಯಾಪ್ತಿಯಲ್ಲಿ ನಿರ್ವ ಹಣಾ ಕೆಲಸದ ನಿಮಿತ್ತ ಜೂನ್ 10 ಬೆಳಿಗ್ಗೆ 10:00 ಗಂಟೆಯಿಂದ ಸಂಜೆ 6:00 ಗಂಟೆಯವರೆಗೆ ವಿದ್ಯುತ್ ಸರಬ ರಾಜಿನಲ್ಲಿ ವ್ಯತ್ಯಯವಾಗಲಿದೆ.

ಟಿ.ಕಾಟೂರು, ವರಾಬರ್ಳ್ಳಿ, ಮಾರ್ಬಳ್ಳಿ ಹುಂಡಿ, ಅರಸಿನಕೆರೆ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಪ್ರದೇಶಗಳು.

ಧನಗಳ್ಳಿ, ಸಾಲುಂಡಿ, ಕೆಲ್ಲಹಳ್ಳಿ, ಉದ್ಬೂರು, ಟಿ ಕಾಟೂರು ಮತ್ತು ಸುತ್ತಮುತ್ತ ಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಅಲಯನ್ಸ್ ಕ್ಲಬ್ ಆಫ್ ಮೈಸೂರು ನಾಲ್ವಡಿ ನೂತನ ಪದಾಧಿಕಾರಿಗಳ ಪದಗ್ರಹಣ



ಮೈಸೂರು, ಜೂ. 9– ಇಲ್ಲಿನ ಹೂಟಗಳ್ಳಿಯ ಶ್ರೀ ಅನಂತೇಶ್ವರ ಭವನದಲ್ಲಿ ಅಸೋಸಿ ಯೇಷನ್ ಆಫ್ ಅಲಯನ್ಸ್ ಕ್ಲಬ್ ಇಂಟರ್‌ನ್ಯಾಷನಲ್ (ಡಿಸ್ಟ್ರಿಕ್ಟ್–255 (S), ಮೈಸೂರು) ವತಿಯಿಂದ 'ಅಲಯನ್ಸ್ ಕ್ಲಬ್ ಆಫ್ ಮೈಸೂರು ನಾಲ್ವಡಿ' ಸಂಘದ 2026–27ನೇ ಸಾಲಿನ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭವು ಯಶಸ್ವಿಯಾಗಿ ನೆರವೇರಿತು.

ಈ ಸೇವಾ ವರ್ಷಕ್ಕೆ ನೂತನ ಅಧ್ಯಕ್ಷರಾಗಿ ಅಲ್ಲೈ ಎನ್. ಬೆಟ್ಟೇಗೌಡ, ಕಾರ್ಯದರ್ಶಿಯಾಗಿ ಅಲ್ಲೈ ನಾಗೇಂದ್ರ ಹಾಗೂ ಕೋಶಾಧಿಕಾರಿಯಾಗಿ ಅಲ್ಲೈ ಸುನೀತಾ ಬೆಟ್ಟೇಗೌಡ ಅವರು ಅಧಿಕೃತವಾಗಿ ಪದಗ್ರಹಣ ಮಾಡಿದರು. ನೂತನ ಅಧ್ಯಕ್ಷರಾದ ಎನ್. ಬೆಟ್ಟೇಗೌಡ ನೇತೃತ್ವದಲ್ಲಿ ಇಡೀ ತಂಡವು ಮುಂಬರುವ ವರ್ಷದಲ್ಲಿ ಹಮ್ಮಿಕೊಳ್ಳಲಿರುವ ಸಾಮಾಜಿಕ ಸೇವಾ ಕಾರ್ಯಗಳ ಬಗ್ಗೆ ಸಂಕಲ್ಪ ತೊಟ್ಟಿತು. ಅಂತರರಾಷ್ಟ್ರೀಯ ಕಾರ್ಯದರ್ಶಿಗಳಾದ ಡಾ. ನಾಗರಾಜ್ ವಿ. ಬೈರಿ ಕಾರ್ಯಕ್ರಮ ಉದ್ಘಾಟಿಸಿ, ಪದಗ್ರಹಣ ವಿಧಿವಿಧಾನಗಳನ್ನು ನೆರವೇರಿಸಿ ಕೊಟ್ಟರು. ಮುಖ್ಯ ಅತಿಥಿಗಳಾಗಿ ಡಿಸ್ಟ್ರಿಕ್ಟ್ ಗವರ್ನರ್ ಅಲ್ಲೈ ಮಹಾಬಲೇಶ್ವರ ಬೈರಿ ಅವರು ಆಗಮಿಸಿ ನೂತನ ತಂಡಕ್ಕೆ ಶುಭ ಹಾರೈಸಿದರು. ಗೌರವಾನ್ವಿತ ಅತಿಥಿಗಳಾಗಿ ಐಸಿಸಿ ಚೇರ್ಮನ್ ಅಲ್ಲೈ ಬಾಲಕೃಷ್ಣ ರಾಜು, ಐಪಿಡಿಜಿ ಮತ್ತು ಜಂಟಿ ಪಿಆರ್‌ಓ ಅಲ್ಲೈ ಡಾ. ಎಸ್. ವೆಂಕಟೇಶ್ ಉಪಸ್ಥಿತರಿದ್ದರು.

ಈ ವೇಳೆ ವಿಶೇಷ ಆಹ್ವಾನಿತರಾಗಿ ಮೊದಲನೇ ವೈಸ್ ಡಿಸ್ಟ್ರಿಕ್ಟ್ ಗವರ್ನರ್ ಅಲ್ಲೈ ಸಂತೋಷ್ ಕುಮಾರ್, ಎರಡನೇ ವೈಸ್ ಡಿಸ್ಟ್ರಿಕ್ಟ್ ಗವರ್ನರ್ ಅಲ್ಲೈ ಡಾ. ಎನ್. ಗಂಗಾಧರಪ್ಪ, ಮೂರನೇ ವೈಸ್ ಡಿಸ್ಟ್ರಿಕ್ಟ್ ಗವರ್ನರ್ ಶಾಲಿನಿ ಬೈರಿ, ಡಿಸ್ಟ್ರಿಕ್ಟ್ ಕ್ಯಾಬಿನೆಟ್ ಸೆಕ್ರೆಟರಿ ಶ್ರೀಶೈಲ, ಡಿಸ್ಟ್ರಿಕ್ಟ್ ಕ್ಯಾಬಿನೆಟ್ ಟ್ರೆಷರರ್ ಅಲ್ಲೈ ಇಂದಿರಾ ವೆಂಕಟೇಶ್, ಡಿಸ್ಟ್ರಿಕ್ಟ್ ಪಿಆರ್‌ಓ ಕೃಷ್ಣೋಜಿರಾವ್, ಕ್ಯಾಬಿನೆಟ್ ಅಂಬಾ ಸಿಡರ್ ಅಲ್ಲೈ ಶೋಭಾ ಸಿರಿ ಬಾಲು, ರೀಜನ್ ಚೇರ್ ಪರ್ಸನ್ ಕೆ ಬಿ. ಲಿಂಗರಾಜು ಹಾಗೂ ಜೋನ್ ಚೇರ್ ಪರ್ಸನ್ ಡಾ. ವೈ. ಡಿ. ರಾಜಣ್ಣ ಸೇರಿದಂತೆ ಹಲವು ಪ್ರಮುಖರು ಭಾಗವಹಿಸಿದ್ದರು.

ಮೈಸೂರು ನಗರ ಸಾರಿಗೆ ನೂತನ ವಿಭಾಗೀಯ ನಿಯಂತ್ರಣಾಧಿಕಾರಿ ಜಗದೀಶ್ ಕುಮಾರ್ ಅಧಿಕಾರ ಸ್ವೀಕಾರ

ಮೈಸೂರು, ಜೂ.9(ಎಂಟಿವೈ)– ನಗರ ಸಾರಿಗೆ ಸಂಸ್ಥೆಗೆ ಸೇರಿದ ಬಸ್‌ಗಳನ್ನು ಸುಸ್ಥಿತಿ ಯಲ್ಲಿಟ್ಟುಕೊಂಡು ಪ್ರಯಾಣಿಕರಿಗೆ ಸುರಕ್ಷಿತ ಸೇವೆ ಒದಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಮೈಸೂರು ನಗರ ವಿಭಾಗೀಯ ನೂತನ ನಿಯಂತ್ರಣಾ ಧಿಕಾರಿ ಜಗದೀಶ್ ಕುಮಾರ್ ತಿಳಿಸಿದ್ದಾರೆ.

ನೂತನ ವಿಭಾಗೀಯ ನಿಯಂತ್ರಣಾಧಿಕಾರಿ ಯಾಗಿ ಅಧಿಕಾರ ವಹಿಸಿಕೊಂಡ ಬಳಿಕ ಅಧಿಕಾರಿ ಗಳೊಂದಿಗೆ ಸಭೆ ನಡೆಸಿ ಮಾತನಾಡಿದ ಅವರು, ನಗರ ವಿಭಾಗದ ಮಾರ್ಗಗಳಲ್ಲಿ ಬಸ್ ಸಂಚಾರ ದಲ್ಲಿ ವ್ಯತ್ಯಯ ಆಗದಂತೆ ನೋಡಿಕೊಳ್ಳಬೇಕು. ಸರ್ಕಾರದ ನಿಯಮಾನುಸಾರ 15 ವರ್ಷ ಮೇಲ್ಪಟ್ಟ ವಾಹನಗಳನ್ನು ಸ್ಕ್ರಾಪ್ ಮಾಡಬೇಕಾಗುತ್ತದೆ. ಅಲ್ಲಿಯವರೆಗೂ ಬಸ್‌ಗಳನ್ನು ಸುಸ್ಥಿತಿಯಲ್ಲಿಟ್ಟು ಕೊಳ್ಳಲು ಹಾಗೂ ದುರಸ್ತಿ ಮಾಡಲು ಗಮನ ಹರಿಸಬೇಕು. ಪ್ರಯಾಣಿಕರ ಸುರಕ್ಷತೆಗೆ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.


ಮೈಸೂರಿನ ಬನ್ನಿಮಂಟಪದ ಸಾರಿಗೆ ಸಂಸ್ಥೆಯ ನಗರ ವಿಭಾಗದ ಕಚೇರಿಯಲ್ಲಿ ನೂತನ ವಿಭಾಗೀಯ ನಿಯಂತ್ರಣಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಿದ ಜಗದೀಶ್ ಕುಮಾರ್ ಅವರನ್ನು ಸಿಬ್ಬಂದಿ ಅಭಿನಂದಿಸಿದರು.

ನಗರ ಸಾರಿಗೆ ಸಂಸ್ಥೆಗೆ ಹೊಸ ಬಸ್ಸುಗಳ ಸೇರ್ಪಡೆ ನಿರೀಕ್ಷೆಯಲ್ಲಿದ್ದೇವೆ. ಈಗಾಗಲೇ ಬಿಎಸ್–6 ಮಾದರಿಯ ಆರು ಹೊಸ ಬಸ್‌ಗಳು ಬಂದಿದ್ದು, ಅದರಲ್ಲಿ ನಂಜನಗೂಡು ಡಿಪೋಗೆ 4 ಹಾಗೂ ಸಾತಗಳ್ಳಿ ಡಿಪೋಗೆ 2 ಬಸ್ ಹಂಚಿಕೆಯಾಗಿವೆ. ಈ ತಿಂಗಳಾಂತ್ಯದಲ್ಲಿ ಇನ್ನಷ್ಟು ಹೊಸ ಬಸ್ ಬರುವ ನಿರೀಕ್ಷೆಯಿದೆ. ಆದರೂ, ಹಾಲಿ ಸಂಚರಿಸುತ್ತಿರುವ ಬಸ್‌ಗಳನ್ನು ಕಾಲ ಕಾಲಕ್ಕೆ ದುರಸ್ತಿ ಮಾಡಿ, ಉತ್ತಮ ನಿರ್ವಹಣೆ ಮಾಡಬೇಕು. ಸಣ್ಣ ಪುಟ್ಟ ತಾಂತ್ರಿಕ ದೋಷ ಕಂಡುಬಂದರೂ ಅದನ್ನು ಗಂಭೀರವಾಗಿ ಪರಿಗಣಿಸಿ ಸುಧಾರಿಸಬೇಕು ಎಂದು ಸೂಚಿಸಿದರು.

ಪ್ರಧಾನ ಮಂತ್ರಿ ಉಜ್ವಲ ಯೋಜನೆ ವಾರ್ಷಿಕ ಸಿಲಿಂಡರ್ ಸಂಖ್ಯೆ 9ರಿಂದ 4ಕ್ಕೆ ಇಳಿಕೆ



ನವದೆಹಲಿ: ಕೇಂದ್ರ ಸರ್ಕಾರವು ಪ್ರಧಾನ ಮಂತ್ರಿ ಉಜ್ವಲ ಯೋಜನೆಯ ಫಲಾನುಭವಿಗಳಿಗೆ ನೀಡಲಾಗುತ್ತಿದ್ದ ವಾರ್ಷಿಕ ಸಬ್ಸಿಡಿ ಸಿಲಿಂಡರ್‌ಗಳ ಸಂಖ್ಯೆಯನ್ನು 9ರಿಂದ 4ಕ್ಕೆ ಕಡಿತಗೊಳಿಸಿದೆ.

ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಸಂಘರ್ಷ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಎಲ್‌ಪಿಜಿ ಕೊರತೆಯಿಂದಾಗಿ ಸರ್ಕಾರ ಈ ನಿರ್ಧಾರ ತೆಗೆದುಕೊಂಡಿದೆ.

2016ರಲ್ಲಿ ಯೋಜನೆ ಆರಂಭವಾದಾಗ ವರ್ಷಕ್ಕೆ 12 ಸಿಲಿಂಡರ್ ನೀಡಲಾಗುತ್ತಿತ್ತು. ಕಳೆದ ವರ್ಷ ಇದನ್ನು 9ಕ್ಕೆ ಇಳಿಸಲಾಗಿತ್ತು. ಈಗ ಅದನ್ನು ಮತ್ತೆ 4 ಕ್ಕೆ ಕಡಿಮೆ ಮಾಡಲಾಗಿದೆ. 14.2 ಕೆಜಿ ಸಿಲಿಂಡರ್‌ಗೆ ಸಿಗುವ 300 ರೂ. ಸಬ್ಸಿಡಿ ಮುಂದುವರಿಯಲಿದೆ. ಈ ಹಣ ನೇರವಾಗಿ ಗ್ರಾಹಕರ ಬ್ಯಾಂಕ್ ಖಾತೆಗೆ ಜಮೆ ಆಗಲಿದೆ.

ಗೃಹ ಬಳಕೆಯ ಗ್ಯಾಸ್ ಸಿಲಿಂಡರ್ ಬೆಲೆ 942 ರೂ.ಗೆ ಏರಿಕೆಯಾಗಿದೆ. ಹೀಗಾಗಿ 300 ರೂ. ಸಬ್ಸಿಡಿ ಕಡಿತದ ನಂತರ ಉಜ್ವಲ ಗ್ರಾಹಕರು ಪ್ರತಿ ಸಿಲಿಂಡರ್‌ಗೆ 642 ರೂ. ಪಾವತಿಸಬೇಕಾಗುತ್ತದೆ.

ಉಜ್ವಲ ಯೋಜನೆಯಡಿ ಬರುವ ಬಡ ಕುಟುಂಬಗಳು ವರ್ಷಕ್ಕೆ ಸರಾಸರಿ 4 ಸಿಲಿಂಡರ್‌ಗಳಿಗಿಂತ ಹೆಚ್ಚು ಬಳಸುತ್ತಿಲ್ಲ ಎಂದು ಸರ್ಕಾರದ ಸಮೀಕ್ಷೆ ಹೇಳಿದೆ. ಹಾಗಾಗಿ ಸಬ್ಸಿಡಿಯನ್ನು ನಿಜವಾದ ಬಳಕೆಗೆ ತಕ್ಕಂತೆ ಹೊಂದಿಸಲಾಗಿದೆ. ಒಂದು ಗ್ಯಾಸ್ ಸಿಲಿಂಡರ್ ಪೂರೈಸಲು ಸರ್ಕಾರಕ್ಕೆ ಒಟ್ಟು 1,600 ರೂ. ಕ್ಕಿಂತ ಹೆಚ್ಚು ವೆಚ್ಚವಾಗುತ್ತಿದೆ. ಸರ್ಕಾರ ಇದನ್ನು ಸಾಮಾನ್ಯ ಜನರಿಗೆ 942 ರೂ.ಗೆ ಮಾರಾಟ ಮಾಡುತ್ತಿದೆ. ಇದರಿಂದಾಗಿ ಸರ್ಕಾರಿ ತೈಲ ಕಂಪನಿಗಳು ಪ್ರತಿ ಸಿಲಿಂಡರ್ ಮೇಲೆ ಸುಮಾರು 700 ರೂ. ನಷ್ಟ ಅನುಭವಿಸುತ್ತಿವೆ. ತೈಲ ಮಾರುಕಟ್ಟೆ ಕಂಪನಿಗಳು ಪ್ರತಿ ಸಿಲಿಂಡರ್ ಮಾರಾಟದಲ್ಲಿ ದೊಡ್ಡ ನಷ್ಟ ಅನುಭವಿಸುತ್ತಿರುವುದರಿಂದ ಆರ್ಥಿಕ ಹೊರೆಯನ್ನು ಕಡಿಮೆ ಮಾಡಲು ಈ ಕ್ರಮ ಕೈಗೊಳ್ಳಲಾಗಿದೆ.

ಸಾರ್ವಜನಿಕ ಅಧಿಸೂಚನೆಗಾಗಿ

ಈ ಅಧಿಸೂಚನೆ ಮೂಲಕ ಸಾರ್ವಜನಿಕರ ಗಮನಕ್ಕೆ ತರುವ ವಿಷಯ ಏನೆಂದರೆ, ನನ್ನ ಕಕ್ಷಿದಾರರುಗಳಾದ ಶ್ರೀ.ಅನಂತ ಕೃಷ್ಣನ್ ವಿ. ಮತ್ತು ಶ್ರೀ. ವಿಕಾಸ್ ಶಿವಸ್ವಾಮಿ ಎಂ. ರವರುಗಳು ಕ್ರಮವಾಗಿ ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ನಾಗವಾಲ ಗ್ರಾಮದ ಸ.ನಂ. 68, 77, 82, 83, 86, 87, 88, 89, 90 93, 94, 95, 96, 97, 98, 99, 103, 104, 105, 106, 107, 108, 109, 110, 111, 114, 115, 117, 179, 180 ಮತ್ತು ಸ.ನಂ.12, 13, 30, 33, 34, 35, 43, 44, 45, 47, 48, 58, 62, 64 ಹಾಗೂ ಇದರ ಇತರೆ ಪೋಡಿ ಸರ್ವೆ ನಂಬರ್‌ಗಳಲ್ಲಿ ಕರ್ನಾಟಕ ಟೆಲಿಕಾಂ ನೌ.ಗೃ.ನಿ.ಸ.ಸಂಘ ಮತ್ತು M/s ESS & ESS INFRASTRUCTURE PVT.LTD. ರವರುಗಳು ಸೇರಿ ನಿರ್ಮಿಸಿರುವ ಆತ್ಮಾನಂದಸಾಗರ–1 ರಲ್ಲಿ ನಿವೇಶನ ಸಂಖ್ಯೆ 80 ಮತ್ತು, ಆತ್ಮಾನಂದಸಾಗರ–2 ರಲ್ಲಿ ನಿವೇಶನ ಸಂಖ್ಯೆ 10ನೇ ನಂಬರ್ ನಿವೇಶನಗಳನ್ನು, ಸದರಿ ಟೆಲಿಕಾಂ ನೌ.ಗೃ.ನಿ.ಸ.ಸಂಘದವರಿಂದ ಕ್ರಯಕ್ಕೆ ಪಡೆಯುತ್ತಿದ್ದು, ಸದರಿ ಸರ್ವೆ ನಂಬರ್‌ಗಳು ಮತ್ತು ಸದರಿ ನಿವೇಶನಗಳ ಮೇಲೆ ಯಾರಿಗಾದರೂ ಯಾವುದೇ ರೀತಿಯಾದ ಕಾನೂನುಬದ್ಧ ಹಕ್ಕುಬಾಧ್ಯತೆಗಳು, ತಕರಾರುಗಳು ಇದ್ದಲ್ಲಿ ಈ ಸಾರ್ವಜನಿಕ ಅಧಿಸೂಚನೆ ಪ್ರಕಟಗೊಂಡ 7(ಏಳು) ದಿವಸಗಳ ವಾಯಿದೆಯಲ್ಲಿ ಸೂಕ್ತ ನೈಜ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ನನ್ನ ವಿಳಾಸ ಅಥವಾ ದೂರವಾಣಿ ಸಂಖ್ಯೆಗೆ ಸಂಪರ್ಕಿಸತಕ್ಕದ್ದು.

ಈ ಮೇಲ್ಕಂಡ ವಾಯಿದೆಯಲ್ಲಿ ಯಾರಿಂದಲೂ ಯಾವ ರೀತಿಯಾದ ತಕರಾರುಗಳು ಕಂಡುಬಾರದೇ ಇದ್ದಲ್ಲಿ, ಈ ಮೇಲ್ಕಂಡ ಎರಡು ನಿವೇಶನಗಳು ಮೇಲ್ಕಂಡ ಸಂಘದ ಸಂಪೂರ್ಣ ಮಾಲೀಕತ್ವಕ್ಕೆ ಒಳಪಟ್ಟಿರುತ್ತೆ ಎಂದು ಪರಿಗಣಿಸಿ, ಸದರಿ ಸಂಘದಿಂದ ನನ್ನ ಕಕ್ಷಿದಾರರು ಶುದ್ಧಕ್ರಯಪತ್ರ ಮತ್ತು ಇತರೆ ಕಾನೂನಾತ್ಮಕ ದಾಖಲೆಗಳನ್ನು ಪಡೆದುಕೊಂಡು ಸದರಿ ಎರಡು ನಿವೇಶನಗಳ ಸಂಪೂರ್ಣ ಕಾನೂನುಬದ್ಧ ಮಾಲೀಕರುಗಳಾಗುತ್ತಾರೆ ಎಂದು ಈ ಮೂಲಕ ತಿಳಿಯಪಡಿಸಿದೆ. ಮೇಲ್ಕಂಡ ವಾಯಿದೆಯ ನಂತರ ಬರುವ ಯಾವುದೇ ತಕರಾರುಗಳಿಗೆ ನನ್ನ ಕಕ್ಷಿದಾರರುಗಳು ಜವಾಬ್ದಾರರಾಗಿರುವುದಿಲ್ಲ.

ಸಹಿ/– ಆಶೀಶ್ ಕುಮಾರ್ ಎಂ
B.Com. LL.B., ADVOCATE,
ENROLMENT NO: KAR/6206/2024
'DEEDS ASSOCIATES',
Shop No. 2, Property No. 902, Ashraya Layout, Nivedithanagar, Mysore-22.
Date : 09-06-2026 MOB.9739297699

PUBLIC NOTICE

NOTICE is hereby given to the general public that our client is intending to purchase the below mentioned schedule property from its owner Smt. Ruchi Gupta, W/o Naveen Kumar Gupta, R/at #33, 4th Main, V.V.Mohalla, Mysuru. All person/s having any claim against or in respect of schedule property mentioned hereunder are any part thereof by way of sale, exchange, gift, mortgage (equitable/registered or otherwise), Trust, in heritance, family arrangement, maintenance, bequest, partnership, possession, lease, sub-lease, tenancy, license, lien, charge, pledge, easement or otherwise howsoever are hereby requested to notify the same in writing to us with supporting documentary evidence at the address mentioned hereunder within 07 days from the date hereon, failing which the claim/s, if any, of such person/s will be considered to have been waived and or abandoned and our client shall proceed to purchase the schedule property.

DESCRIPTION OF SCHEDULE PROPERTY

All that piece and parcel of the Vacant Site/Property bearing No.58, measuring East to West 30 feet and North to South 40 feet, carved out of alienated land bearing Sy.no.184/2, measuring 03 Acres and 22 Guntas situated at Srirampura Village, Kasaba Hobli, Mysuru Taluk, bounded on; East by : Site bearing No.57, West by : Site bearing No.59, North by : Road, South by : Approved Layout.

Sd/- PRABHU ASSOCIATES
H.P. DARSHAN SHETTY, BAL, LL.B, LL.M, KAR 1367/2012
H.P. GAGAN SHETTY, BBA, LL.B, LL.M, ADVOCATES. KAR 1521/2020
#1533, 1st Floor, Navagraha Temple Street, Agrahara, K.R. Mohalla, Mysuru 570024.
Cell: 9590807007, 8904040406.
Date: 10/06/2026, Place: Mysuru.

PUBLIC NOTICE

The General Public are hereby notified that my client Mr. Zia Ur Rahaman., S/o Mohammed Mujeeb Ur Rehaman, has willing to take Mortgage Loan in Muthoot Housing Finance Co. Ltd., Mysore Branch relating to the Property bearing No.6243321213, Assessment No. 764 LIG-2A, Measuring: East to West: 6.00 Meters, North to South: 14.00 Meters, Total measuring 84 Sq Meters, Build Up area 41.80635 Sq Meters, issued by Mysore City Municipal Council, Situated at No. 764 LIG-2A, 3rd Stage, Devanur extension, N. R. Mohalla, Mysuru Ward No. 10. and My Client purchased the property from Mr. B. R. Venkatappa which has been registered under Document No. MYE-1-14194-2021-22, C. D. No. MYED926, in the SRO Mysore East, even though property allotted from MUDA, Sale deed has not been executed in favour of Mr. B. R. Venkatappa. If any persons have any kind of objections please inform me or contact to the address mentioned below within 07 (Seven) days from the date of this Public Notice.

Sd/- PRAVEEN T.K
Advocate and Legal Consultant
Office: 134, CH-46/6B, 8th Main, 1st Cross, KH Road, Saraswathipuram, Mysore-570009
Date: 06-06-2026, Place: Mysore

47 ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರಾದ ಶ್ರೀ ಪ್ರಶಾಂತ್ ಲಕ್ಷ್ಮಿಕಾಂತ ಬಿನ್ ಶ್ರೀ ಲಕ್ಷ್ಮಿಕಾಂತ ಹೆಚ್ ರವರು ಮೈಸೂರು, ಕುವೆಂಪುನಗರ, ಗಗನಚುಂಬಿ ಜೋಡಿ ರಸ್ತೆ, ಜಿ ಮತ್ತು ಹೆಚ್ ಬ್ಲಾಕ್, ನಂ.1112, ರಲ್ಲಿರುವ ಮೆ: ಸಾಹಾ ಡೆವಲಪರ್ಸ್ & ಪ್ರಮೋಟರ್ಸ್ ಇದರ ಮಾಲೀಕರಾದ ಲೇಟ್ ಶ್ರೀ ಅಶ್ವಥ್ ನಾರಾಯಣರಾವ್ ರವರ ಮಗನಾದ ಶ್ರೀ ಶ್ರೀಕಾಂತ್ ದಾಸ್ ರವರಿಂದ ಖರೀದಿಸಲು ಉದ್ದೇಶಿಸಿದ್ದು, ಈ ಬಗ್ಗೆ ಸಾರ್ವಜನಿಕರಲ್ಲಿ ಏನಾದರು ತಕರಾರು ಇದ್ದಲ್ಲಿ, ಸಂಬಂಧಪಟ್ಟ ದಾಖಲೆಗಳೊಂದಿಗೆ ಈ ಕೆಳಕಂಡವರನ್ನು 15 ದಿನಗಳ ಒಳಗಾಗಿ ಭೇಟಿ ಮಾಡಿ ತಿಳಿಸತಕ್ಕದ್ದು, ತಪ್ಪಿದಲ್ಲಿ ಯಾರಿಂದಲೂ ಯಾವುದೇ ತಕರಾರು/ ಹಕ್ಕುಗಳು ಇಲ್ಲವೆಂದು ಪರಿಗಣಿಸಿ ಕ್ರಯದ ವ್ಯವಹಾರವನ್ನು ಸಂಪೂರ್ಣಗೊಳಿಸಲಾಗುತ್ತದೆ. ತದನಂತರ ಬರುವಂತಹ ಯಾವುದೇ ತಕರಾರು/ ಹಕ್ಕುಗಳಿಗೆ ನನ್ನ ಕಕ್ಷಿದಾರರು ಬದ್ಧರಾಗಿರುವುದಿಲ್ಲ.

: ಷೆಡ್ಯೂಲ್ ಸ್ವತ್ತು :

ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಕೆ. ಹೆಮ್ಮನಹಳ್ಳಿ ಗ್ರಾಮದ ಸರ್ವೆ ನಂಬರ್ 1/3 (ರ ಮಾಲೀಕರುಗಳಾದ ಲೇಟ್ ಶ್ರೀ ಮಲ್ಲಯ್ಯ ಬಿನ್ ಲೇಟ್ ಶ್ರೀ ಜವರೇಗೌಡ ರವರ ಮಕ್ಕಳುಗಳಾದ ಶ್ರೀ ಹೆಚ್ ಎಂ. ಅಣ್ಣಯ್ಯ ಮತ್ತು ಶ್ರೀ ಹೆಚ್ ಎಂ. ಶಿವಣ್ಣ ರವರುಗಳಿಂದ ಖರೀದಿಸಲ್ಪಟ್ಟ) ಒಟ್ಟು ವಿಸ್ತೀರ್ಣ 2 ಎಕರೆ 08 ಗುಂಟೆ ಜಮೀನಿನಲ್ಲಿ ರಚಿಸಿರುವ ಸಾಹಾ ರೀಗಲ್ ವಸತಿ ಬಡಾವಣೆಯ ನಿವೇಶನ ಸಂಖ್ಯೆ 19, ಸ್ವತ್ತಿನ ಸಂಖ್ಯೆ : 9812214680 (ಪಟ್ಟಣ ಪಂಚಾಯತಿ ಬೋಗಾದಿ, ದಾಖಲೆಯ ಪ್ರಕಾರ) ಇದರ ಅಳತೆ ಪೂರ್ವ–ಪಶ್ಚಿಮ: 9.00 ಮೀ ಮತ್ತು ಉತ್ತರ–ದಕ್ಷಿಣ:12.00 ಮೀ ಒಟ್ಟು 108.00 ಚದರ ಮೀಟರ್‌ಗಳ ನಿವೇಶನಕ್ಕೆ ಚಕ್ಕುಬಂದಿ :– ಪೂರ್ವ : ನಿವೇಶನ ಸಂಖ್ಯೆ 18, ಪಶ್ಚಿಮ : ನಿವೇಶನ ಸಂಖ್ಯೆ 20, ಉತ್ತರ : 9.0 ಮೀಟರ್ ರಸ್ತೆ, ದಕ್ಷಿಣ : ನಿವೇಶನ ಸಂಖ್ಯೆ 30.

ಸಹಿ/– ಶ್ಯಾಮ್ ಲಾಲ್ ಶರ್ಮ. ವಿ,
ಬಿ.ಕಾಂ. ಎಲ್.ಎಲ್.ಬಿ. ವಕೀಲರು,
ನಂ.40, 2ನೇ ಮಹಡಿ, ಬಾಲಾಜಿ ಟವರ್ಸ್,
ಜೆ.ಟಿ.ಕೆ ಲೇಔಟ್, 3ನೇ ಹಂತ, ಆದಿಚುಂಚನಗಿರಿ ಮುಖ್ಯ ರಸ್ತೆ, ಕುವೆಂಪುನಗರ, ಮೈಸೂರು–570023
ಮೊಬೈಲ್ ನಂ.7760981205/9632908822
Mail ID: prashant887@gmail.com
ದಿನಾಂಕ : 10–06–2026
ಸ್ಥಳ : ಮೈಸೂರು

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಮಂಡ್ಯ
ದೂರವಾಣಿ ಸಂಖ್ಯೆ: 08232–224027, ಇ–ಮೇಲ್: dho.mandya@gmail.com
ಕಡತ ಸಂಖ್ಯೆ:ಸಿಬ್ಬಂದಿ(01)/09/2026–27 ದಿನಾಂಕ: 08.06.2026

ನೇಮಕಾತಿ ಪ್ರಕಟಣೆ

ಗುತ್ತಿಗೆ ಆಧಾರದ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ/ ತುರ್ತು ಚಿಕಿತ್ಸಾ ವೈದ್ಯಾಧಿಕಾರಿ ಹುದ್ದೆಗೆ ನೇಮಕಕ್ಕೆ ಅರ್ಜಿ ಆಹ್ವಾನ

ಉಲ್ಲೇಖ:–
1. ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಎಫ್‌ಡಬ್ಲ್ಯೂ/619/ಹೆಚ್‌ಎಸ್‌ಹೆಚ್/2022 ದಿನಾಂಕ:17–01–2024 ಸೇರ್ಪಡೆ ಆದೇಶ ದಿನಾಂಕ:11–03–2024
2. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ರವರ ಪತ್ರ ಸಂಖ್ಯೆ:ಜಿಆರ್‌ಒ(1ಎ)/36/2023–24 ದಿನಾಂಕ:13–03–2024
3. ಸರ್ಕಾರದ ಅಧೀನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಸೇವೆಗಳು–1),ಬೆಂಗಳೂರು ರವರ ಸುತ್ತೋಲೆ ಪತ್ರ ಸಂಖ್ಯೆ: HFW/21/HSH/2025 ದಿನಾಂಕ:08.01.2025
4. ಸರ್ಕಾರದ ಅಧೀನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಸೇವೆಗಳು–1), ಬೆಂಗಳೂರು ರವರ ಸೇರ್ಪಡೆ ಪತ್ರ ಸಂಖ್ಯೆ: HFW/1/PRS/2025 ದಿನಾಂಕ:23.01.2025
5. ಮಾನ್ಯ ಜಿಲ್ಲಾಧಿಕಾರಿಗಳು, ಮಂಡ್ಯ ರವರ ಕಛೇರಿ ಟಿಪ್ಪಣಿಯ ದಿನಾಂಕ: 01–06–2026 ರಂದು ನೀಡಿರುವ ಆದೇಶದ ಮೇರೆಗೆ.

ಮಂಡ್ಯ ಜಿಲ್ಲೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಮಂಡ್ಯ ಜಿಲ್ಲೆಯ ವ್ಯಾಪ್ತಿಯಲ್ಲಿನ ಖಾಲಿ ಇರುವ ಪ್ರಾಥಮಿಕ ಆರೋಗ್ಯ ಕೇಂದ್ರ/ ಸಮುದಾಯ ಆರೋಗ್ಯ ಕೇಂದ್ರ/ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಗಳಿಗೆ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ/ ತುರ್ತು ಚಿಕಿತ್ಸಾ ವೈದ್ಯಾಧಿಕಾರಿಗಳ ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ರೋಸ್ಟರ್ ಕಂ–ಮೆರಿಟ್ ಆಧರಿಸಿ, ಮಾಸಿಕ ಸಂಭಾವನೆ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳಿಗೆ ರೂ.60,000/– ರೊಂದಿಗೆ ನೇಮಕ ಮಾಡಲು ಎಂ.ಬಿ.ಬಿ.ಎಸ್.ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳಿಂದ ಅರ್ಜಿಗಳನ್ನು Rolling Advertisement ಆಹ್ವಾನಿಸಲಾಗಿದೆ.

1.ಅರ್ಜಿಗಳು ದೊರೆಯುವ ಸ್ಥಳ ಮತ್ತು ದಿನಾಂಕ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ ಮಂಡ್ಯ ಜಿಲ್ಲೆ, ಮಂಡ್ಯ, ದಿನಾಂಕ:10.06.2026, ಬೆಳಿಗ್ಗೆ 10.30ರರಿಂದ 5.30 ರವರೆಗೆ. 2.ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ:17.06.2026 ಸಮಯ: ಸಂಜೆ 05.30ರ ಒಳಗೆ 3.ಅರ್ಜಿಗಳನ್ನು ಪರಿಶೀಲಿಸುವ ದಿನಾಂಕ:18.06.2026

ನಿಭಂದನೆಗಳು

ನೇಮಕಾತಿಯು ಸರ್ಕಾರದ ಆದೇಶದ ರೀತ್ಯ ಗುತ್ತಿಗೆ ಆಧಾರದ ನೇಮಕಾತಿ ಷರತ್ತು ಮತ್ತು ನಿಭಂದನೆಗಳಿಗೆ ಒಳಪಟ್ಟಿರುತ್ತದೆ

ಸಹಿ/–
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಮಂಡ್ಯ ಜಿಲ್ಲೆ, ಮಂಡ್ಯ

ವಾಕಾಸಂಇ/ಮಂಡ್ಯ/ಶಿರಡಿ ಸಾಯಿ/193/2026–27

ಸಾರ್ವಜನಿಕ ತಿಳುವಳಿಕೆ ಪತ್ರ

ನನ್ನ ಕಕ್ಷಿದಾರರು, ಈ ಕೆಳಗೆ ಅನುಸೂಚಿಯಲ್ಲಿ ನಮೂದಿಸಿರುವ ಸ್ವತ್ತನ್ನು ಅದರ ಮಾಲೀಕರಾದ ಶ್ರೀಮತಿ.ರಾಜಮ್ಮ ಕೋಂ ಲೇಟ್.ಎಸ್.ಪದ್ಮನಾಭಯ್ಯ, ಶ್ರೀ.ಗೋವಿಂದ ಬಿನ್ ಲೇಟ್.ಎಸ್.ಪದ್ಮನಾಭಯ್ಯ, ಶ್ರೀಮತಿ.ಸುಂದರಮ್ಮ ಬಿನ್ ಲೇಟ್.ಎಸ್.ಪದ್ಮನಾಭಯ್ಯ, ಶ್ರೀ.ಶಶಿಕುಮಾರ್ ಬಿನ್ ಲೇಟ್.ಎಸ್.ಪದ್ಮನಾಭಯ್ಯ, ಶ್ರೀ.ಬಿ.ನಾಗರಾಜು ಬಿನ್ ಲೇಟ್.ಬಸವೇಗೌಡ, ಶ್ರೀಮತಿ.ಸರೋಜಮ್ಮ ಕೋಂ ಲೇಟ್ ಬಸವೇಗೌಡ, ಶ್ರೀ.ಶಿವಣ್ಣ ಬಿನ್ ಲೇಟ್.ಬಸವೇಗೌಡ, ಶ್ರೀ.ಡಿ.ಶಿವಕುಮಾರ ಬಿನ್ ಬಿನ್ ಶ್ರೀ.ದೊಡ್ಡಬಸವೇಗೌಡ, ಮತ್ತು ಶ್ರೀ.ದೊಡ್ಡಬಸವೇಗೌಡ, ಪುಟ್ಟಬಸವೇಗೌಡ ರವರುಗಳಿಂದ ಖರೀದಿಸುವ ಈರಾದೆಯನ್ನು ಹೊಂದಿರುವುದು ಸರಿಯಷ್ಟೆ. ಮೇಲ್ಕಂಡರವರುಗಳು ಮಾತ್ರ ಮಾಲೀಕರಾಗಿ ಅನುಸೂಚಿ ಸ್ವತ್ತಿನ ಮೇಲೆ ಹಕ್ಕು, ಆಸಕ್ತಿ ಮತ್ತು ಸೌಮ್ಯಂಗಳಿಗೂ ಒಳಪಟ್ಟು ಸ್ವಾಧೀನದಲಿದ್ದು ಅವರು ವಿಕ್ರಯಿಸಲು, ಪರಭಾರೆ ಮಾಡಲು ಸಂಪೂರ್ಣ ಸ್ವತಂತ್ರರಾಗಿಯೂ ಮತ್ತು ಕಾನೂನು ಪ್ರಕಾರ ಹಕ್ಕುಳ್ಳವರಾಗಿಯೂ ಇರುತ್ತೇವೆ ಎಂದು ಪ್ರತಿಪಾದಿಸುತ್ತಿದ್ದಾರೆ.

ಅನುಸೂಚಿ ಸ್ವತ್ತು ಯಾವುದೇ ಬ್ಯಾಂಕಿಗೆ, ಹಣಕಾಸು ಸಂಸ್ಥೆಗೆ ಅಥವಾ ಯಾವುದೇ ಸಂಘ, ಸಂಸ್ಥೆಗೆ, ನ್ಯಾಸ(ಟ್ರಸ್ಟ್) ಮತ್ತು ಯಾವುದೇ ವ್ಯಕ್ತಿಗೆ ಸಮ್ಮತವಾದ ಮತ್ತು ಕಾನೂನು ಬದ್ಧವಾದ ಹಕ್ಕು ಆಸಕ್ತಿ ಅಂದರೆ, ಆಧಾರ, ಭೋಗ್ಯ, ಗೇಣಿ, ಕ್ರಯ, ದಾನ, ರಿಲೀಸ್, ವ್ಯವಸ್ಥಾ, ಹಿಸ್ಸೆ, ಜೀವನಾಂಶ, ಭಾಗಾಂಶ, ಮೈನರ್ ಹಕ್ಕು, ವಾರಸು ಹಕ್ಕು, ರಹದಾರಿ, ನಿರಂತರವಾಗಿ ಬಳಸಿರುವ (ಹಾದಿ) ಹಕ್ಕು, ಡಿಮಾಂಡ್ ಸಿವಿಲ್, ರೆವಿನ್ಯೂ, ಕ್ರಿಮಿನಲ್, ಕೋರ್ಟ್ ಅಟ್ಯಾಚ್ ಮೆಂಟ್, ದಾವಾ, ಡಿಕ್ರಿ, ಜಪ್ತಿ, ಜಾಮೀನು, ನಿರ್ಧಿಷ್ಟ ಪರಿಹಾರ ಸಾಲ ಬಾಕಿ, ಕರಾರು, ಅಧಿಕಾರ ಪತ್ರ, ಇತರೆ ತಂಟೆ ತಕರಾರು ಇದ್ದಲ್ಲಿ, ಅವರು ಖುದ್ದಾಗಿ ದಾಖಲೆಗಳ ಸಹಿತ ಈ ಪತ್ರಿಕಾ ಪ್ರಕಟಣೆಯಾದ 07 (ಏಳು) ದಿನಗಳ ಒಳಗೆ ಕೆಳಕಂಡ ನನ್ನ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸತಕ್ಕದ್ದು ಅಥವಾ ಲಿಖಿತವಾಗಿ ತಿಳಿಸತಕ್ಕದ್ದು ಎಂದು ಈ ಮೂಲಕ ತಿಳಿಸಲಾಗಿದೆ. ತಪ್ಪಿದಲ್ಲಿ ಅನುಸೂಚಿ ಸ್ವತ್ತಿನ ಸಂಬಂಧ ಯಾರು ಅಧಿಕಾರ ಪತ್ರ ಹೊಂದಿಲ್ಲವೆಂದು ಮತ್ತು ಯಾರಿಗೂ ಯಾವುದೇ ರೀತಿಯ ಹಕ್ಕು, ಆಸಕ್ತಿ, ಸೌಮ್ಯ, ಕ್ಲೈಮ್. ಆಧಾರ, ಸಾಲ ಬಾಕಿ, ಕರಾರು, ಅಧಿಕಾರ ಪತ್ರ, ಇತರೆ ತಂಟೆ ತಕರಾರು ಯಾವುದು ಇರುವುದಿಲ್ಲಾ ಎಂದು ಪರಿಗಣಿಸಿ ನನ್ನ ಕಕ್ಷಿದಾರರು ಅನುಸೂಚಿ ಸ್ವತ್ತಿನ ಸಂಬಂಧ ಕ್ರಯ ಪತ್ರವನ್ನು ಬರೆಯಿಸಿ ನೋಂದಾಯಿಸಿಕೊಳ್ಳುವ ಪ್ರಕ್ರಿಯೆಗೆ ಮುಂದಾಗುತ್ತಾರೆ ಎಂದು ತಿಳಿಯುವುದು. ಆನಂತರದಲ್ಲಿ ಉಂಟಾಗತಕ್ಕ ಯಾವುದೇ ತಂಟೆ ತಕರಾರುಗಳು ನನ್ನ ಕಕ್ಷಿದಾರರನ್ನು ಬದ್ಧಪಡಿಸುವುದಿಲ್ಲವೆಂದು ತಿಳಿಯತಕ್ಕದ್ದು.

ಅನುಸೂಚಿ

ಐಟಂ. ನಂ.1: ಮೈಸೂರು ಜಿಲ್ಲೆ, ಟಿ.ನರಸೀಪುರ ತಾಲ್ಲೂಕು, ಕಸಬಾ ಹೋಬಳಿ, ಕುಪ್ಯ ಗ್ರಾಮದ (ಶ್ರೀಮತಿ.ರಾಜಮ್ಮ ಕೋಂ ಲೇಟ್.ಎಸ್.ಪದ್ಮನಾಭಯ್ಯ, ಮತ್ತು ಇವರ ಮಕ್ಕಳಾದ ಶ್ರೀ.ಗೋವಿಂದ, ಶ್ರೀಮತಿ.ಸುಂದರಮ್ಮ ಮತ್ತು ಶ್ರೀ.ಶಶಿಕುಮಾರ್ ರವರುಗಳ ಸ್ವಾಧೀನಾನುಭವದಲ್ಲಿರುವ) ಸರ್ವೆ ನಂ.50/1ರಲ್ಲಿ 0–20 (ಇಪ್ಪತ್ತು) ಗುಂಟೆ ಜಮೀನಿಗೆ ಚೆಕ್ಕುಬಂದಿ: ಪೂರ್ವಕ್ಕೆ : ರಾಜಮ್ಮ ಮತ್ತು ಇತರರ ಜಮೀನು, ಪಶ್ಚಿಮಕ್ಕೆ : ಶಿವಣ್ಣ ರವರ ಸರ್ವೆ ನಂ.50/8 (ಹಳೇ ನಂ.50/3) ರ ಜಮೀನು, ಉತ್ತರಕ್ಕೆ : ಸೋಮಣ್ಣರವರ ಜಮೀನು, ದಕ್ಷಿಣಕ್ಕೆ : ದೊಡ್ಡಬಸವೇಗೌಡರ ಸರ್ವೆ ನಂ.50/10 (ಹಳೇ ನಂ.50/1) ರ ಜಮೀನು

ಐಟಂ. ನಂ.2: ಮೈಸೂರು ಜಿಲ್ಲೆ, ಟಿ.ನರಸೀಪುರ ತಾಲ್ಲೂಕು, ಕಸಬಾ ಹೋಬಳಿ, ಕುಪ್ಯ ಗ್ರಾಮದ (ಶ್ರೀ.ಬಿ.ನಾಗರಾಜು ಬಿನ್ ಲೇಟ್.ಬಸವೇಗೌಡರವರ ಸ್ವಾಧೀನಾನುಭವದಲ್ಲಿರುವ) ಸರ್ವೆ ನಂ.50/3 ರಲ್ಲಿ 0–10 (ಹತ್ತು) ಗುಂಟೆ ಜಮೀನಿಗೆ ಚೆಕ್ಕುಬಂದಿ: ಪೂರ್ವಕ್ಕೆ : ಸರೋಜಮ್ಮರವರ ಸರ್ವೆ ನಂ.50/7 (ಹಳೇ ನಂ.50/3) ರ ಜಮೀನು, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ಸೋಮಣ್ಣರವರ ಜಮೀನು, ದಕ್ಷಿಣಕ್ಕೆ : ಡಿ.ಶಿವಕುಮಾರ್ ರ ಸರ್ವೆ ನಂ.50/9 (ಹಳೇನಂ.50/1) ರ ಜಮೀನು

ಐಟಂ. ನಂ.3: ಮೈಸೂರು ಜಿಲ್ಲೆ, ಟಿ.ನರಸೀಪುರ ತಾಲ್ಲೂಕು, ಕಸಬಾ ಹೋಬಳಿ, ಕುಪ್ಯ ಗ್ರಾಮದ (ಶ್ರೀಮತಿ.ಸರೋಜಮ್ಮ ಕೋಂ ಲೇಟ್ .ಬಸವೇಗೌಡರವರ ಸ್ವಾಧೀನಾನುಭವದಲ್ಲಿರುವ) ಸರ್ವೆ ನಂ.50/7 (ಹಳೇ ನಂ.50/3) ರಲ್ಲಿ 0–11 (ಹನ್ನೊಂದು) ಗುಂಟೆ ಜಮೀನಿಗೆ ಚೆಕ್ಕುಬಂದಿ: ಪೂರ್ವಕ್ಕೆ: ಶಿವಣ್ಣ ರವರ ಸರ್ವೆ ನಂ.50/8 (ಹಳೇ ನಂ.50/3) ರ ಜಮೀನು ಪೂರ್ವಕ್ಕೆ, ಪಶ್ಚಿಮಕ್ಕೆ : ಬಿ.ನಾಗರಾಜುರವರ ಸರ್ವೆ ನಂ.50/3 ರ ಜಮೀನು, ಉತ್ತರಕ್ಕೆ : ಸೋಮಣ್ಣರವರ ಜಮೀನು, ದಕ್ಷಿಣಕ್ಕೆ : ದೊಡ್ಡಬಸವೇಗೌಡರ ಸರ್ವೆ ನಂ.50/10 (ಹಳೇ ನಂ.50/1) ರ ಜಮೀನು

ಐಟಂ. ನಂ.4: ಮೈಸೂರು ಜಿಲ್ಲೆ, ಟಿ.ನರಸೀಪುರ ತಾಲ್ಲೂಕು, ಕಸಬಾ ಹೋಬಳಿ, ಕುಪ್ಯ ಗ್ರಾಮದ (ಶ್ರೀ.ಶಿವಣ್ಣ ಬಿನ್ ಲೇಟ್.ಬಸವೇಗೌಡರವರ ಸ್ವಾಧೀನಾನುಭವದಲ್ಲಿರುವ) ಸರ್ವೆ ನಂ.50/8 (ಹಳೇ ನಂ.50/3) ರಲ್ಲಿ 0–10 (ಹತ್ತು) ಗುಂಟೆ ಜಮೀನಿಗೆ ಚೆಕ್ಕುಬಂದಿ: ಪೂರ್ವಕ್ಕೆ : ರಾಜಮ್ಮ ಮತ್ತು ಇತರರ ಸರ್ವೆ ನಂ.50/1 ರ ಜಮೀನು, ಪಶ್ಚಿಮಕ್ಕೆ : ಸರೋಜಮ್ಮರವರ ಸರ್ವೆ ನಂ.50/7 (ಹಳೇ ನಂ.50/3) ರ ಜಮೀನು, ಉತ್ತರಕ್ಕೆ : ಸೋಮಣ್ಣರವರ ಜಮೀನು, ದಕ್ಷಿಣಕ್ಕೆ : ದೊಡ್ಡಬಸವೇಗೌಡರ ಸರ್ವೆ ನಂ.50/10 (ಹಳೇನಂ.50/1) ರ ಜಮೀನು

ಐಟಂ. ನಂ.5: ಮೈಸೂರು ಜಿಲ್ಲೆ, ಟಿ.ನರಸೀಪುರ ತಾಲ್ಲೂಕು, ಕಸಬಾ ಹೋಬಳಿ, ಕುಪ್ಯ ಗ್ರಾಮದ (ಶ್ರೀ.ಡಿ.ಶಿವಕುಮಾರ ಬಿನ್ ದೊಡ್ಡಬಸವೇಗೌಡರವರ ಸ್ವಾಧೀನಾನುಭವದಲ್ಲಿರುವ) ಸರ್ವೆ ನಂ.50/9 (ಹಳೇ ನಂ.50/1) ರಲ್ಲಿ 0–22 (ಇಪ್ಪತ್ತೆರಡು) ಗುಂಟೆ ಜಮೀನಿಗೆ ಚೆಕ್ಕುಬಂದಿ: ಪೂರ್ವಕ್ಕೆ : ದೊಡ್ಡಬಸವೇಗೌಡರವರ ಸರ್ವೆ ನಂ.50/10 (ಹಳೇ ನಂ.50/1) ರ ಜಮೀನು, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ಬಿ.ನಾಗರಾಜುರವರು ಸರ್ವೆ ನಂ.50/3 ರ ಜಮೀನು, ದಕ್ಷಿಣಕ್ಕೆ : ರಾಮಬಸವಯ್ಯರವರ ಜಮೀನು

ಐಟಂ. ನಂ.6: ಮೈಸೂರು ಜಿಲ್ಲೆ, ಟಿ.ನರಸೀಪುರ ತಾಲ್ಲೂಕು, ಕಸಬಾ ಹೋಬಳಿ, ಕುಪ್ಯ ಗ್ರಾಮದ (ಶ್ರೀ.ದೊಡ್ಡಬಸವೇಗೌಡ ಬಿನ್ ಪುಟ್ಟಬಸವೇಗೌಡರವರ ಸ್ವಾಧೀನಾನುಭವದಲ್ಲಿರುವ) ಸರ್ವೆ ನಂ.50/10 (ಹಳೇ ನಂ.50/1) ರಲ್ಲಿ 0–30 (ಮೂವತ್ತು) ಗುಂಟೆ ಜಮೀನಿಗೆ ಚೆಕ್ಕುಬಂದಿ: ಪೂರ್ವಕ್ಕೆ : ರಾಜಮ್ಮ ಮತ್ತು ಇತರರ ಜಮೀನು, ಪಶ್ಚಿಮಕ್ಕೆ : ಡಿ.ಶಿವಕುಮಾರ್ ರವರ ಸರ್ವೆ ನಂ.50/9 (ಹಳೇ ನಂ.50/1) ರ ಜಮೀನು, ಉತ್ತರಕ್ಕೆ : ಸರೋಜಮ್ಮರವರ ಸರ್ವೆ ನಂ.50/7 (ಹಳೇ ನಂ.50/1) ರ ಜಮೀನು ಮತ್ತು ಶಿವಣ್ಣ ರವರ ಸರ್ವೆ ನಂ.50/8 (ಹಳೇ ನಂ.50/3) ರ ಜಮೀನು ಹಾಗೂ ರಾಜಮ್ಮ ಮತ್ತು ಇತರರ ಸರ್ವೆ ನಂ.50/1 ರ ಜಮೀನು, ದಕ್ಷಿಣಕ್ಕೆ : ರಾಮಬಸವಯ್ಯರವರ ಜಮೀನು

ಐಟಂ ನಂ.1 ರಿಂದ ಐಟಂ. ನಂ.6 ರವರಗೆ ಒಟ್ಟು ವಿಸ್ತೀರ್ಣ 2 ಎಕರೆ 23 ಗುಂಟೆ

ಸಹಿ/– ವಿ.ವಿ.ಮನುಕುಮಾರ್, ವಕೀಲರು
ನಂ.66/1–ಬಿ1, 1ನೇ ಮಹಡಿ, 5ನೇ ಕ್ರಾಸ್, 3ನೇ ಮೇನ್, ಸರಸ್ವತಿಪುರಂ, ಮೈಸೂರು–570009
ಮೊ: 9448222306
ದಿನಾಂಕ: 08/06/2026
ಸ್ಥಳ: ಮೈಸೂರು